UNIVERSAL
LIBRARY
OU_202251
UNIVERSAL
LIBRARY

ಶ್ರೀ

# ದಾಸಬೋಧ

ತಾಳೀಕೋಟಿಯ

ಶ್ರೀಮತ್ಪರಮಹಂಸ ಶ್ರೀಪದ್ಮನಾಭ ಮಹಾರಾಜ ವಿರಚಿತ

ವೇದಾಂತಗ್ರಂಥ.

ಪ್ರಕಾಶಕ:

ವೆಂಕಟೇಶ ಗಣೇಶ ಗೋವೇಕರ,

ಶ್ರೀಮಠ, ಜಾಡ. (ಕಾರವಾರ.)

ಶ್ರೀ

# ದಾಸಬೋಧ.

ಶ್ರೀಸಮರ್ಥ [illegible] ಮಹಾರಾಜ [illegible]

ಇವರಿಂದ

## ರಚಿಸಲ್ಪಟ್ಟ ವೇದಾಂತ ಗ್ರಂಥವು.

ಪ್ರಕಾಶಕ

**ವೆಂಕಟೇಶ ಗಣೇಶ ಗೋಸೇಕರ.**

[illegible]

[illegible]

[illegible]

ಮುದ್ರಕ

ಎ. ಆರ್. ಶಿವನಾಗಪ್ಪ; ಮಾಲಿಕ, ವಾಗ್ವಿಲಾಸ ಪವರ್ ಪ್ರೆಸ್,

[illegible] ಹುಬ್ಬಳ್ಳಿ.

೧೯೩೩ ನೆಯ ಮಾರ್ಚ.

[illegible]

[illegible]

( [illegible]ಡನೆಯ ಆವೃತ್ತಿ ) ಬೆಲೆ. ( [illegible] )

# ಶ್ರೀ.

# ಉಪೋದ್ಘಾತ.

ಕನ್ನಡ ಭಾಷೆಯಲ್ಲಿ ಇತರ ಭಾಷೆಗಳಿಗಿಂತ ವೇದಾಂತ ಗ್ರಂಥಗಳು ಬಹಳೇ ಕಡಿಮೆ ಇದ್ದದರಿಂದ ಈ ನ್ಯೂನತೆಯನ್ನು ಪೂರ್ಣಮಾಡಬೇಕೆಂಬ ಹೇತುವಿನಿಂದ. ಮತ್ತು ಶ್ರೀಮನ್ನಿರ್ಗುಣ ಶಿವಯೋಗಿ ಮುಂತಾದ ತತ್ವಜ್ಞಾನಿಗಳಿಂದ ರಚಿಸಲ್ಪಟ್ಟ ಗ್ರಂಥಗಳು ಪ್ರಸಿದ್ಧವಾಗಿರುತ್ತಿದ್ದಾಗ್ಯೂ ಅವುಗಳಲ್ಲಿ ಪ್ರಚಾರದಲ್ಲಿಲ್ಲದ ಹಳೇಗನ್ನಡ ಶಬ್ದಗಳು ಇದ್ದುಗಳಲ್ಲಿರುವದರಿಂದ ಆ ಗ್ರಂಥಗಳು ಕಠಿಣ ದುರ್ಬೋಧವಾಗಿರುವವೆಂಬುವದು ಕಂಡು, ಮುಮುಕ್ಷು ಜನರಿಗೆ ಸುಲಭರೀತಿಯಿಂದ ಜ್ಞಾನವಾಗುವಗೋಸ್ಕರ ಶ್ರೀಪರಮಹಂಸ **ಪದ್ಮನಾಭತೀರ್ಥ** ಸ್ವಾಮಿಗಳಿಂದ ನಿಗಮಸಾರವೆಂಬ ಗ್ರಂಥವು ರಚಿಸಲ್ಪಟ್ಟಿತ್ತು. ಅದರಲ್ಲಿ ಹಳೇಗನ್ನಡ ಶಬ್ದಗಳು ಹಾಗು ಸಂಧಿಗಳು ಸೇರಿರುವದರಿಂದ ಅವಿದ್ವಾಂಸರಿಗೆ ತಿಳಿಯುವದು ಕಷ್ಟಸಾಧ್ಯವಾದೀತೆಂಬ ವಿಚಾರದಿಂದ ಇದನ್ನು ಅಚ್ಚಕನ್ನಡದಲ್ಲಿ ಬಹಳ ಸಂಧಿಮಾಡದೇ ಅವರಿಂದೇ ರಚಿಸಲ್ಪಟ್ಟಿತ್ತು.

ಇದನ್ನು ಬಹುಕಾಲದಿಂದ ಪ್ರಸಿದ್ಧಮಾಡಬೇಕೆಂತ ನಾವು ಯತ್ನಿಸುತ್ತಿದ್ದೆವು. ಆದರೆ ಈ ಕೆಲಸದಲ್ಲಿ ಬಂದ ವಿಘ್ನಗಳು ಶ್ರೀ ಗುರುಕೃಪೆಯಿಂದ ಪರಿಹಾರವಾದ್ದರಿಂದ ಲೋಕಹಿತಾರ್ಥವಾಗಿ ಈಗ ಛಾಪಿಸಿರುತ್ತೇವೆ. ಈ ಕೆಲಸಕ್ಕೆ ಬೇಕಷ್ಟು ಉಪಕರಣಗಳ ಮೂಲಕ ಮುದ್ರಿಸದ್ದಾಗ್ಗೆ ಇದರಲ್ಲಿ ತಪ್ಪುಗಳು ಬಹಳವಾಗಿ ಸೇರಿರಬಹುದು. ಆದರೆ ಇದರಲ್ಲಿರುವ ಅರ್ಥದ ಕಡೆಗೆ ಲಕ್ಷ್ಯವಿಟ್ಟು ಓದಿಕೊಂಡು, ಓದುವಾಗ್ಗೆ ದೊರಕಿದ ತಪ್ಪುಗಳನ್ನು ತಿಳಿಸಿದಲ್ಲಿ ಅವರ ಆಭಾರನೆನಿಸಿ ಇದರ ಎರಡನೇ ಆವೃತ್ತಿಯ ವೇಳೆಯಲ್ಲಿ ಆ ತಪ್ಪುಗಳ ತಿದ್ದುಪಡಿಮಾಡುವೆವು. ಮತ್ತು ಆದ ತಪ್ಪುಗಳನ್ನು ಕ್ಷಮಿಸಬೇಕೆಂದು ಸೂಜ್ಞರಿಗೆ ಶರಣಾರ್ಥಿ ಬೇಡಿಕೊಳ್ಳುತ್ತೇವೆ.


ಪ್ರಕಾಶಕ.

## ಪುನರ್ಮುದ್ರಣ.

೧೮೯೫ ನೇ ಇಸ್ವಿಯಲ್ಲಿ ಶ್ರೀಗಳೇ ಮೂಲವಿಯಲ್ಲಿದ್ದಾಗ ತಮ್ಮ ತತ್ವಬೋಧಾಲಯ ಶಿಲಾಯಂತ್ರದಲ್ಲಿ ಮುದ್ರಿಸಿ, ಪ್ರಸಿದ್ಧ ಮಾಡಿಸಿದ ಈ ದಾಸಬೋಧವು ಇದೀಗ ಪುನರ್ಮುದ್ರಣ ವಾಗಿದೆ. ಶ್ರೀಗಳ ಭಾಷೆಯನ್ನು ಅಕ್ಷರಶಃ ಹಾಗೇ ಇಟ್ಟಿದೆ. ಆ ಸೌಂದರ್ಯವಿನ್ನು ಸಿಗಬಹುದೆ? "ನುಡಿ ವೇದವೆನಿಸಿ" ಎಂಬತರಹದ್ದೀ ಭಾಷೆ !

— ತೋ.

॥ ಓಂ ॥




ಶ್ರೀಮತ್ಪರಮಹಂಸ ಪದ್ಮನಾಭಮಹಾರಾಜ ತಾಳೀಕೋಟಿ.

ನಮಃ ಶ್ರೀಪದ್ಮನಾಭಾಯ ಹಂಸರೂಪ ಧರಾಯಚ ।
ಸದಾನಂದ ನಿಮಗ್ನಾಯ ಜಿತಗೋರ್ಗುರುರೂಪಿಣೆ ॥

೧೯೪೪ ನೇ ಇಸ್ವಿ)

ಶಿಷ್ಯ :- ಹರಿ, ಶ್ರೀಪಾದ, ವಾಡೀಕರ.

# ಅನುಕ್ರಮಣಿಕೆಯು.


| ಭಾಗ | ವಿಷಯಗಳು. | ಪೃಷ್ಠ |
|---|---|---|
| ೧ | ಮಂಗಲ, ಪ್ರಸ್ತಾವನೆ, ಮತ್ತು ಪ್ರಯೋಜನಂಗಳು | ೧ |
| ೨ | ಜ್ಞಾನಿ ಮತ್ತು ಅಜ್ಞಾನಿಗಳ ವರ್ತನದೊಳಗಣ ಭೇದಗಳು. | ೨ |
| ೩ | ಜ್ಞಾನಪ್ರಾಪ್ತ್ಯರ್ಥ ಉಪಾಯ | ” |
| ೪ | ಕರ್ಮೋಪಾಸನೆಗಳ ಫಲಗಳು. | ೩ |
| ೫ | ಸಾಧನಚತುಷ್ಟಯ ಕಥನಂ. | ” |
| ೬ | ಮೋಕ್ಷ ಲಕ್ಷಣಂ. | ೪ |
| ೭ | ಸ್ವ ಸ್ವರೂಪ ಲಕ್ಷಣಂ | ೫ |
| ೮ | ನಿರ್ವಿಕಲ್ಪ ಬ್ರಹ್ಮದಲ್ಲಿ ಮಾಯೆ ಹ್ಯಾಗಾಯ್ತು ? ಮುಂತಾದ ಪ್ರಶ್ನೆಗಳು ಮತ್ತು ಅವುಗಳ ಸಮಾಧಾನ | ” |
| ೯ | ಅಹಂಬ್ರಹ್ಮಸ್ಫೂರ್ತಿರೂಪ ಮಾಯೆಯು ಬ್ರಹ್ಮದಲ್ಲಿ ಲೀನವಾಗದೆ ಜಗತ್ಪ್ರಪಂಚ ಮಾಡತಕ್ಕಂಥದ್ದಾಗುವ ಕಾರಣ. | ೬ |
| ೧೦ | ತ್ರಿಗುಣ ಲಕ್ಷಣಂಗಳು. | ೭ |
| ೧೧ | ಪಾಪಪುಣ್ಯಂಗಳ ಲಕ್ಷಣಗಳು, ಮತ್ತು ಫಲಗಳು. | ” |
| ೧೨ | ಅಸ್ವವರ್ಣಾಶ್ರಮಧರ್ಮಗಳು ಶ್ರೇಷ್ಠವಿದ್ವಾಂಸರುಗಳು ಗ್ರಹಣ ಮಾಡುವದಕ್ಕೆ ಯೋಗ್ಯಗಳಲ್ಲ. | ೮ |
| ೧೩ | ಕರ್ಮ ಖಂಡಣಂ. | ೧೦ |
| ೧೪ | ಕರ್ಮಜ್ಞಾನ ಸಮುಚ್ಚಯ ಖಂಡಣಂ. | ೧೧ |
| ೧೫ | ಜ್ಞಾನದಿಂದೇ ನಿರುಪಾಧಿತ್ವ ಸಂಭವಿಸುತ್ತದೆ. | ” |
| ೧೬ | ಪಂಚಧಾ ಮುಕ್ತಿಗಳು. | ೧೨ |
| ೧೭ | ಸದ್ಗುರು ಲಕ್ಷಣ, ಗುರುಗಳಿಗೆ ಶರಣುಹೋಗುವರೀತಿ ಮತ್ತು ಗುರುಭಕ್ತನು ಜ್ಞಾನವಾಗದೆ ಮರಣಹೊಂದಿದಾಗ್ಯೂ ಅವನಿಗುತ್ತಮ ಗತಿಯು. | ೧೪ |
| ೧೮ | ಉಪಕ್ರಮ, ಪಂಚೀಕರಣ, ಪಿಂಡಗಳಲ್ಲಿ ಜೀವರೂಪಗಳಿಂದ ಈಶ್ವರನ ಪ್ರವೇಶ, ಅದರಿಂದವನ ಈಶ್ವರತ್ವಕ್ಕೆ ಹಾನಿಯಿಲ್ಲೆಂಬುವದು, ಈಶಸೃಷ್ಟಿ, ಜೀವಸೃಷ್ಟಿಗಳ ವಿಭಾಗಗಳು | ೧೭ |
| ೧೯ | ಜೀವನು ತನ್ನ ಸೃಷ್ಟಿಯನ್ನು ನಾಶಿಸಿದೊಡೆ ಬ್ರಹ್ಮರೂಪನೇ ಆಗುತ್ತಾನೆ | ೧೮ |
| ೨೦ | ಕೂಟಸ್ಥಲಕ್ಷಣ, ಜೀವಲಕ್ಷಣ. ವಿಶೇಷಣಂಗಳಂ ಬಾಧಿಸಿ ಉಳಿದ ಜೀವನು ಕೂಟಸ್ಥರೂಪನೇ ಇದ್ದಾನೆ. | ೨೬ |
| ೨೧ | ಕೂಟಸ್ಥ ಬ್ರಹ್ಮಂಗಳ ಅಭೇದತೆಯು. | ೨೯ |

| ಭಾಗ. | ವಿಷಯಗಳು. | ಪೃಷ್ಠ. |
|---|---|---|
| ೨೨ | ಮಹಾವಾಕ್ಯವಿವರಣಂ. | ೨೨ |
| ೨೩ | ಜಹದಾದಿ ಮೂರು ಲಕ್ಷಣೆಗಳು, ಮತ್ತು ಭಾಗತ್ಯಾಗ ಲಕ್ಷಣೆಯಿಂದ ಮಹಾವಾಕ್ಯಾರ್ಥವಂ ಮಾಡುವ ಪ್ರಕಾರವು. | ೨೩ |
| ೨೪ | ಮನನ ನಿದಿಧ್ಯಸನಂಗಳ ಪ್ರಕಾರಗಳು. ಅಭ್ಯಾಸದ ಅವಧಿಯು, ಜ್ಞಾನಿಗೆ ಸಂಚಿತಾದಿ ಮೂರು ಕರ್ಮಗಳಿಲ್ಲ | ೨೫ |
| ೨೫ | ಸಂಚಿತಾದಿ ಮೂರು ಕರ್ಮಂಗಳ ಲಕ್ಷಣಗಳು. | ೨೭ |
| ೨೬ | ಜ್ಞಾನಿಗಳ ಸ್ಥಿತಿಯು. | ೨೮ |
| ೨೭ | ಆತ್ಮಾ ಹಾಗು ಜಗತ್ ಇವುಗಳು ವಿರುದ್ಧಧರ್ಮಿಗಳಿದ್ದಾಗ್ಯೂ ಇವುಗಳ ಏಕತ್ವವು. | ,, |
| ೨೮ | ಆತ್ಮಾನಾತ್ಮ ವಿಚಾರವು. | ೨೯ |
| | ಪ್ರಕರಣ | |
| ,, | ೧ ಸ್ಥೂಲದೇಹ ನಿರಸನಂ. | ,, |
| ,, | ೨ ಸೂಕ್ಷ್ಮ ದೇಹ ನಿರಸನಂ | ೩೫ |
| | ವಿಭಾಗ | |
| ,, | ,, ೧ ಸೂಕ್ಷ್ಮ ದೇಹ ನಿರಸನದ ೧ ನೇ ಪ್ರಕಾರವು. | ,, |
| ,, | ,, ೨ ಜ್ಞಾನಿಗಳಿಗೆ ಜೀವನ್ಮುಕ್ತಾವಸ್ಥೆಯೊಳಗೆ ಸ್ಥೂಲ ಸೂಕ್ಷ್ಮಾದ್ಯುಪಾಧಿಗಳಿರುವದಿಲ್ಲ. | ೩೭ |
| ,, | ,, ೩ ಸೂಕ್ಷ್ಮದೇಹವು ಕಲ್ಪನಾಮಾತ್ರವದೆ. | ೩೮ |
| ,, | ,, ೪ ಜೀವನ್ಮುಕ್ತರಿಗೆ ಕೋಟ್ಯವಧಿವಾಸನೆಗಳಿದ್ದಾಗ್ಯೂ ಬಾಧಕಗಳಲ್ಲ. | ೩೯ |
| ,, | ,, ೫ ಸೂಕ್ಷ್ಮದೇಹ ನಿರಸನದ್ದೆರಡನೇ ಪ್ರಕಾರವು. | ೪೦ |
| ,, | ೩ ಕಾರಣದೇಹ ನಿರಸನಂ. | ೪೧ |
| ,, | ೪ ಮಹಾಕಾರಣದೇಹ ನಿರಸನಂ. | ೪೩ |
| ೨೯ | ಗ್ರಂಥ ಪರಿಸಮಾಪ್ತಿ. | ೪೪ |

# ದಾಸಬೋಧ

## ೧ ನೇ ಭಾಗ.

### ಮಂಗಲ, ಪ್ರಸ್ತಾವನೆ ಮತ್ತು ಪ್ರಯೋಜನಂಗಳು.

||ಶ್ಲೋಕ|| ಅಖಂಡಮಾನಂದಮರೂಪಮೇಕ |
ಮದ್ವೈತಮಪ್ರಾಣಮಜಂ ಸುಶಾಂತಂ ||
ನಿತ್ಯಂ ನಿರಾಕಾರಮಕಲ್ಪಕಂತಂ |
ಸ್ವಯಂಪ್ರಕಾಶಂ ಸತತಂ ನಮಾಮಿ || ೧ ||
ಪರಾತ್ಪರಂ ಶುದ್ಧಮಕಲ್ಮಷಂ ಶಿವಂ |
ನಿರಿಂದ್ರಿಯಂ ಪೂರ್ಣಮಭಿದ್ರಮಕ್ಷರಂ ||
ಅಗ್ರಾಹ್ಯಮದೃಶ್ಯ ಮಭೇದಮದ್ವಯಂ |
ಸ್ವಯಂಪ್ರಕಾಶಂ ಸತತಂ ನಮಾಮಿ ತಂ || ೨ ||

ಒಬ್ಬಾನೊಬ್ಬ ಪುಣ್ಯವಂತ ಮನುಷ್ಯನು ಸರ್ವಸಂಸಾರ ದುಃಖ ರೂಪವವೆಂದರಿದು ಅದನ್ನುಬಿಟ್ಟು ಸದ್ಗುರುವಿಗೆ ಶರಣಹೋದನು ಅಲ್ಲಿ ನಿರಂತರವಲ್ಲಿ ಗುರುಸೇವೆಯನ್ನು ಮಾಡುತ್ತಿರಲಾಗಿ ಒಂದಾನೊಂದು ದಿವಸ ಏಕಾಂತಸ್ಥಲದಲ್ಲಿ ಪ್ರಸನ್ನವದನ ಸದ್ಗುರುಗಳನ್ನು ನೋಡಿ ಸಾಷ್ಟಾಂಗ ಪ್ರಣಿಪಾತವಂ ಮಾಡಿ ನನ್ನದೊಂದು ವಿಜ್ಞಾಪನೆಯುದೆಂದು ಪ್ರಾರ್ಥಿಸಿದನು. ಆ ಮೇಲೆ ಗುರುಗಳು ಅಭಯವಂ ಕೊಟ್ಟಮೇಲೆ ಪ್ರಶ್ನೆಮಾಡಲಾರಂಭಿಸಿದನು.

**ಶಿಷ್ಯ:—** ಹೇ ಗುರುಗಳೇ ಈ ಜೀವಂಗೆ ಬಂಧ ಯಾವದು? ಇದನ್ನೆನಗೆ ದಯಮಾಡಿ ಹೇಳಬೇಕು,

**ಗುರುಗಳು:—** ಹೇ ಬಾಲಕಾ ಸ್ವಸ್ವರೂಪದ ಅಜ್ಞಾನವೇ ಬಂಧವು.

**ಶಿಷ್ಯ:—** ಹೇ ದಯಾಸಾಗರಾ ಮೋಕ್ಷವು ಯಾತರಿಂದಾಗುತ್ತದೆ ?

**ಗುರುಗಳು:—** ಸ್ವ ಸ್ವರೂಪದ ಜ್ಞಾನದಿಂದ.

## ೨ನೇ ಭಾಗ.

### ಜ್ಞಾನೀ ಮತ್ತು ಅಜ್ಞಾನೀ ಜನರ ವರ್ತನದೊಳಗಣ ಭೇದಗಳು.

**ಶಿಷ್ಯ.—** ಜ್ಞಾನೀ ಹಾಗಜ್ಞಾನಿಗಳ ವರ್ತನದಲ್ಲಿ ಭೇದವಾವದು ?

**ಗುರುಗಳು:—** ಅಜ್ಞಾನಿಯು ತಾನು ತನ್ನನ್ನು ತಿಳಿಯದನೇಕ ವಿಕಾರಗಳುಳ್ಳ, ಜಡ, ನಾಶಿವಂತ, ದುಃಖರೂಪವಾದ ಸ್ಥೂಲ, ಸೂಕ್ಷ್ಮ, ಕಾರಣವೆಂಬ ದೇಹತ್ರಯದಲ್ಲಿ ಅಹಂಕಾರ, ಹಾಗಿದರಲ್ಲಯೂ ಅನ್ಯ ಪದಾರ್ಥಗಳಲ್ಲಿಯೂ ಮಮಕಾರಂಗಳನ್ನು ವಹಿಸಿ; ಅವುಗಳು ವಿಕಾರಿಗಳಿದ್ದ ಕಾರಣ ಚಿಂತೆ ದುಃಖಂಗಳನ್ನು ನಿರಂತರದಲ್ಲಿ ಮಾಡುತ್ತಿರುತ್ತಾನೆ. ಮತ್ತು ಜ್ಞಾನಿಯು ನಾನು ಸಚ್ಚಿದಾನಂದ ಪರಿಪೂರ್ಣಾದ್ವಯಾದ್ವೈತನಿದ್ದೇನೆ, ಹಾಗೂ ಸರ್ವದ್ವೈತವೆನ್ನ ಮೇಲೆ ಕಲ್ಪಿತವದೆಂದೊಡೆ ಸತ್ಯತ್ವದಿಂದದು ಇಲ್ಲೇ ಇಲ್ಲ ಈ ಪ್ರಕಾರ ತಿಳಿಯುತ್ತಾನೆ; ಆದಕಾರಣ ಚಿಂತೆ ಶೋಕಂಗಳಂ ಮಾಡುವದಿಲ್ಲ. ಅಜ್ಞಾನಿಯು ತಾನೇ ದೇಹವೆಂದು ತನ್ನನ್ನು ತಿಳಿಯುತ್ತಾನೆ; ಆ ಕಾರಣ ತನ್ನ ಸಂರಕ್ಷಣದ್ದೇಶೆಯಿಂದ ವಿಷಯಂಗಳನ್ನಿಚ್ಛಿಸುತ್ತಾನೆ, ಮತ್ತು ಜ್ಞಾನಿಯು ತನ್ನನ್ನು ಬ್ರಹ್ಮರೂಪದಿಂ ನೋಡುತ್ತಾನಾದಕಾರಣ ಬ್ರಹ್ಮಕ್ಕೆ ವಿಷಯಂಗಳ ಜರೂರವಿಲ್ಲಾದ್ದರಿಂದ ವಿಷಯೇಚ್ಛೆ ಮಾಡುವದಿಲ್ಲ. ಅಜ್ಞಾನಿಯು ತಾನೇ ಆನಂದರೂಪನೆಂದರಿಯುವದಿಲ್ಲಾದ್ದರಿಂದ ವಿಷಯಗಳಿಂದೇ ಸುಖವಾಗುತ್ತದೆಂದು ತಿಳಿಯುತ್ತಾನೆ; ಮತ್ತು ಜ್ಞಾನಿಯು ತಾನೇ ಆನಂದ ನೆಂದರಿದಕಾರಣ ತನ್ನಿಂದೇ ತೃಪ್ತನಾಗಿರುತ್ತಾನೆ. ಅಜ್ಞಾನಿಯು ಸ್ವದೇಹ ಮತ್ತು ಸ್ವಕುಟುಂಬಗಳ ಪೋಷಣೆದ್ದೇಶೆಯಿಂದ ಹ್ಯಾಗೆ ಪ್ರಯತ್ನಮಾಡುತ್ತಾನೋ ಹಾಗೆ ಜ್ಞಾನಿಯು ಪ್ರಯತ್ನವಂ ಮಾಡಿದೊಡೆ ಅದೆಲ್ಲ ಜಗತ್ಯದ ಸತ್ಯ ಹಿತಾರ್ಥವಾಗಿರುವದು. ಪರಂತು ಅಜ್ಞಾನಿಗೆ ಆ ಪ್ರಯತ್ನದಲ್ಲ ಸತ್ಯಬುದ್ಧಿ ಯಿದ್ದಮೂಲಕ ಅದು ಸಿದ್ಧಿಗೆ ಹೋಗದಿದ್ದೊಡೆ ಹ್ಯಾಗೆ ದುಃಖವಾಗುತ್ತದೋ, ಹಾಗೆ ಜ್ಞಾನಿಗೆ ಅದರಲ್ಲಿ ಸತ್ಯತ್ವಬುದ್ಧಿ ಯಿಲ್ಲಾದ್ದರಿಂದಾಗುವದಿಲ್ಲ

## ೩ನೇ ಭಾಗ.

### ಜ್ಞಾನಪ್ರಾಪ್ತ್ಯರ್ಥ ಉಪಾಯ.

**ಶಿಷ್ಯ:—** ಜ್ಞಾನಪ್ರಾಪ್ತಿಯ ದೆಶೆಯಿಂದೇನು ಮಾಡಬೇಕು ?

**ಗುರುಗಳು:—** ತನ್ನ ವರ್ಣಾಶ್ರಮಗಳಿಗಾವಾವ ಕರ್ಮಗಳು ಮಾಡಲುಚಿತವೆಂದು ವೇದಶಾಸ್ತ್ರಂಗಳಲ್ಲಿ ಹೇಳಿರುತ್ತದೋ ಆ ಕರ್ಮಂಗಳಂ ಮಾಡುತ್ತಿರಬೇಕು, ಮತ್ತು ಅವಿಹಿತ ಕರ್ಮಂಗಳಿಂದೆಲ್ಲಪ್ರಕಾರಗಳಿಂದ ತನ್ನ ಅಹಿತವೇ ಆಗುವದೆಂದರಿದು ಅವುಗಳನ್ನು ಮಾಡಬಾರದು. ಈಶ್ವರನ ಭಜನೆ, ಪೂಜನೆ, ಧ್ಯಾನ, ಮುಂತಾದುಪಾಸನೆಯನ್ನು ಅವಶ್ಯವಾಗಿ ಮಾಡಬೇಕು

## ೪ನೇ ಭಾಗ.

### ಕರ್ಮೋಪಾಸನೆಗಳ ಫಲಗಳು.

**ಶಿಷ್ಯ:—** ವಿಹಿತಕರ್ಮ ಮತ್ತು ಉಪಾಸನೆ ಇವುಗಳ ಫಲಗಳಾವಾವು ? ಇವನ್ನೆನಗೆ ತಿಳಿಯುವಂತೆ ಹೇಳಬೇಕು.

**ಗುರುಗಳು:—** ವಿಹಿತ ಕರ್ಮವಂ ಮಾಡೋಣದರಿಂದ ಸ್ವರ್ಗಾದ್ಯಮುತ್ರದೊಳಗಣ ಅಥವಾ ಇಹಲೋಕದೊಳಗಣ ಭೋಗಗಳ ಕಾಮನೆ ಯಿದ್ದೊಡೆ ದೇಹ ಪ್ರಾಪ್ತವಾಗಿ ಅದು ಸಫಲವಾಗಿ ಸ್ವಲ್ಪ ಚಿತ್ತಶುದ್ಧಿಯಾಗುತ್ತದೆ ಮತ್ತು ಈಶ್ವರಾರ್ಪಣವಾಗಲೆಂದು ಮಾಡಿದೊಡೆ ಸಕಲಪಾಪಂಗಳ ಕ್ಷಯವಾಗಿ ಚಿತ್ತ ಶುದ್ಧವಾಗುತ್ತದೆ. ಉಪಾಸನೆಯಿಂದ ಚಿತ್ತವು ಏಕಾಗ್ರವಾಗುತ್ತದೆ, ಮತ್ತು ಹೀಗಾದೊಡೆ ನಾಲ್ಕು ಸಾಧನಗಳು ತಮ್ಮಿಂದತಾವೇ ಉದ್ಭವಿಸಲಾರಂಭಿಸುತ್ತವೆ.

## ೫ನೇ ಭಾಗ.

### ಸಾಧನ ಚತುಷ್ಟಯ ಕಥನಂ.

**ಶಿಷ್ಯ:—** ನಾಲ್ಕು ಸಾಧನಗಳಾವಾವು?

**ಗುರುಗಳು:—** ವಿವೇಕ, ವೈರಾಗ್ಯ, ಶಮಾದಿಷಟ್ಕ, ಮುಮುಕ್ಷುತ್ವವು.

**ಶಿಷ್ಯ:—** ವಿವೇಕವೆಂದೊಡೇನು ?

**ಗುರುಗಳು:—** ನಿತ್ಯವಸ್ತುವಾವದು ಮತ್ತು ಅನಿತ್ಯವಸ್ತುವಾವದೆಂಬದನ್ನು ವಿಚಾರಿಸಿ, ಒಬ್ಬಾತ್ಮನೇ ನಿತ್ಯನಿದ್ದಾನೆ, ತದನ್ಯತ್ಸರ್ವಪದಾರ್ಥಗಳನಿತ್ಯ ಅವೆ ಈ ಪ್ರಕಾರ ನಿಶ್ಚೈಸುವದೇ ವಿವೇಕವು.

**ಶಿಷ್ಯ:—** ಹೇ ನಿಃಸಂಗನೇ ವೈರಾಗ್ಯವೆಂದೊಡೇನು ?

**ಗುರುಗಳು:—** ಆತ್ಮಪ್ರಾಪ್ತಿಯಹೊರ್ತು ಅನ್ಯಪದಾರ್ಥವನ್ನಿಚ್ಛೈಸದಿರುವದು

**ಶಿಷ್ಯ:—** ಶಮಾದಿ ಷಟ್ಕವೆಂದೊಡೇನು ?

**ಗುರುಗಳು:—** ಶಮ, ದಮ, ತಿತಿಕ್ಷೆ, ಉಪರತಿ, ಶ್ರದ್ಧೆ, ಸಮಾಧಾನಗಳೆಂಬಾರು ಕೂಡಿದ್ದಕ್ಕೆ ಶಮಾದಿಷಟ್ಕವೆಂದೆನ್ನುತ್ತಾರೆ.

**ಶಿಷ್ಯ:** - ಶಮವೆಂಬೋದೇನು ?

**ಗುರುಗಳು:**— ವಿಷಯದಕಡೆಗೆ ಹೋದಂಥ ಮನಸ್ಸನ್ನ ಒಂದಕ್ಕೆ ತಿರಿಗಿಸುವದು.

**ಶಿಷ್ಯ:**— ಹೇ ವಿಜಿತೇಂದ್ರಿಯನೇ ದಮವೆಂಬೋದೇನು ?

**ಗುರುಗಳು.**— ವಿಷಯದಕಡೆಗೆ ಹೋಗುವಂಥ ಇಂದ್ರಿಯಂಗಳಂ ಆಕರ್ಷಿಸುವದು.

**ಶಿಷ್ಯ:**— ತಿತಿಕ್ಷೆಯೆಂಬೋದೇನು ?

**ಗುರುಗಳು:**— ತನಗನ್ಯಾಯವಂ ಮಾಡಿದಾಗ್ಯಾದರೂ ತನಗೆ ತ್ರಾಸವಂ ಕೊಟ್ಟರದನ್ನ ಕೋಪವಿಲ್ಲದೆ ಸಹನಮಾಡುವದು.

**ಶಿಷ್ಯ:**— ಉಪರತಿಯೆಂಬೋದೇನು ?

**ಗುರುಗಳು:**— ಸವ ಕರ್ಮಂಗಳನ್ನು ತತ್ಸಾಧನವನಾದ ಸ್ತ್ರೀ ಪುತ್ರ, ಧನಾದಿಗಳನ್ನು ತ್ಯಜಿಸುವದು.

**ಶಿಷ್ಯ** — ಹೇ ತಂದೆಯೇ ಶ್ರದ್ಧೆಯೆಂಬೋದೇನು ?

**ಗುರುಗಳು**— ಗುರು ವೇದಾಂತ ವಾಕ್ಯಂಗಳೊಳಗೆ ವಿಶ್ವಾಸವು

**ಶಿಷ್ಯ:**— ಹೇ ಶಾಂತಾ ಸಮಾಧಾನವೆಂಬೋದೇನು ?

**ಗುರುಗಳು.**— ವೇದಾಂತಶ್ರವಣಸ್ಥಿತಿಯಿಂದ ಮನಸ್ಸನ್ನು ಸ್ಥಿರವಿಡುವದು.

**ಶಿಷ್ಯ:**— ಮುಮುಕ್ಷುತ್ವ ವೆಂಬೋದೇನು ?

**ಗುರುಗಳು:**— ಮೋಕ್ಷದ ದೃಢತರದ ಇಚ್ಛೆಯು.

## ೬ ನೇ ಭಾಗ.

### ಮೋಕ್ಷ ಲಕ್ಷಣಂ

**ಶಿಷ್ಯ:**— ಮೋಕ್ಷವೆಂಬೋದೇನು ?

**ಗುರುಗಳು** — ಹೇ ವತ್ಸ ಇದರುತ್ತರವಂ ಆರಂಭದಲ್ಲಿಯೇ ನಿನಗೆ ಹೇಳಿದೆ; ಪರಂತು ಅದು ನಿನಗೆ ತಿಳಿಯಲಿಲ್ಲೆಂದು ತೋರುತ್ತಿರುವದರೆ ಪುನಃ ಹೇಳುತ್ತೇನೆ ಶ್ರವಣಮಾಡು. ಎಲ್ಲ ದುಃಖಗಳಿಗೆ ಜನ್ಮವೇ ಕಾರಣವು ಜನ್ಮಕ್ಕೆ ಕಾರಣ ಪಾಪವು. ಪಾಪಕ್ಕೆ ಚ್ಛಿದ್ಭೇದಮುಂತಾದವುಗಳು ಅವುಗಳಿಗೆ ದ್ವೈತ ಸತ್ಯವದೆ ಮತ್ತು ನಾನು ದೇಹ ಪ್ರಾಣಾದಿಗಳಿದ್ದೇನೆಂಬ ಭಾವವು .ಈ ವಿಪರೀತ ಜ್ಞಾನಕ್ಕೆ ಕಾರಣ ಸ್ವಸ್ವರೂಪದ ಅಜ್ಞಾನವು. ಹೀಗಿದ್ದ ಕಾರಣ ಸ್ವಸ್ವರೂಪದ ಜ್ಞಾನದಿಂ ಆ ಅಜ್ಞಾನವಂ ನಾಶಿಸಿದೊಡೆ ವೃಕ್ಷದ ಬೊಡ್ಡಿಯನ್ನು

ಕಡಿದೊಡೆ ಆ ಪತ್ರಮೂಲವೃಕ್ಷವು ಹ್ಯಾಗೆ ತನ್ನಿಂದತಾನೇ ನಾಶವಾಗುತ್ತದೋ ಹಾಗೆಯೇ ಈ ಸಂಸಾರವು ನಷ್ಟವಾಗುತ್ತದೆ. ಈ ಪ್ರಕಾರ ಸರ್ವ ದುಃಖಂಗಳಿಂದ ನಿವೃತ್ತನಾದಕಾರಣ ಜ್ಞಾನಿಯು ಸಹಜನೇ ಪರಮಾನಂದ ರೂಪನಾಗುತ್ತಾನೆ, ಇದಕ್ಕೆ ಮೋಕ್ಷವೆಂದನ್ನುತ್ತಾರೆ

## ೭ನೇ ಭಾಗ.

### ಸ್ವಸ್ವರೂಪಲಕ್ಷಣ.

**ಶಿಷ್ಯ** — ಹೇ ದಯಾಬ್ಧೇ ಸ್ವಸ್ವರೂಪವೆಂದರೇನು ?

**ಗುರುಗಳು** — ಪರಿಪೂರ್ಣ ಏಕರಸ ಅದ್ವಯ ಅಪ್ರಾಕೃತ ತ್ರಿವಿಧ ಪರಿಚ್ಛೇದ ರಹಿತ ನಿರ್ವಿಕಲ್ಪ ನಿರಾಕಾರ ನಿತ್ಯಮುಕ್ತ ನಿತ್ಯಬುದ್ಧ ನಿತ್ಯಶುದ್ಧ „ಸ್ವಭಾವವಾದ ಬ್ರಹ್ಮವೇ ಸ್ವಸ್ವರೂಪವು ಪರಂತು ಉಕ್ತನಾಮಗಳಿಂದರಿವಕ್ಕಿಲ್ಲ; ಯಾಕೆಂದೊಡೆ ಇದರಲ್ಲಿ ವಾಚನಾದಿಗಳ ಸ್ಪರ್ಶವಿಲ್ಲ ಶ್ರುತಿಯಾದರಿದೇ ಪ್ರಕಾರ ಹೇಳುತ್ತದೆ ಶ್ರುತಿ **(ಯತೋ ವಾಚೋನಿವರ್ತಂತೇ ಅಪ್ರಾಪ್ಯ ಮನಸಾ ಸಹ.)**

## ೮ನೇ ಭಾಗ.

### ನಿರ್ವಿಕಲ್ಪ ಬ್ರಹ್ಮದಲ್ಲಿ ಮಾಯೆ ಹ್ಯಾಗಾಯಿತು ಮುಂತಾದ ಪ್ರಶ್ನೆಗಳು ಮತ್ತು ಅವುಗಳ ಸಮಾಧಾನ.

**ಶಿಷ್ಯ** — ನಿತ್ಯಶುದ್ಧ ಬುದ್ಧ ಬ್ರಹ್ಮದಲ್ಲಿ ಅಜ್ಞಾನವು ಹ್ಯಾಗಾಯಿತು ?

**ಗುರುಗಳು.**— ಹೇ ವತ್ಸ ಬ್ರಹ್ಮದಲ್ಲಿ ಜ್ಞಾನಾಜ್ಞಾನಗಳು ಸತ್ಯತ್ವದಿಂ ಉತ್ಪನ್ನವಾಗಿಲ್ಲ; ಅಹಂಬ್ರಹ್ಮ ಕಲ್ಪನೆಯಲ್ಲಿ ಮಾತ್ರ ಭಾಸಿಸಿದವು.

**ಶಿಷ್ಯ** — ಬ್ರಹ್ಮವು ನಿತ್ಯನಿರ್ವಿಕಲ್ಪಕವಿರಲಾಗಿ ಅದರೊಳಗೆ ಅಹಂ ಬ್ರಹ್ಮಕಲ್ಪನೆ ಯುತ್ಪನ್ನವಾಗಲಿಕ್ಕೆ ಕಾರಣವೇನು ?

**ಗುರುಗಳು** —ವಿಚಾರದಿಂ ನೋಡಿದೊಡೆ ಬ್ರಹ್ಮದಲ್ಲಿ ಕಲ್ಪನೆಯುತ್ಪನ್ನವೇ ಆಗಿಲ್ಲ ಪರಂತು ಉಪಕ್ರಮಹೇಳುವಾಗ್ಗೆ ಅನಾದಿಕಾಲದಲ್ಲಿ ಉತ್ಪನ್ನವಾಯಿತೆಂದು ಹೇಳುತ್ತಾರೆ ವಿಚಾರದೃಷ್ಟ್ಯಾ ಕಲ್ಪನೆಯುತ್ಪನ್ನವಾಯಿತೆಂದೆಂಬುವದು ಅಥವಾ ಇಲ್ಲೆಂದೆಂಬುವದಾದರೂ ಕಲ್ಪನೆಯೇ ಇರುವದು. ನಿರ್ವಿಕಲ್ಪ ವಸ್ತುವಿನಲ್ಲಿ ಪ್ರಶ್ನೋತ್ತರಾದಿಗಳು ಸಂಭವಿಸುವದಿಲ್ಲ ಇದರದೆಶೆಯಿಂದ ಬ್ರಹ್ಮದಲ್ಲಿ ಕಲ್ಪನೆ ಯುತ್ಪನ್ನವೇ ಆಗಿಲ್ಲ ಇದೇ ಸತ್ಯವು ಕದಾಚಿತ್ ಮಂದಾಧಿಕಾರಿಗಳಿಗೆ ಉಪಕ್ರಮವಂ ಹೇಳುವಗೋಸ್ಕರ ಅಹಂಬ್ರಹ್ಮಸ್ಫೂರ್ತಿರೂಪ ಮಾಯೆಯುತ್ಪನ್ನವಾಯಿತೆಂದು

ಹೇಳಿದಾಗ್ಯೂ ಅದು ಬ್ರಹ್ಮಕ್ಕೆ ವಿಕಾರಮಾಡುವಂಥಾದ್ದಾಗುವದಿಲ್ಲ. ಹ್ಯಾಗೆಂದೊಡೆ ಬ್ರಹ್ಮವು ನಾನೇ ಬ್ರಹ್ಮವೆಂದಲ್ಲಿ ಅವಕ್ಕೆ ದೋಷವಾವದು ?

## ೯ ನೇ ಭಾಗ.

### ಅಹಂಬ್ರಹ್ಮ ಸ್ಫೂರ್ತಿರೂಪ ಮಾಯೆಯು ಬ್ರಹ್ಮದಲ್ಲಿ ಲೀನವಾಗದೆ ಜಗತ್ಪವಂ ಮಾಡತಕ್ಕಂಥದ್ದಾಗುವ ಕಾರಣ.

**ಶಿಷ್ಯ:**— ಬ್ರಹ್ಮದಲ್ಲಿ ಅಹಂಬ್ರಹ್ಮಸ್ಫೂರ್ತಿರೂಪ ಮಾಯೆಯುಂಟಾಯ್ತು; ಅದು ಯಥಾರ್ಥವಿದ್ದು ಬ್ರಹ್ಮಕ್ಕೆ ವಿಷಯ ಮಾಡುವಂಥದ್ದಾದೆ ಆದಕಾರಣ ಅದು ಬ್ರಹ್ಮದಲ್ಲಿ ಲೀನವಾಗಬೇಕು. ಪರಂತು ಹಾಗಾಗದೆ ಜಗತ್ತವಂ ಮಾಡ ತಕ್ಕಂಥಾದ್ದು ಹ್ಯಾಗಾಯ್ತು ?

**ಗುರುಗಳು:**— ಅಹಂಬ್ರಹ್ಮಸ್ಫೂರ್ತಿಯಲ್ಲಿ ದಾರುವಾಡದೆ ಜಗತ್ತಕ್ಕೆ ಕಾರಣವಾದ ಪಂಚಮಹಾಭೂತಗಳು ಮತ್ತು ಮೂರುಗುಣಗಳುತ್ಪನ್ನವಾದವು.

**ಶಿಷ್ಯ:**— ಅವು ಹ್ಯಾಗೆ ?

**ಗುರುಗಳು:**— ಅಹಂಬ್ರಹ್ಮ ಕಲ್ಪನೆಗೆ ದಾವ ಅವಕಾಶವೋ ಅದೇ ಆಕಾಶವು. ಆವ ಚಾಂಚಲ್ಯವೋ ಅದೇ ವಾಯು. ವಾಯುವಿನೊಳಗೆ ಸೀತೋಷ್ಣಗಳೆಂಬ ಭೇದಗಳಿದ್ದೇ ಇರುತ್ತವೆ; ಅವುಗಳೊಳಗಣ ಉಷ್ಣತ್ವವೇ ಅಗ್ನಿಯು. ಮತ್ತು ಶೀತತ್ವವೇ ಆಪವು. ವಾಯುವಿನ ಜಡತ್ವದಿಂ ಗಿಡಗಳು ಮುರಿಯುತ್ತವೆ; ಆವಕಾರಣ ವಾಯುವಿನೊಳಗೆ ಜಡತ್ವವದೆ; ಅದೇ ಪೃಥ್ವಿಯು. ನಾನೇ ಬ್ರಹ್ಮವೆಂಬ ಯಥಾರ್ಥಜ್ಞಾನವೇ ಸತ್ವಗುಣ, ನಾನೆಂಬ ಹಂಕಾರವೇ ರಜೋಗುಣ, ಮತ್ತು ಅಬ್ರಹ್ಮ ಪದಾರ್ಥವಿಲ್ಲದೆ ನಾನೇ ಬ್ರಹ್ಮವೆಂಬುವದೇ ಮೂಢತ್ವ ಅದೇ ತಮೋಗುಣವು. ಅಹಂಬ್ರಹ್ಮಸ್ಫೂರ್ತಿರೂಪ ಮಾಯೆಯಲ್ಲಿ ವ್ಯಾಪಕಚೈತನ್ಯ ಮತ್ತು ಪ್ರತಿಬಿಂಬಿತ ಚೈತನ್ಯಗಳು ಕೂಡಿ ಆವ ಈಶನೋ ಆವನು ಮಾಯಾಭಿಮಾನಿ ಯಿದ್ದದ್ದರಿಂದ ಮಾಯೆಯಲ್ಲಿದ್ದ ಮೂರು ಗುಣಗಳು ಆತನಲ್ಲಿರುತ್ತವೆ. ಪರಂತು ಅವು ಶುದ್ಧಅವೆ. ಜೀವನ ಗುಣಂಗಳಂತೆ ಮಲೀನಗಳಲ್ಲ. ಆ ಗುಣಂಗಳಯೋಗದಿಂ ಈಶ್ವರನು ರಜೋಗುಣದಿಂದುತ್ಪತ್ತಿ, ಸತ್ವಗುಣದಿಂ ಸ್ಥಿತಿ ಮತ್ತು ತಮೋಗುಣದಿಂ ಲಯವಂ ಮಾಡಿದನು. ಈ ಪ್ರಕಾರ ಮಾಯೆಯು ಜಗತ್ತಕ್ಕೆ ವಾಸ್ತವೀಕ ಕಾರಣ ವಲ್ಲದೆ ಜಗತ್ತವಂ ಮಾಡತಕ್ಕಂಥಾದ್ದಾಯ್ತು.

## ೧೦ ನೇ ಭಾಗ.

### ತ್ರಿಗುಣ ಲಕ್ಷಣಂಗಳು.

**ಶಿಷ್ಯ:**— ಸತ್ವಗುಣವೆಂದೊಡೇನು ?

**ಗುರುಗಳು:** — ಯಥಾರ್ಥಜ್ಞಾನವೇ ಸತ್ವಗುಣವು

**ಶಿಷ್ಯ:**— ರಜೋಗುಣ ವೆಂದೊಡೇನು ?

**ಗುರುಗಳು:**— ಎಲ್ಲೈ ಅಜ್ಞಾನಮಿಶ್ರಿತ ಜ್ಞಾನವೆಂದೊಡೆ ವಿಪರೀತಜ್ಞಾನ ಅಥವಾ ಸಂಶಯಾತ್ಮಕ ಜ್ಞಾನವೇ ರಜೋಗುಣವು.

**ಶಿಷ್ಯ:**— ತಮೋಗುಣ ವೆಂದೊಡೇನು ?

**ಗುರುಗಳು.**— ಮೂಢತ್ವವು,

## ೧೧ ನೇ ಭಾಗ.

### ಪಾಪಪುಣ್ಯಂಗಳ ಲಕ್ಷಣಗಳು, ಮತ್ತು ಫಲಗಳು.

**ಶಿಷ್ಯ**— ಪಾಪವೆಂದೊಡೇನು ?

**ಗುರುಗಳು.**— ವಿಹಿತಕರ್ಮವಂ ಮಾಡದಿರುವದರಿಂದ ಮತ್ತು ಅವಿಹಿತವಂ ಮಾಡೋಣದರಿಂದಾಗುವ ದೋಷವೇ ಪಾಪವು.

**ಶಿಷ್ಯ:**— ಪುಣ್ಯವೆಂದೊಡೇನು ?

**ಗುರುಗಳು:**— ವಿಹಿತಕರ್ಮವಂ ಮಾಡೋಣದರಿಂದ ಮತ್ತು ಅವಿಹಿತವಂ ಮಾಡದಿರುವದರಿಂದಾವ ಶ್ರೇಯಪ್ಪೋ ಅದೇ ಪುಣ್ಯವು

**ಶಿಷ್ಯ:**— ಪಾಪದ ಫಲ ದಾವದು ?

**ಗುರುಗಳು:**— ನಿರಂತರ ಚಿಂತೆ ಇಹಲೋಕದಲ್ಲಿ ಅಪಕೀರ್ತಿ, ಮುಂದೆ ಯಮದಂಡ, ಹಾಗೂ ನರಕವಾಸವು.

**ಶಿಷ್ಯ:**— ಪುಣ್ಯದಫಲವಾವದು ?

**ಗುರುಗಳು:**— ಚಿತ್ತ ಸಮಾಧಾನವಿರುವದು, ಇಹಲೋಕದಲ್ಲಿ ಕೀರ್ತಿ ಯಾಗುವದು, ಸಕಾಮಪುಣ್ಯಕರ್ಮವಂ ಮಾಡಿದೊಡೆ ಇಚ್ಛಿತಪ್ರಾಪ್ತಿಯಾಗು ವದು ಮತ್ತು ನಿಷ್ಕಾಮವಂ ಮಾಡಿದೊಡೆ ಪಾಪಕ್ಷಯವಾಗೀಶ್ವರಾನುಗ್ರಹದಿಂ ಸದ್ಗುರು ಸಚ್ಛಾಸ್ತ್ರಂಗಳ ಪ್ರಾಪ್ತಿಯಾಗಿ ಅದರಿಂದ ಜ್ಞಾನವಾಗಿ ಮೋಕ್ಷವು ಪ್ರಾಪ್ತವಾಗುವದು,

# ೧೨ ನೇ ಭಾಗ.

## ಅನ್ಯವರ್ಣಾಶ್ರಮ ಧರ್ಮಗಳು ಶ್ರೇಷ್ಠವಿದ್ದಾಗ್ಯೂ ಗೃಹಣ ಮಾಡುವದಕ್ಕೆ ಯೋಗ್ಯಗಳಲ್ಲ.

**ಶಿಷ್ಯ.—** ಸ್ವ ವರ್ಣಾಶ್ರಮಗಳಿಗೆ ವೇದಶಾಸ್ತ್ರಂಗಳಲ್ಲ ವಿಧಿಸಲ್ಪಟ್ಟ ವಿಹಿತ ಕರ್ಮಂಗಳನ್ನೇ ಮಾಡಬೇಕೆಂದು ನೀವು ಹೇಳಿದಿ ಆದರೆ ಕ್ಷತ್ರಿಯಾದಿಕರು ಬ್ರಾಹ್ಮಣರಿಗೆ ಹೇಳಿದಂಥ ಕರ್ಮಂಗಳನ್ನು ಮಾಡಿದರೆ ಅವರಿಗೆ ವಿಶೇಷ ಫಲದ ಪ್ರಾಪ್ತಿಯಾದೀತೋ ? ಇಲ್ಲೋ ?

**ಗುರುಗಳು:—** ಅಧಿಕ ಫಲವಂತು ಸಿಗದು; ಪರಂತು ಅವರು ಈಶ್ವರನ ವೇದರೂಪವಾದಾಜ್ಞೆಯನ್ನುಲ್ಲಂಘಿಸಿದಬಗ್ಗೆ ಅಪರಾಧಿಗಳಾಗುತ್ತಾರೆ. ಪುರಾಣದ ಮೇಲಿಂದ ನೋಡಲಾಗಿ ಪೂರ್ವದಲ್ಲಿ ಆದ ಶ್ರೇಷ್ಠ ಪುರುಷರಲ್ಲಿ ದಾರೂ ವೇದಾಜ್ಞೆಯು ವಿರುದ್ಧ ನಡಿಯಲಿಲ್ಲ. ಮತ್ತು ದಾರು ನೀಚರು ವೇದಾಜ್ಞೆಯನ್ನುಲ್ಲಂಘಿಸಿ ನಡಿದರೋ ಅವರಪಕೀರ್ತಿಯು ಪುರಾಣದಲ್ಲಿಯೂ ಜನರ ಭಾಷಣದಲ್ಲಿಯೂ ಕೇಳಬರುತ್ತದೆ. ಆದಕಾರಣ ಪರಧರ್ಮಾಚರಣವಂ ಮಾಡಬಾರದು ಮತ್ತು ತಮ್ಮ ತಮ್ಮ ವರ್ಣಾಶ್ರಮಗಳ ಕರ್ಮವಂ ಮಾಡದೆ ಅನ್ಯವರ್ಣಾಶ್ರಮಗಳ ಕರ್ಮವು ಮಾಡಿದೊಡೆ ದೇಶದಸಹ ಅಹಿತವೇ ಆಗುವದು. ಹ್ಯಾಗೀದೇಶದ ವಾಯ್ತೋ ಹಾಗೆಂದು ತಿಳಿಯಬೇಕು

**ಶಿಷ್ಯ:—** ಸ್ವಧರ್ಮತ್ಯಾಗದಿಂದ ಈ ದೇಶದ ಅಹಿತವು ಹ್ಯಾಗಾಯ್ತು ? ಇದನ್ನೆನಗೆ ದಯಮಾಡಿ ಹೇಳಬೇಕು.

**ಗುರುಗಳು:—** ಕ್ಷತ್ರಿಯರು ತಮ್ಮ ಧರ್ಮವ ಬಿಟ್ಟು, ಶ್ರೇಷ್ಠವಾದ ಬ್ರಾಹ್ಮಣರ ಧರ್ಮವಂ ಮತ್ತು ಕನಿಷ್ಠವಾದ ವೈಶ್ಯಾದಿಕರ ಧರ್ಮವಂ ಸ್ವೀಕರಿಸಿದರು. ಅದರಿಂದವರ ಶೂರತ್ವವು ನಷ್ಟವಾಯ್ತು. ಆಗ್ಗೇ ಪರದೇಶೀಯ ಜನರು ಈ ದೇಶಕ್ಕೆ ಅಧಿಪತಿಗಳಾದರು. ಅವರು ತಮ್ಮ ಹಿತದಸಲುವಾಗಿ ಬೇಕಾದಪ್ರಕಾರ ಏತದ್ದೇಶೀಯ ಪ್ರಜೆಗಳನ್ನು ದರಿದ್ರಿಗಳಂ ಮಾಡುತ್ತಿರಲಾಗಿ ಅವರ ಅನ್ಯಾಯಕ್ಕೆ ದಂಡಿಸುವಂಥ ಬಲವಾನ್‌ರು ದಾರೂ ಉಳಿದಿದ್ದಿಲ್ಲ. **[ಯಥಾರಾಜಾ ತಥಾಪ್ರಜಾ]** ಈ ವಚನದಪ್ರಕಾರ ಜನರು ತಮ್ಮ ಆಚರಣೆಯನ್ನು ಬಿಟ್ಟು ರಾಜಾಚರಣೆಯನ್ನು ಮಾಡಲಾರಂಭಿಸಿದ್ದರು ಆ ಆಚರಣವು ರಾಜನಿಗೆ ಪ್ರೀಯವಿದ್ದ ಕಾರಣ ಆ ಜನರಿಗೆ ಶಾಸನವಾಗದೆ ಉತ್ತೇಜನವೇ ಪ್ರಾಪ್ತವಾಗುತ್ತಿತ್ತು. ಈ ಪ್ರಕಾರ ಸ್ವಧರ್ಮನಾಶ, ಅದರಿಂದ ಸ್ವಶಕ್ತಿನಾಶ ಅದರಿಂದ ಸ್ವಮಾನಧನಂಗಳನಾಶವಾಗಿ ಈ ದೇಶವು ಅತ್ಯಂತ ನಿಕೃಷ್ಟಾವಸ್ಥೆಗೆ ಪ್ರಾಪ್ತವಾಯ್ತು. ಇದರ ಮೇಲಿಂದ ಸ್ವಧರ್ಮಾಚರಣತ್ಯಾಗವು ದುಃಖದ ವರದೆಂದು ಸ್ಪಷ್ಟವಾಗುತ್ತದೆ. ಪ್ರತ್ಯೇಕ

ಮನುಷ್ಯನು ತಮ್ಮ ವರ್ಣಾಶ್ರಮದ ವ್ಯವಹಾರವನ್ನೇ ಮಾಡಿದೊಡೆ ಬಹಳ ಹಿತವಾಗುವದು. ಅದು ಹ್ಯಾಗೆಂದೊಡೆ ದಾವದಾದರೂ ವ್ಯವಹಾರವಾಗಲಿ ಅದನ್ನು ಪರಂಪರೆಯಿಂದ ಮಾಡುತ್ತಿರುವದರಿಂದ ಅದರಲ್ಲಿ ಸುಧಾರಣೆ ಯಾಗುತ್ತದೆ. ತಂದಿಯ ಅವಯವ ಲಕ್ಷಣಗಳು ಮತ್ತು ಗುಣ ಲಕ್ಷಣಗಳು ಪುತ್ರನಲ್ಲಿ ಸ್ವಲ್ಪಾದರೂ ಇರುತ್ತಿರುತ್ತವೆ. ಇದರ ಮೇಲಿಂದ ತಂದಿಯು ಮಾಡಿದ ಧಂದೆ ಯನ್ನೇ ಮಗನು ಮಾಡಿದಲ್ಲಿ ಹ್ಯಾಗೆ ಸುಧಾರಣೆ ಯಾಗುವದೋ ಹಾಗೆ ಬೇಕಾದವರು ಬೇಕಾದ ಧಂದೆಯನ್ನು ಮಾಡುತ್ತ ಹೋದಲ್ಲಿ ಆಗದು. ಇದರ ಮೇಲಿಂದ ಪರರಧಂದೆಯಾದರೂ ಸ್ವೀಕರಿಸಬಾರದೆಂದಮೇಲೆ ಪರಧರ್ಮಾಚರಣೆ ಯನ್ನು ಸ್ವೀಕರಿಸಬಾರದೆಂದು ಹೇಳಲಿಕ್ಕವಶ್ಯವೇನು? ಇರಲಿ ಶಾಸ್ತ್ರದಲ್ಲಿ ಹೇಳಿದ ಪ್ರಕಾರ ನಡಿಯುವದರಿಂದ ಮನಸ್ಸು ತನ್ನಿಂದತಾನೇ ಸ್ವಾಧೀನಕ್ಕೆ ಬರುತ್ತದೆ. ಬೇಕಾದವರು ಬೇಕಾದಪ್ರಕಾರ ಮಾಡುತ್ತಹೋದೊಡೆ ಜೀವಗಳು ಮನಸ್ಸಿನ ಸ್ವಾಧೀನವಾಗಿ ದುಃಖವನ್ನೇ ಭೋಗಿಸುವರು. ಇದರ ದೆಶೆಯಿಂದ ಶಾಸ್ತ್ರನಿಯ ಮಾನುಸಾರವಾಗಿ ನಡಿಯುವದೇ ಪ್ರತ್ಯೇಕನಿಗೆ ಯೋಗ್ಯವದೆ.

**ಶಿಷ್ಯ:—** ಹೇ ಸರ್ವಜ್ಞನೇ ಶಾಸ್ತ್ರಾನುಸಾರವಾಗಿ ನಡೆಯೋಣದರಿಂದ ಮನಸ್ಸು ಹ್ಯಾಗೆ ಸ್ವಾಧೀನವಾಗುತ್ತದೆ?

**ಗುರುಗಳು—** ಶಾಸ್ತ್ರದಲ್ಲಿ ಬ್ರಾಹ್ಮಣರು ಅಂತ್ಯಜರ ವ್ಯವಹಾರವು ಮಾಡ ಬಾರದೆಂದು ಹೇಳಿರುತ್ತದೆ; ಅದನ್ನು ಮಾಡಿದೊಡೆ ಒಬ್ಬ ಬ್ರಾಹ್ಮಣಂಗೆ ರಾಜ್ಯ ಪ್ರಾಪ್ತಿಯಾಗುವಂಥದ್ದದೆ; ಪರಂತು ಆ ಬ್ರಾಹ್ಮಣನು ಸ್ವಧರ್ಮನಿಷ್ಠನಿದ್ದದ್ದ ರಿಂದ ಸ್ವಧರ್ಮ ಲೋಪವಾದೀತೆಂಬ ಭಯದಿಂದ ರಾಜ್ಯದ ಆಶೆಯನ್ನು ಬಿಟ್ಟಲ್ಲಿ ಸ್ವಧರ್ಮಾಚರಣದಿಂ ಅವನ ಮನಸ್ಸು ಸ್ವಾಧೀನವಾಯ್ತೋ ಇಲ್ಲೋ? ಅಥವಾ ಒಬ್ಬ ಸ್ವಧರ್ಮನಿಷ್ಠನ ಮನಸ್ಸು ಪರಸ್ತ್ರೀಯಳಮೇಲೆ ಹೋಗಲಾಗಿ ಪರಸ್ತ್ರೀಯಳ ಕಡಿಗೆ ಹೋಗುವದು ಸ್ವಧರ್ಮವಲ್ಲೆಂದು ತಿಳಿದು ಆ ಮನುಷ್ಯನು ಹೋಗಿಲ್ಲಾ ದೊಡೆ ಅವನ ಮನಸ್ಸು ಸ್ವಾಧೀನವಾಯ್ತೋ ಇಲ್ಲೋ? ಇರಲಿ ಸರ್ವರು ತಮ್ಮ ತಮ್ಮ ಜಾತಿಯ ವ್ಯವಸಾಯವನ್ನೇ ಮಾಡುತ್ತಹೋದರೆಲ್ಲಜಾತಿಗಳಿಗೆ ಪರಸ್ಪರರ ಜರೂರ ವಿಶೇಷವಾಗುವದು; ಮತ್ತು ಸ್ತ್ರೀಗೆ ಪುರುಷನ ಅವಶ್ಯಕತೆ ಹಾಗು ಪುರುಷಂಗೆ ಸ್ತ್ರೀಯಳ ಅವಶ್ಯಕತೆ ಯಿರುವದರಿಂದ ಅವರ ಪ್ರೀತಿಯು ಪರಸ್ಪರರಮೇಲೆ ಹ್ಯಾಗಾಗುತ್ತದೋ, ಹಾಗೆಯೇ ಸರ್ವ ಜಾತಿಗಳಿಗೆ ಪರಸ್ಪರರ ಜರೂರವಿರುವದರಿಂದ ಸರ್ವಜಾತಿಗಳ ' ಪ್ರೇಮವು ಪರಸ್ಪರರ ಮೇಲಾಗುವದು. ಹ್ಯಾಗೆಂದಲ್ಲಿ ಕೇಳು. ಕ್ಷತ್ರಿಯರಿಗೆ ಪರಮಾರ್ಥಸಂಬಂಧದ ಜ್ಞಾನ, ವ್ಯವಹಾರನೀತಿ, ರಾಜನೀತಿ, ಇತ್ಯಾದಿಗಳು ಬ್ರಾಹ್ಮಣರಿಂದೇ ಪ್ರಾಪ್ತ ವಾಗುವವು. ಹೀಗಿದ್ದಮೇಲೆ ಕ್ಷತ್ರಿಯರ ಪ್ರೇಮವು ಬ್ರಾಹ್ಮಣರಮೇಲೆ ಸಹಜವೇ ಇರುವದು. ಮತ್ತು ಪಶು, ಹಾಗು ಇತರ ದುಷ್ಟಜೀವಂಗಳಿಂ ಬ್ರಾಹ್ಮಣರಿ

ಗುಪದ್ರವವಾಗದಂತೆ ವ್ಯವಸ್ಥೆಯಿಡುವದು ಕ್ಷತ್ರಿಯರಕಡಿಗೇ ಇದ್ದೊಡೆ ಬ್ರಾಹ್ಮಣರಪ್ರೇಮವು ಕ್ಷತ್ರಿಯರಮೇಲೆ ಸಹಜವೇ ಆಗುವದು. ಈ ಪ್ರಕಾರ ಸರ್ವಜಾತಿಗಳು ತಮ್ಮ ತಮ್ಮ ಧರ್ಮವ್ಯವಹಾರಂಗಳಿಂದೇ ನಡಿಯುತ್ತಹೋದೊಡೆ ಸರ್ವಜಾತಿಗಳ ಜನರು ಪರಸ್ಪರರಿಗೆ ಪ್ರೀಯರಾಗುವರು ಮತ್ತು ಹೀಗಾಗುವದರಿಂದ ಸರ್ವರ ಹಿತವೇ ಆಗುವದು ತಮ್ಮ ತಮ್ಮ ಧರ್ಮದಿಂದೇ ವರ್ತನಮಾಡಬೇಕೆಂದು ಶ್ರೀಕೃಷ್ಣಪರಮಾತ್ಮನು ಭಗವದ್ಗೀತೆಯಲ್ಲಿ ಹೇಳಿರುತ್ತಾನೆ. **ಶ್ಲೋಕ[ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ]** ಇತಿ,

## ೧೩ನೇ ಭಾಗ.

### ಕರ್ಮಖಂಡಣಂ.

**ಶಿಷ್ಯ:**—ಹೇ ಉಪರತಶ್ರೇಷ್ಠನೇ, ಶ್ರೀಕೃಷ್ಣನು ಭಗವದ್ಗೀತೆಯಲ್ಲಿ **[ಕರ್ಮಣೈವಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ ]** ಈಪ್ರಕಾರ ಹೇಳಿರುತ್ತಾನೆ. ಇದರಮೇಲಿಂದ ಕರ್ಮದಿಂದೇ ಮೋಕ್ಷಸಿದ್ಧಿಯಾಗುತ್ತದೆಂದಿದ್ದು; ಮೋಕ್ಷಕ್ಕೆ ಜ್ಞಾನನೇಸಾಧನವು. ಅನ್ಯವಿಲ್ಲ. ಈಪ್ರಕಾರ ನೀವು ಹೇಳುತ್ತೀರಿ. ಆದರಿದರೊಳಗಾವಸತ್ಯವೆಂದು ತಿಳಿಯಬೇಕು ?

**ಗುರುಗಳು:**— ಹೇ ವತ್ಸ ಕರ್ಮದಿಂದೇ ಮೋಕ್ಷವು ಪ್ರಾಪ್ತವಾಗುತ್ತದೆಂದು ಶ್ರೀಕೃಷ್ಣನಮತವಿದ್ದೊಡೆ **[ ನಾನಾಶಾಸ್ತ್ರಪಠೇಲ್ಲೋಕೋ ನಾನಾ ದೈವತಪೂಜನಂ ॥ ಆತ್ಮಜ್ಞಾನವಿನಾಪಾರ್ಥ ಸರ್ವಕರ್ಮನಿರರ್ಥಕಂ ]** ಅನೇಕ ಶಾಸ್ತ್ರಂಗಳಂ ಪಠಿಸಿದಾಗ್ಯೂ ಅನೇಕ ದೇವತೆಗಳ ಪೂಜನಮಾಡಿ ಅವುಗಳ ಅನುಗ್ರಹಪಡಕೊಂಡಿದ್ದಾಗ್ಯೂ ಆತ್ಮಜ್ಞಾನವಿಲ್ಲದೆ ಮೋಕ್ಷವು ಪ್ರಾಪ್ತವಾಗುವದಿಲ್ಲ. ಆದಕಾರಣ ಸರ್ವಕರ್ಮವು ವ್ಯರ್ಥವದೆ. ಹೀಗೆ ಶ್ರೀಕೃಷ್ಣನು ಅರ್ಜುನಂಗೆ ಹ್ಯಾಗೆ ಹೇಳುತ್ತಿದ್ದನು ? ಇದರಮೇಲಿಂದ ಕೃಷ್ಣನು ಆ ಸಂಸಿದ್ಧಿ ಎಂಬ ಶಬ್ದವು ಚಿತ್ತಶುದ್ಧಿ ಎಂಬ ಶಬ್ದದಬದಲಾಗಿ ಹಾಕಿದ್ದಾನೆ. ಹಾಗು ಕರ್ಮದಿಂ ಚಿತ್ತಶುದ್ಧಿಯಾಗುತ್ತದೆ; ಇದಕ್ಕೆಶ್ರುತಿಪ್ರಮಾಣವಾದರುಂಟು ಶ್ರುತಿ **[ ಧರ್ಮೇಣಪಾಪಮಪನುದತಿ] [ನಕರ್ಮಲಿಪ್ಯತೇನರೇ]ಇತಿ** ಮೋಕ್ಷವೆಂದೊಡೆ ಅಜ್ಞಾನನಿವೃತ್ತಿಯು ಅದು ಕರ್ಮದಿಂ ಹ್ಯಾಗಾದೀತು ? ಯಾಕೆಂದೊಡೆ ಕರ್ಮ ಮತ್ತು ಅಜ್ಞಾನ ಇವುಗಳು ಜಡಗಳಿದ್ದಕಾರಣ ಪರಸ್ಪರವಿರೋಧಿಗಳಾಗುವದಿಲ್ಲ. ಜ್ಞಾನವು ಅಜ್ಞಾನಕ್ಕೆ ವಿರುದ್ಧವದೆ; ಆದಕಾರಣ ಜ್ಞಾನದಿಂದೇ ಅಜ್ಞಾನನಿವೃತ್ತಿಯು ಸಂಭವಿಸುತ್ತದೆ.

## ೧೪ನೇ ಭಾಗ.

### ಕರ್ಮಜ್ಞಾನಸಮುಚ್ಚಯ ಖಂಡಣಂ.

**ಶಿಷ್ಯ:**— ಹೇ ತಾತ [ **ಉಭಾಭ್ಯಾಮೇವಪಕ್ಷಾಭ್ಯಾಂ** ] ಇತ್ಯಾದಿ ವಚನಂಗಳಿಂದ ಶ್ರುತಿಯು ಕರ್ಮಜ್ಞಾನಂಗಳ ಸಮುಚ್ಚಯವಂ ಹೇಳಿರುತ್ತದೆ, ಹೀಗಿದ್ದು ನೀವು ಉಪರತಿಯೆಂದೊಡೆ ಕರ್ಮತ್ಯಾಗವೆಂದು ಹ್ಯಾಗೆ ಹೇಳಿದಿ ?

**ಗುರುಗಳು:**— ಎಲ್ಲೈ ಕರ್ಮಕ್ಕೆ ಅಹಂಕರ್ತೃಭಾವವು ಬೇಕಾಗುತ್ತದೆ; ಮತ್ತು ಜ್ಞಾನವು ಆ ಭಾವದ ನಾಶಮಾಡುತ್ತದೆ. ಆದರೆ ಕರ್ಮಜ್ಞಾನಂಗಳ ಸಮುಚ್ಚಯವು ಹ್ಯಾಗಾದೀತು ? ನೀನು ಹೇಳಿದ ಶ್ರುತಿಯ ಭಾವಾರ್ಥವಿಷ್ಟೇ ಇರುತ್ತದಲ್ಲೋ ಜ್ಞಾನವೆಂದರೆ ಉಪಾಸನೆ, ಹಾಗು ಕರ್ಮ ಇವುಗಳನ್ನು ಕೂಡಿ ಮಾಡೋಣದರಿಂದ ಈಶ್ವರಕೃಪೆಯಿಂದ ಜ್ಞಾನವಾಗಿ ಸರ್ವ ಕರ್ಮಂಗಳ ಕ್ಷಯವಾಗಿ ಜೀವನು ಭವಸಾಗರದಾಟಿ ಹೋಗುತ್ತಾನೆ. ಮತ್ತು ( **ಅವಿದ್ಯಯಾಮೃತ್ಯುಂತೀರ್ತ್ವಾವಿದ್ಯಯಾಮೃತಮಶ್ನುತೆ** ) ಈ ಶ್ರುತಿವಚನವಾದರೂ ಹೀಗೇ ಅದೆ ಇದರಮೇಲಿಂದ ಜ್ಞಾನದಹೊರ್ತು ಮೋಕ್ಷಕ್ಕನ್ಯಸಾಧನವಿಲ್ಲ. ಸೂರ್ಯನು ತಮಸ್ಸನ್ನು ನಾಶಿಸುವದಕ್ಕೆ ಸ್ವತಃನೇ ಸಮರ್ಥನಿದ್ದಾನೆ; ಆದಕಾರಣ ಆತಂಗೆ ಅನ್ಯರ ಸಹಾಯ್ಯದ ಜರೂರವಿಲ್ಲ. ಹ್ಯಾಗೋ ಹಾಗೆಯೇ ಜ್ಞಾನಕ್ಕೆ ಅಜ್ಞಾನನಿವೃತ್ತಿಯನ್ನು ಮಾಡುವದಕ್ಕೆ ಅನ್ಯರಸಹಾಯ್ಯದ ಜರೂರವಿಲ್ಲ. [ **ವಿದ್ಯಾವಿದ್ಯಾಂ ನಿಹಂತ್ಯೇವತೇಜಸ್ತಿಮಿರಸಂಘವತ್** ] ಈ ಪ್ರಕಾರ ಆತ್ಮಬೋಧ ನಾಮಕ ಗ್ರಂಥದಲ್ಲಿ ಆಚಾರ್ಯರ ವಚನಮುಂಟು. ಮತ್ತು [ **ಜ್ಞಾನಾದೇವತು ಕೈವಲ್ಯಮಿತಿ || ಋತೇಜ್ಞಾನಾನ್ನಮುಕ್ತಿಃ** ] ಇತ್ಯಾದಿ ಶ್ರುತಿವಚನಗಳುಂಟು, ಇವುಗಳಮೇಲಿಂದ ಜ್ಞಾನವೇ ಮೋಕ್ಷಸಾಧನವು; ಅನ್ಯವಿಲ್ಲ.

## ೧೫ನೇ ಭಾಗ.

### ಜ್ಞಾನದಿಂದೇ ನಿರುಪಾಧಿತ್ವ ಸಂಭವಿಸುತ್ತದೆ.

**ಶಿಷ್ಯ:— ಸರ್ವವೃತ್ತಿರಹಿತನಾಗದೆ ಜೀವಂಗೆ ಮೋಕ್ಷಪ್ರಾಪ್ತಿಯಾಗುವ ಸಂಭವವಿಲ್ಲ; ಹಾಗು ನೀವು ಜ್ಞಾನದಿಂ ಅಜ್ಞಾನನಿವೃತ್ತಿಯಾದರೆ ಮೋಕ್ಷಪ್ರಾಪ್ತಿಯಾಗುತ್ತದೆಂದು ಹೇಳುತ್ತೀರಿ; ಆದರೆ ಅಜ್ಞಾನನಾಶಕವಾದ ಜ್ಞಾನವೃತ್ತಿಯು ಅಜ್ಞಾನವು ನಿವೃತ್ತವಾದನಂತರ ಉಳಿಯುತ್ತದೋ ? ಇಲ್ಲೋ ? ಉಳಿಯುತ್ತಿದ್ದರೆ ಜೀವಂಗೆ ಮೋಕ್ಷವೆಂದೊಡೆ ನಿರುಪಾಧಿಕತ್ವಪ್ರಾಪ್ತವಾಗುವದು ಸಂಭವಿಸುವದಿಲ್ಲ. ಇಲ್ಲಾದೊಡೆ ಅದು ಯಾತರಿಂದ ನಷ್ಟವಾಗುತ್ತದೆ ?**

**ಗುರುಗಳು:—** ಉಳಿಯುವದಿಲ್ಲ. ಅಗ್ನಿಯು ಕಾಷ್ಠಗಳನ್ನು ಸುಟ್ಟು ಹ್ಯಾಗೆ ತಾನೇ ಶಾಂತವಾಗುತ್ತದೋ ? ಕರ್ಪೂರವಂ ಸುಟ್ಟು ತೇಜವು ತನ್ನಿಂದ ತಾನೇ ಹ್ಯಾಗೆ ಶಾಂತವಾಗುತ್ತದೋ ? ಘೃತ ಮತ್ತು ಬತ್ತಿಗಳಂ ಸುಟ್ಟು ದೀಪವು ತನ್ನಿಂದತಾನೇ ಹ್ಯಾಗೆ ಶಾಂತವಾಗುತ್ತದೋ ಹಾಗೆಯೇ ಅಜ್ಞಾನ ನಾಶವಂಮಾಡಿ ಜ್ಞಾನವೃತ್ತಿಯು ತನ್ನಿಂದ ತಾನೇ ನಷ್ಟವಾಗುತ್ತದೆ.

## ೧೬ನೇ ಭಾಗ.

### ಪಂಚಧಾ ಮುಕ್ತಿಗಳು.

**ಶಿಷ್ಯ:—** ನೀವು ಜ್ಞಾನದಿಂದೇ ಮುಕ್ತಿಪ್ರಾಪ್ತಿಯಾಗುತ್ತದೆಂದು ಹೇಳಿದಿರಿ; ಪರಂತು ಶಾಸ್ತ್ರ ಪುರಾಣಂಗಳಲ್ಲಿ ಬಹಳ ಮುಕ್ತಿಗಳು ಹೇಳಿರುತ್ತವೆ; ಅವುಗಳಲ್ಲಿಯು ಜ್ಞಾನದಿಂದೇ ಪ್ರಾಪ್ತವಾಗುವ ಮುಕ್ತಿಯಾವದು ? ಹಾಗು ಸರ್ವ ಮುಕ್ತಿಗಳೆಷ್ಟಿವೆ ? ಅವುಗಳಾವಾವ ಸಾಧನಗಳಿಂದ ಪ್ರಾಪ್ತವಾಗುತ್ತವೆ ? ಮತ್ತು ಅವುಗಳ ಸ್ವರೂಪಗಳು ಹ್ಯಾಗಿರುತ್ತವೆ. ಇದನ್ನೆನಗೆ ಕೃಪೆಯಿಂದ ಹೇಳಬೇಕು.

**ಗುರುಗಳು:—** ಸಾಲೋಕ್ಯ, ಸಾರೂಪ್ಯ, ಸಾರ್ಷ್ಟಿ, ಸಾಯುಜ್ಯ, ಮತ್ತು ಕೈವಲ್ಯಂಗಳೆಂಬ ಐದು ಮುಕ್ತಿಗಳು ಶಾಸ್ತ್ರದಲ್ಲಿ ಹೇಳಿರುತ್ತವೆ. ಅವುಗಳೊಳಗಣ ಕೈವಲ್ಯಮುಕ್ತಿಯು ಜ್ಞಾನದಿಂದೇ ಪ್ರಾಪ್ತವಾಗುವಂಥದ್ದದೆ. ಶಿವಾದಿ ದೇವತೆಗಳೊಳಗಣ ತಮ್ಮತಮ್ಮ ಉಪಾಸ್ಯದೇವತೆಗಳ ರೂಪಗಳಂತಿಳಿಯದೆ ಶಿವಾದಿ ದೇವತೆಗಳ ಭಾವನೆಯಿಂದ ಲಿಂಗಾದಿ ಪ್ರತೀಕಂಗಳ ಧ್ಯಾನಾದ್ಯುಪಾಸನೆಯನ್ನು ಇಹಲೋಕ ಭೋಗೇಚ್ಛೆಯನ್ನು ತ್ಯಾಗಮಾಡಿ ಮಾಡಿದೊಡೆ ಉಪಾಸಕರು ದೇಹಾಂತ ವಾದನಂತರ ಉಪಾಸ್ಯದೇವತೆಗಳ ಲೋಕಂಗಳಲ್ಲಿಹೋಗಿ ಇಚ್ಛಿತ ಭೋಗಂಗಳಂ ಭೋಗಿಸುತ್ತಾರೆ. ಪರಂತು ಅಲ್ಲಾ್ಯದರೂ ಅವರಿಗೆ ಉಪಾಸ್ಯ ದೇವತೆಗಳ ರೂಪಂಗಳ ದರ್ಶನ ವಾಗುವದಿಲ್ಲ. ಮತ್ತು ಭೋಗಂಗಳಿಂದ ಪುಣ್ಯ ತೀರಿದನಂತರ ಇಹಲೋಕಕ್ಕೆ ಜನ್ಮಕ್ಕೆ ಬರುತ್ತಾರೆ. ಆ ಮುಕ್ತಿಗೆ ಸಾಲೋಕ್ಯ ಮುಕ್ತಿ ಯೆಂದೆನ್ನುತ್ತಾರೆ. ಇನ್ನು ಸಾರೂಪ್ಯ ಮುಕ್ತಿಯನ್ನು ಹೇಳುತ್ತೇನೆ; ಶ್ರವಣಮಾಡು. ಉಪಾಸ್ಯದೇವತೆಯರೂಪವಂ ತಿಳಿದು ಅನ್ಯಇಚ್ಛಾರಹಿತನಾಗಿ ಆ ರೂಪದ ಧ್ಯಾನಾದ್ಯುಪಾಸನೆಯನ್ನು ಆಮರಣಪರ್ಯಂತರ ಮಾಡೋಣದರಿಂದ ದೇಹಾಂತ ವಾದನಂತರ ಉಪಾಸಕನು ಧ್ಯೇಯಮೂರ್ತಿಯ ಸಮಾನ ರೂಪವಂ ಪಡಿದು ಧ್ಯೇಯಮೂರ್ತಿಯ ಲೋಕಕ್ಕೆಹೋಗಿ ಯಥೇಚ್ಛ ಭೋಗಂಗಳಂ ಭೋಗಿಸಿ ಪುಣ್ಯ ತೀರಿದನಂತರ ಇಹಲೋಕಕ್ಕೆ ಜನ್ಮಕ್ಕೆ ಬರುತ್ತಾನೆ; ಈ ಮುಕ್ತಿಗೆ ಸಾರೂಪ್ಯಮುಕ್ತಿ ಯೆಂದೆನ್ನುತ್ತಾರೆ. ಇನ್ನು ಸಾರ್ಷ್ಟಿಮುಕ್ತಿಯು ಲಕ್ಷಣವಂ ಕೇಳು ಸಾರ್ಷ್ಟಿ, ಸ್ವರೂಪ, ದೇವತೆಗಳು [illegible] ಮುಖ್ಯಾದಿಗಳಂ [illegible]

ರಾರ್ಪಣ ವಾಗಲೆಂದು ಮಾಡೋಣದರಿಂದ ವರ್ತಮಾನ ದೇಹವು ನಷ್ಟವಾದನಂತರ ಉಪಾಸಕನು ಉಪಾಸ್ಯ ದೇವತೆಯು ಲೋಕಕ್ಕೆ ಹೋಗಿ ಉಪಾಸ್ಯದೇವತೆಯ ಸಮಾನ ರೂಪವಂಪಡಿದು ಉಪಾಸ್ಯದೇವತೆಯು ಸಮೀಪದಲ್ಲಿದ್ದು ತತ್ಸಮಾನ ಭೋಗಂಗಳಂ ಭೋಗಿಸಿ ಪುಣ್ಯತೀರಿದಕ್ಷಣಕ್ಕೆ ಇಹಲೋಕಕ್ಕೆ ಜನ್ಮಕ್ಕೆ ಬರುತ್ತಾನೆ. ಈ ಮುಕ್ತಿಗೆ ಸಾರ್ಷ್ಟಿಮುಕ್ತಿಯೆಂದೆನ್ನುತ್ತಾರೆ. ಇನ್ನು ಸಾಯುಜ್ಯ ಮುಕ್ತಿಯು ಲಕ್ಷಣವಂ ಕೇಳು. ಬ್ರಹ್ಮವು ಸಚ್ಚಿದಾನಂದ ವದೆ, ನಾನು ಸದ್ರೂಪದಿಂ ತತ್ಸಮಾನ ನಿದ್ದೇನೆ; ಪರಂತು ಚಿದ್ರೂಪದಿಂದಲೂ ಆನಂದರೂಪದಿಂದಲೂ ನಾನು ಕಡಿಮೆ ಇದ್ದೇನೆ. ಹ್ಯಾಗೆಂದೊಡೆ ಬ್ರಹ್ಮವು ಸರ್ವಜ್ಞವದೆ; ಹಾಗು ನಾನು ಕಿಂಚಿಜ್ಞನಿದ್ದೇನೆ. ಬ್ರಹ್ಮವು ಸುಖವಂ ಕೊಡುವಂಥದ್ದದೆ; ಮತ್ತು ನಾನು ಭೋಗಿಸುವವ ನಿದ್ದೇನೆ. ಈ ಪ್ರಕಾರತಿಳಿದು ಅವನು ಉಪಾಸನೆಯನ್ನು ಮಾಡುತ್ತಾನೋ ಅವನು ವರ್ತಮಾನ ದೇಹವಂ ಬಿಟ್ಟದನಂತರ ಹಿರಣ್ಯ ಗರ್ಭದಲ್ಲಿ ಹೋಗುತ್ತಾನೆ; ಮತ್ತು ಬೇಕಾದ ವೇಳ್ಯೆಯಲ್ಲಿ ಬೇಕಾದ ದೇಹವಂ ಧರಿಸುತ್ತಾನೆ; ಸ್ವೇಚ್ಛಾಭೋಗಂಗಳಂ ಭೋಗಿಸುತ್ತಾನೆ; ಹಾಗಲ್ಲಿ ವಿಶೇಷ ಸತ್ವಗುಣವಿರುವದರಿಂದ ಮುಂದೆ ತನ್ನ ಸಚ್ಚಿದಾನಂದ ರೂಪವಂತಿಳಿದು ಕಲ್ಪಾಂತದಲ್ಲಿ ಬ್ರಹ್ಮದಲ್ಲ ಅಭಿನ್ನನಾಗುತ್ತಾನೆ. ಈ ಮುಕ್ತಿಗೆ ಸಾಯುಜ್ಯಮುಕ್ತಿ ಯೆಂದೆನ್ನುತ್ತಾರೆ. ಇನ್ನು ಮುಕ್ತಿಯೆಂಬ ನಾಮಕ್ಕೆ ಯೋಗ್ಯವಾದ ಕೈವಲ್ಯಮುಕ್ತಿಯ ಲಕ್ಷಣವಂ ಕೇಳು. ಪ್ರಥಮದಲ್ಲಿ ವಿಹಿತಕರ್ಮಂಗಳಂ ಮಾಡಿ ಚಿತ್ತವು ಶುದ್ಧವಾದನಂತರ ನಿತ್ಯಾನಿತ್ಯ ವಿಚಾರದಿಂ ಅನಿತ್ಯವಂತ್ಯಾಗಮಾಡಿ ನಿತ್ಯವಸ್ತುವಿನಲ್ಲಿ ಪ್ರೇಮವಿಡಿದಕಾರಣ ಅನಿತ್ಯ ವಿಷಯಂಗಳಲ್ಲಿ ಮನಸ್ಸು ಹೋಗುವದಿಲ್ಲ. ಮನಸ್ಸು ಹೋಗದಿರುವದರಿಂದ ಇಂದ್ರಿಯಗಳಾದರೂ ಹೋಗುವದಿಲ್ಲ. ಯಾಕೆಂದೊಡೆ ಇಂದ್ರಿಯಗಳಿಗೆ ಮನಸ್ಸಿನ ಹೊರ್ತು ಬೇರೆ ಸತ್ತೆಯಿಲ್ಲ; ಈ ಪ್ರಕಾರ ಶಮಾದಿ ಷಟ್ಕ ಮತ್ತು ನಿತ್ಯಾತ್ಮನ ಪ್ರಾಪ್ತಿಯ ಇಚ್ಛೆಯೆಂದೊಡೆ ಮುಮುಕ್ಷೆಯು, ಈ ಚತುಷ್ಟಯ ಸಾಧನಂಗಳಿಂದ ಸಂಪನ್ನನಾಗಿ ಆ ಮೇಲೆ ನಿತ್ಯಾತ್ಮನ ಪ್ರಾಪ್ತಿಯ ಉಪಾಯವಂ ಕೇಳುವಗೋಸ್ಕರ ಸದ್ಗುರುವಿಂಗೆ ಶರಣಂ ಪೋಗಿ ಕಾಯಾ ವಾಚಾ ಮನಃ ಪೂರ್ವಕವಾಗಿ ಗುರುಸೇವೆಯನ್ನು ಮಾಡಿ ಗುರುಮುಖದಿಂ ಪಂಚೀಕರಣ, ಮತ್ತು ಮಹಾವಾಕ್ಯ ವಿವರಣಂಗಳಂ ಕೇಳಿ ಮನನವಂ ಮಾಡಿ ನಿದಿಧ್ಯಸನದಿಂ ಸಚ್ಚಿದಾನಂದ ಪರಿಪೂರ್ಣ ಏಕರಸ ಅದ್ವಯ ಅದ್ವೈತ ಅಗ್ರಾಹ್ಯ ಅವರ್ಣ ಅಗೋತ್ರ ನಿರಿಂದ್ರಿಯ ಅಪ್ರಾಣ ಅಮನಸ್ಕ ಮನ ವಾಕ್ಕುಗಳಿಗಗೋಚರವಾದ ಬ್ರಹ್ಮವೇ ದೇಹದಲ್ಲಿರಲಿಕ್ಕೇ ಸಾಕ್ಷಾತ್ ತಾವೇ ಆಗುತ್ತಾರೆ; ಈ ಮುಕ್ತಿಗೆ ಕೈವಲ್ಯ ಮುಕ್ತಿಯೆಂದೆನ್ನುತ್ತಾರೆ;

---

# ೧೭ನೇ ಭಾಗ

## ಸದ್ಗುರು ಲಕ್ಷಣ, ಗುರುಗಳಿಗೆ ಶರಣ ಹೋಗುವ ರೀತಿ, ಮತ್ತು ಗುರುಭಕ್ತನು ಜ್ಞಾನವಾಗದೆ ಮರಣ ಹೊಂದಿದಾಗ್ಯೂ ಅವನಿಗೆ ಉತ್ತಮಗತಿಯು.

**ಶಿಷ್ಯ:—** ಸದ್ಗುರುಗಳೆಂದಾರಿಗೆನಬೇಕು ?

**ಗುರುಗಳು:—** ತಾವೇ ಸಚ್ಚಿದಾನಂದ ಪರಿಪೂರ್ಣ ಬ್ರಹ್ಮ ಇದ್ದೇವೆ ತಮ್ಮ ಹೊರ್ತು ಏನೇನಿಲ್ಲ; ಈ ಪ್ರಕಾರ ನಿಷ್ಠಾಸಂಪನ್ನರಾಗಿದ್ದ ಕಾರಣ ನಿಶ್ಚಿಂತ ಆತ್ಮತೃಪ್ತ, ಸ್ಥಿರಬುದ್ಧಿ, ರಾಗ ದ್ವೇಷರಹಿತರಾಗಿ ಜಗತ್ಯದ ಸತ್ಯಹಿತದ ಸಲುವಾಗಿ ನಿರಭಿಮಾನದಿಂ ಉದ್ಯೋಗವಂ ಮಾಡುತ್ತಲಿರುವಂಥವರಾಗಿದ್ದು, ಬ್ರಹ್ಮಾತ್ಮೈಕ್ಯವಂ ಬೋಧಿಸುವದಕ್ಕೆ ಸಮರ್ಥರಾಗಿರುವರು ದಾರೋ ಅವರೇ ಸದ್ಗುರುಗಳು.

**ಶಿಷ್ಯ:—** ಇಂಥ ಗುರುಗಳಿಗೆ ದಾವರೀತಿಯಿಂದ ಶರಣ ಹೋಗಬೇಕು ? ಮತ್ತು ಅವರ ಸಂಗಡ ಹ್ಯಾಗೆ ಮಾತಾಡಬೇಕು ? ಇದನ್ನೆನಗೆ ಹೇಳಬೇಕು.

**ಗುರುಗಳು:—** ಹೇ ಪುತ್ರ, ದೇವರು, ಸಂತರು, ರಾಜರು, ಇವರ ಭೆಟ್ಟಿಗೆ ರಿಕ್ತಹಸ್ತದಿಂ ಹೋಗಬಾರದೆಂದು ನೀತಿಯುಂಟು. ಆದಕಾರಣ ಅವರಿಗುಪಯೋಗಕ್ಕೆ ಬರುವಂತೇನಾದರೂ, ಹಸ್ತದಲ್ಲಿ ತೆಗೆದುಕೊಂಡು ಹೋಗಬೇಕು. ಗುರುಗಳ ದರ್ಶನ ವಾದನಂತರ ಆ ಪದಾರ್ಥಸಹಿತ ಹಸ್ತದಿಂದ ಗುರುಪಾದಕಮಲಂಗಳಿಗೆ ದಂಡವತ್ ಸಾಷ್ಟಾಂಗನಮಸ್ಕಾರವಂ ಮಾಡಿ, ಕರಮುಗಿದು ಸಮ್ಮುಖದಲ್ಲಿ ನಿಂತು, ಸೇವೆಯನ್ನು ಬೇಡಿಕೊಳ್ಳಬೇಕು. ಆ ಮೇಲೆ ಶರೀರದಿಂ ಗುರುವಿನ ವಸ್ತ್ರಧಾವನ ಜಲಾಹರಣ, ಗೋರಕ್ಷಣ, ಪಾದಸೇವನ, ಮುಂತಾದ ಸಣ್ಣದೊಡ್ಡ ಸರ್ವಕೆಲಸಂಗಳಂ ಮಾಡಬೇಕು; ಮುಖದಿಂ ಗುರುಕೀರ್ತಿ, ಮತ್ತು ಗುರುನಾಮಂಗಳಂ ನಿರಂತರದಲ್ಲಿ ಉಚ್ಚರಿಸುತ್ತಲಿರಬೇಕು. ಹಾಗು ಮನಸ್ಸಿನಿಂದ ಗುರು ಮೂರ್ತಿಯ ಧ್ಯಾನವಂ ಮಾಡಬೇಕು. ಈ ಪ್ರಕಾರ ಸೇವೆಯನ್ನು ಮಾಡಿದೊಡೆ ಚಿತ್ತಶುದ್ಧಿ ಯಾಗುತ್ತದೆ. ಆ ಮೇಲೆ ಆ ಸೇವಕನು ಗುರುಗಳನುಗ್ರಹಕ್ಕೆ ಪಾತ್ರನಾಗುತ್ತಾನೆ. ಆಗ್ಗೆ ಗುರುಗಳು ಪ್ರಸನ್ನರಾಗಿ ಆತಂಗೆ ಕರಿಗೊಂಡುಪದೇಶಿಸುತ್ತಾರೆ.

**ಶಿಷ್ಯ.—** ಗುರುಗಳೆಷ್ಟು ವರ್ಷಂಗಳೊಳಗೆ ಪ್ರಸನ್ನರಾಗುತ್ತಾರೆ?

**ಗುರುಗಳು:—** ಎಲ್ಲೈ ಸತ್ವರ ಪ್ರಸನ್ನರಾಗುವದು, ಅಥವಾ ಬಹಳವಿಲಂಬದಿಂದಾಗುವದು, ಇದು ಶಿಷ್ಯನ ಶ್ರದ್ಧೆಯ ಕಡಿಗಿರುತ್ತದೆ.

**ಶಿಷ್ಯ**:— ಗುರುಗಳು ಪ್ರಸನ್ನರಾಗುವದಕ್ಕಿಂತಪೂರ್ವದಲ್ಲಿ ಗುರುಸೇವೆಯು ಮಾಡುತ್ತಿರಲಾಗಿ ಮರಣಪ್ರಾಪ್ತಿಯಾದರೆ ಆತಂಗೆ ಗತಿಯಾವದು ?

**ಗುರುಗಳು**.—ಹೇ ಸುಶೀಲಾ ಆ ಗುರುಭಕ್ತನು ಸ್ವರ್ಗಲೋಕಕ್ಕೆ ಹೋಗಿ ಅಲ್ಲಿಯ ಭೋಗಂಗಳಂ ಭೋಗಿಸಿ, ಪುನಃ ಜನಕ, ವರೇಣ್ಯ, ಮುಂತಾದ ಜೀವನ್ಮುಕ್ತರಾದರಸರ ಕುಲದಲ್ಲಿ ಅಥವಾ ಯೋಗಿಕುಲದಲ್ಲಿ ಜನಿಸಿ, ಅಲ್ಲಿಪುನಃ ಪೂರ್ವಸಂಸ್ಕಾರದ ಪ್ರಕಾರ ಸದ್ಗುರುಗಳಿಗೆ ಶರಣಂಪೋಗಿ, ಜ್ಞಾನವಂ ಸಂಪಾದಿಸಿ ಮುಕ್ತನಾಗುತ್ತಾನೆ

## ೧೮ ನೇ ಭಾಗ.

### ಉಪಕ್ರಮ ಪಂಚೀಕರಣ, ಪಿಂಡಗಳಲ್ಲಿ ಜೀವರೂಪಗಳಿಂದ ಈಶ್ವರಪ್ರವೇಶ ಅದರಿಂದವನ ಈಶ್ವರತ್ವಕ್ಕೆ ಹಾನಿಯಿಲ್ಲೆಂಬುವದು, ಈಶಸೃಷ್ಟಿ ಜೀವಸೃಷ್ಟಿಗಳವಿಭಾಗಗಳು.

**ಶಿಷ್ಯ**:— ಪಂಚೀಕರಣವೆಂದೊಡೇನು ?

**ಗುರುಗಳು**:— ಹೇ ಬಾಲಕಾ, ಉತ್ತರಕ್ಕೆ ಕ್ರಮದ ಜರೂರವಿರುವದರಿಂದ ಪ್ರಥಮದಲ್ಲಿ ಉಪಕ್ರಮವಂ ಪೇಳ್ವೆನು. ಶ್ರವಣಮಾಡು ಉತ್ಪತ್ತಿಗಿಂತ ಪೂರ್ವದಲ್ಲಿ ಒಂದೇ ಅಖಂಡ ನಿರ್ವಿಕಾರ ಅದ್ವೈತ ಏಕರಸ ನಿತ್ಯಜ್ಞಾನಾನಂದಬ್ರಹ್ಮವಿತ್ತು ಅದರೊಳಗೆ ಅನಾದಿಕಾಲದಲ್ಲಿ ಮಾಯೆಯುದ್ಭವಿಸಿತು.

**ಶಿಷ್ಯ** :— ಮಾಯೆ ಯೆಂದೊಡೇನು?

**ಗುರುಗಳು**:— ಸರ್ವಜ್ಞತ್ವ ಶಕ್ತಿಯು; ಈ ಮಾಯೆಯನಿರ್ವಾಚ್ಯವದೆ. ಹ್ಯಾಗೆಂದೊಡೆ ಕೇಳು. ಇದಕ್ಕೆ ಸತ್ಯವೆನಬೇಕಾದೊಡೆ ವಿಚಾರದಿಂ ನಷ್ಟವಾಗುತ್ತದೆ ಅಸತ್ಯವೆನಬೇಕಾದರೆ ಜಗದ್ರೂಪಕಾರ್ಯದಿಂ ಪ್ರತ್ಯಕ್ಷ ಕಂಡಬರುತ್ತದೆ; ಅಭಿನ್ನವೆನಬೇಕಾದರೆ ಬ್ರಹ್ಮವು ನಿಶ್ಚಲವದೆ; ಮತ್ತುಮಾಯೆಯು ಚಂಚಲವಿರುತ್ತದೆ. ವಿಚಾರದಿಂ ಮಾಯೆಯು ನಷ್ಟವಾದನಂತರ ಶುದ್ಧ ಬ್ರಹ್ಮವು ತನ್ನಿಂದತಾನೇ ಉಳಿಯುತ್ತದೆ. ಇದರದೆಶೆಯಿಂದಮಾಯೆಯಭಿನ್ನವಲ್ಲ. ಭಿನ್ನವೆನಬೇಕಾದರೆ ಬ್ರಹ್ಮದ ಹೊರತು ಜ್ಞಾನವಿಲ್ಲ. ಮತ್ತುಸರ್ವಜ್ಞತ್ವಕ್ಕೂ ಕಿಂಚಿಜ್ಞತ್ವಕ್ಕೂ ಜ್ಞಾನದ ಆಶ್ರಯವೇ ಬೇಕಾಗಿರುವ ಕಾರಣ ಇವುಗಳಿಗೆ ಸ್ವತಂತ್ರಾಸ್ತಿತ್ವವು ಸಂಭವಿಸುವದಿಲ್ಲ; ಆದಕಾರಣ ಭಿನ್ನವಲ್ಲ. ನಿರವಯವವೆನಬೇಕಾದರೆ ಕಾರ್ಯರೂಪದಿಂ ಸಾವಯವವಾಗಿ ತೋರುತ್ತದೆ. ಸಾವಯವವೆನಬೇಕಾದರೆ ಸಾವಯವಪದಾರ್ಥವುತ್ಪನ್ನ

ವಾಗುವವಗಿಂತ ಪೂರ್ವದಲ್ಲಿ ಅವುಗಳಿಗೆ ಕಾರಣವಾದ ಮಾಯೆ ಯಿರುತ್ತದೆ; ಇದರ ದೆಶೆಯಿಂದ ಸಾವಯುವವಲ್ಲ, ಪೂರ್ವದಲ್ಲಿ ನಿರವಯುವವಿದ್ದು ನಂತರ ಸಾವಯುವ ವಾಯ್ತು; ಹೀಗೆನಬೇಕಾದೊಡೆ ನಿರವಯುವವಾದ ಪದಾರ್ಥ ಸಾವಯುವವಾಗುವದು ಸಂಭವಿಸುವದಿಲ್ಲ. ಮತ್ತು ಸಾವಯುವ ಪದಾರ್ಥಗಳ ನಾಶವಾಗುತ್ತದೆ; ಆಗ್ಗೆ ಮಾಯೆಯು ಸಾವಯುವತ್ವರೂಪಪರಿಣಾಮಕ್ಕೆ ಪಾತ್ರವಾಗಿದ್ದರೆ ಆದರ ನಾಶ ವಾಗುತ್ತಿತ್ತು. ಈ ಪ್ರಕಾರ ಮಾಯೆಯ ನಿರ್ಧಾರವಂ ಮಾಡಲಿಕ್ಕೆ ಬರುವದಿಲ್ಲ ಇಂಥ ಮಾಯೆಯಲ್ಲಿ ಬ್ರಹ್ಮದ ಪ್ರತಿಬಿಂಬವಿರುತ್ತದೆ. ಆ ಅಧಿಷ್ಠಾನಸಹಿತ ಪ್ರತಿ ಬಿಂಬಕ್ಕೆ ಈಶ್ವರನೆಂಬ ನಾಮವದೆ. ಆತನು ಸರ್ವಜ್ಞ ಸರ್ವಕರ್ತ, ಹಾಗು ಜೀವರಿಗೆ ಕರ್ಮಫಲಂಗಳನ್ನು ಕೊಡುವಂಥಾತನು, ಅವನು ಮಾಯಾಗುಣಂ ಗಳಿಂದ ಸಕಲ ಜಗತ್ತಕ್ಕೆ ಕಾರಣವಾದ ಅವ್ಯಾಕೃತವಂ [ಸಮಷ್ಟಿ ಅಜ್ಞಾನವಂ] ನಿರ್ಮಿಸಿದನು. ಆ ಅಜ್ಞಾನದಿಂದ ಸೂಕ್ಷ್ಮವಾದ ಅಪಂಚೀಕೃತ ಪಂಚಮಹಾ ಭೂತಂಗಳನ್ನು ನಿರ್ಮಿಸಿದನು. ಮಾಯೆಯಲ್ಲಿದ್ದ ಮೂರುಗುಣಗಳು ಮಾಯಾ ಕಾರ್ಯದಲ್ಲಾದರೂ ಇರುತ್ತವೆ; ಆ ಗುಣಂಗಳಿಂದಸಹಿತವಾದ ಅಪಂಚೀಕೃತ ಪಂಚಮಹಾಭೂತಗಳಿಗೆ ಹಿರಣ್ಯಗರ್ಭವೆಂಬ ನಾಮವದೆ. ಹಿರಣ್ಯಗರ್ಭವೇ ಪ್ರಲಯಕಾಲದಲ್ಲಿ ದೇವತೆಗಳಿರುವ ಸ್ಥಾನವು. ಮುಂದೆ ಆ ಪಂಚಭೂತಂಗಳ ಕರ್ದ ಮವಂ ಮಾಡಿ; ಆ ಕರ್ದಮದ [ಕೆಸರಿನ] ವಿರಾಟದೇಹವಂ ಮಾಡಿದನು. ಆಕರ್ದ ಮದ ರೀತಿಗೆ ಪಂಚೀಕರಣವೆಂದೆನ್ನುತ್ತಾರೆ; ಹಾಗು ಕರ್ದಮದಿಂ ಆದ ಭೂತ ಗಳಿಗೆ ಪಂಚೀಕೃತಭೂತಗಳೆಂದೆನ್ನುತ್ತಾರೆ.

ಇನ್ನು ಪಂಚೀಕರಣದರೀತಿಯನ್ನು ಹೇಳುತ್ತೇನೆ.; ಶ್ರವಣ ಮಾಡು. ಪ್ರಥ ಮದಲ್ಲಿ ಆಕಾಶಾದಿ ಪಂಚಭೂತಗಳೊಳಗಣ ಪ್ರತ್ಯೇಕದೆರಡೆರಡು ಭಾಗಂಗಳಂ ಮಾಡಿ, ಅವುಗಳನ್ನು ಪ್ರಥಕ್‌ಪ್ರಥಕ್ ಸ್ಥಾಪಿಸಿ, ಪ್ರತ್ಯೇಕ ಭೂತದೊಂದೊಂದು ಭಾಗವಂ ತೆಗೆದುಕೊಂಡು ಅದರ ನಾಲ್ಕು ಭಾಗಂಗಳಂ ಮಾಡಿ, ತೆಗೆಧುಕೊಂಡಿದ್ದ ಭಾಗವು ದಾವ ಭೂತದ್ದಿದ್ದೀತೋ ಆ ಭೂತವಂ ಬಿಟ್ಟು ಅನ್ಯ ಪ್ರತ್ಯೇಕಭೂತದ ಬೇರೆ ಬೇರಿಟ್ಟ ಏಕದ್ವಿತೀಯಾಂಶಂಗಳಿಗೆ ಒಂದೊಂದು ಭಾಗವಂ ಕೊಟ್ಟನು. ಈ ಪ್ರಕಾರ ಸರ್ವಭೂತಂಗಳ ವ್ಯವಸ್ಥೆಯಾಗಿ ಪ್ರತ್ಯೇಕಭೂತದಲ್ಲಿ ತನ್ನ ಏಕದ್ವಿತೀ ಯಾಂಶ, ಮತ್ತು ಅನ್ಯ ಪ್ರತ್ಯೇಕದೇಕಾಷ್ಟಮಾಂಶಕೂಡಿ ಪ್ರತ್ಯೇಕ ಭೂತವು ಪೂರ್ಣವಾಯ್ತು. ಇಂಥ ಕರ್ದಮಧಿಂದಾ (ಕೆಸರಿನಿಂದಾ) ದ ಭೂತಂಗಳಿಂದ ವಿರಾಟೋತ್ಪತ್ತಿಯಾಯ್ತೆಂದು ತಿಳಿಯಬೇಕು. ಈ ಪ್ರಕಾರದಿಂ ಈಶ್ವರನ ವಿರಾಟ, ಹಿರಣ್ಯಗರ್ಭ ಅವ್ಯಾಕೃತ ಮತ್ತು ಮೂಲಪ್ರಕೃತಿಯೆಂಬ ನಾಲ್ಕು ದೇಹಂಗಳುತ್ಪತ್ತಿಯಾಯ್ತು. ಮುಂಧೆ ಈಶ್ವರನು ತನ್ನ ವಿರಾಟದೇಹಧಿಂದ [ಪಂಚೀಕೃತ ಭೂತಂಗಳಿಂದುತ್ಪನ್ನವಾದನ್ನಧಿಂದ] ಪಿಂಡಗ್ಗಳ [ಜೀವರ ಸ್ಥೂಲದೇಹಂಗಳ] ಉತ್ಪತ್ತಿಯೂ. ಹಿರಣ್ಯಗರ್ಭದಿಂ [ ಅಪಂಚೀಕೃತ

**ಭೂತಂಗಳಿಂದ**) ಜೀವರ ಸೂಕ್ಷ್ಮದೇಹಗಳುತ್ಪತ್ತಿಯೂ, ಅವ್ಯಾಕೃತದಿಂ (**ಸಮಷ್ಟ್ಯಜ್ಞಾನದಿಂ**) ಜೀವರ ವ್ಯಷ್ಟ್ಯಜ್ಞಾನರೂಪ ಕಾರಣದೇಹಂಗಳುತ್ಪತ್ತಿಯೂ, ಮತ್ತು ತನ್ನ ಮೂಲಪ್ರಕೃತಿ ಸಾಮರ್ಥ್ಯದಿಂ (**ಸಮಷ್ಟಿ ಸಾಕ್ಷಿತ್ವದಿಂ**) ಜೀವರ ಮಹಾಕಾರಣ ದೇಹಗಳ (**ವ್ಯಷ್ಟಿ ಸಾಕ್ಷಿತ್ವಂಗಳ**) ಉತ್ಪತ್ತಿಯೂ ಮಾಡಿ ಕಾರ್ಯವ್ಯವಸ್ಥೆಯು ಸಲುವಾಗಿ ತಾನು ಜೀವರೂಪಂಗಳಿಂದದರೊಳಗೆ ಪ್ರವೇಶಿಸಿದನು. ಈಶ್ವರನು ಜೀವರೂಪಂಗಳಿಂದ ಪ್ರವೇಶಿಸಿದಬಳಿಕ ಈಶ್ವರನ ಹಾನಿಯಾಯ್ತೆಂದು ತಿಳಿಯಬಾರದು. ಯಾಕೆಂದರೆ ಈತನು (**ಅಘಟಿತಘಟನಾಪಟೀಯಸಿ**) ಇಂಥ ಮಾಯೆಯ ಯೋಗದಿಂ ಅಘಟಿತವಾದದ್ದನ್ನು ಮಾಡಲಿಕ್ಕೆ ಸಮರ್ಥನಿದ್ದಾನೆ. ಆದಕಾರಣ ಜೀವರಿಗೆ ಕರ್ಮಫಲಂಗಳಂ ಕೊಡುವಗೋಸ್ಕರ ಈಶ್ವರತ್ವದಿಂ ತಾನು ಭಿನ್ನನಿದ್ದು, ಪಿಂಡಗಳೊಳಗೆ ಜೀವರೂಪಂಗಳಿಂದ ಪ್ರವೇಶಿಸಿದನು. ಈಶ್ವರನ ಹಾನಿಯಾಗಿದ್ದರೆ ಸೃಷ್ಟಿಸ್ಥಿತ್ಯಂತಾದಿ ಸರ್ವ ಕೃತ್ಯಗಳು ನಿಯಮದಿಂದ ನಡಿಯುತ್ತಿದ್ದಿಲ್ಲ. ನೀನೆಂದಿ ಅಲ್ಲೋ! ಈಶ್ವರನು ಪ್ರವೇಶಿಸುವಗಿಂತ ಪೂರ್ವದಲ್ಲಿ ಒಮ್ಮೆ ನಿಯಮಂಗಳಂ ಹಾಕಿಟ್ಟಿದ್ದಾನೆ, ಆದಕಾರಣ ನಿಯಮದಿಂ ಜಗತ್ಯದ ವ್ಯವಸ್ಥೆಯು ನಡದಿರುತ್ತದೆ. ಇದಕೆ ಕೇಳು. ದಾವ ನೃಪನು, ದಾವ ನಿಯಮಗಳ ಮಾಡುತ್ತಾನೋ ಆ ನಿಯಮಗಳು, ಆ ನೃಪನು ಸಿಂಹಾಸನಸ್ಥನಾಗಿರುವ ಪರ್ಯಂತರ ನಡಿಯುತ್ತವೆ; ಪದಚ್ಯುತನಾದನಂತರ ನಡಿಯುವದಿಲ್ಲ. ಇದರಮೇಲಿಂದ ಈಶ್ವರನ ಈಶ್ವರತ್ವಕ್ಕೆ ಹಾನಿಯಾದರೆ ಈಶ್ವರನು ಮಾಡಿದ ನಿಯಮಂಗಳ ಪ್ರಕಾರ ಜಗತ್ಯದ ಸ್ಥಿತಿಯಾಗುತ್ತಿರುತ್ತಿದ್ದಿಲ್ಲ. ಹಾಗುನಿಯಮಕ್ಕನು ಸರಿಸಿ ನಡಿಯುತ್ತಿದ್ದೊಡೆ ಜಗತ್ಯದ ನಾಶವಾಗುತ್ತಿತ್ತು. ಮತ್ತು ನೀನೆಂದಿ ಅಲ್ಲೋ! ಕಾಲಸೂಚಕಯಂತ್ರವು ಒಮ್ಮೆ ಕಿಲ್ಲಿಯನ್ನು ಕೊಟ್ಟರೆ ಹ್ಯಾಗೆ ನಡಿಯುತ್ತಿರುತ್ತದೋ ಹಾಗೆಯೇ ಈಶ್ವರನು ಜೀವತ್ವಂಗಳ ಸ್ವೀಕಾರವು ಮಾಡುವಗಿಂತ ಪೂರ್ವದಲ್ಲಿ ಈ ಬ್ರಹ್ಮಾಂಡರೂಪ ಘಡಿಯಾಳಕ್ಕೆ ಒಮ್ಮೆ ನಿಯಮರೂಪ ಕಿಲ್ಲಿಯನ್ನು ಕೊಟ್ಟಿರುತ್ತಾನೆ; ಅದರಿಂದ ಜಗತ್ಯದ ವ್ಯವಸ್ಥೆಯು ನಿಯಮದಿಂದ ನಡದಿರುತ್ತದೆ. ಆದರೆ ಆ ಯಂತ್ರವು ಜಡವಿದ್ದಮೂಲಕ ನಿಯಮಗಳುಲ್ಲಂಘನವಂ ಮಾಡಲಿಕ್ಕೆ ಶಕ್ತವಲ್ಲ. ಪರಂತು ಈ ಜಗದ್ರೂಪವಾದ ಯಂತ್ರವು ಹಾಗೆ ಜಡವಲ್ಲ; ಇದರಲ್ಲಿ ದೇವತೆ, ಮನುಷ್ಯ, ರಾಕ್ಷಸ ಮುಂತಾದ ಅಸಂಖ್ಯ ಚೇತನಾತ್ಮಕ ಪ್ರಾಣಿಗಳಿವೆ, ಆದಕಾರಣ ಈಶ್ವರನ ಭಯವಿಲ್ಲದಿದ್ದರೆ ಈ ಜಗತ್ಯದ ಸ್ಥಿತಿಯು ನಿಯಮದಿಂದ ಆಗುತ್ತಿದ್ದಿಲ್ಲ; ಪರಂತು ಜಠರಾಗ್ನಿಯು ದೇಹಕ್ಕೆ ದಹನಮಾಡುವದಿಲ್ಲ; ಸಮುದ್ರವು ತನ್ನ ಸೀಮೆಯನ್ನುಲ್ಲಂಘಿಸುವದಿಲ್ಲ; ಸೂರ್ಯನು ಬಹಳ ತಪ್ತನಾಗುವದಿಲ್ಲ; ಮಳೆಗಾಳಿಗಳು ನಿಯಮದಿಂದಾಗುತ್ತವೆ, ಕಾರಣಕ್ಕೆ ವಿಜಾತೀಯವಾಗಿ ಕಾರ್ಯೋತ್ಪತ್ತಿಯಾಗುವದಿಲ್ಲ. ಮುಂತಾದ ಅನೇಕ ಸ್ಥಿತಿಗತಿಗಳ ಮೇಲಿಂದ ಜಗತ್ಯದ ವ್ಯವಸ್ಥೆಯು ನಿಯಮದಿಂದ ನಡದಿರುತ್ತದೆಂದು ಕಂಡುಬರು

ತ್ತದೆ. ಆದರೆ ದ್ಯಾವಾತನ ಭಯದಿಂದ ಮಳೆ, ವಾಯು, ಸೂರ್ಯ ಜಠರಾಗ್ನಿ, ಪೃಥ್ವಿ, ಮುಂತಾದವುಗಳು [ಕಾಲುನಡಿಯುತ್ತವೆಂದೆಂದಲ್ಲಿ ಹ್ಯಾಗೆ ಕಾಲುಗಳಭಿಮಾನಿಯನ್ನು ಗ್ರಹಿಸುತ್ತಾರೋ ಹಾಗೆಯೇ ಮಳೆ ಮುಂತಾದ ಅಚೇತನ ಪದಾರ್ಥಗಳು ಸ್ವತಃ ಕಾರ್ಯಕ್ಕೆ ಅಸಮರ್ಥಗಳಿದ್ದ ಕಾರಣ ತತ್ತದಭಿಮಾನಿಗಳ ಗ್ರಹಣ ಮಾಡಬೇಕು. ] ನಿಯಮದಿಂದೆ ನಡಿಯುತ್ತವೆಯೋ ಆ ಈಶ್ವರನ ಹಾನಿಯನ್ನು ಕಲ್ಪಿಸುವದೇ ಮೂರ್ಖತ್ವವು; ತಾತ್ಪರ್ಯವೇನೆಂದೊಡೆ ಈಶ್ವರನು ಈಶತ್ವದಿಂ ಭಿನ್ನನಿದ್ದು, ಜೀವತ್ವಂಗಳಿಂದ ಪಿಂಡದಲ್ಲಿ ಪ್ರವೇಶಿಸಿದನು. ಇರಲಿ, ಪರಂತು ಈ ಉತ್ಪತ್ತಿಯು ಕಲ್ಪಿತವದೆ. ಹ್ಯಾಗೆಂದೊಡೆ ಮಾಯೆಯೆಂಬರೆ ಕಲ್ಪನೆಯು; ಮತ್ತು ಅದರಿಂದೇ ಸರ್ವ ಉತ್ಪತ್ತಿಯು, ಇದರ ಮೇಲಿಂದ ಈಶ್ವರತ್ವ ಜೀವತ್ವಗಳಾದರೂ, ಬ್ರಹ್ಮದಲ್ಲಿ ಕಲ್ಪಿತ ಅವೆಂದು ಹೇಳಲಿಕ್ಕವಶ್ಯವಿಲ್ಲ. ಇನ್ನು ಜೀವಸೃಷ್ಟಿ ಮತ್ತು ಈಶ್ವರಸೃಷ್ಟಿ ಯಿವುಗಳ ಭಿನ್ನತ್ವವಂ ಹೇಳ್ವೆನು. ಈಶ್ವರ ನಿರ್ಮಿತ ಸಕಲ ಪ್ರಪಂಚವದೆ; ಮತ್ತು ಅದರೊಳಗಣ ಪದಾರ್ಥಂಗಳಮೇಲೆ ಅಹಂತೆ, ಮಮತೆ, ಇಚ್ಛೆ, ದ್ವೇಷ, ಮೋಹ, ಲೋಭ, ಮುಂತಾದ್ದವುಗಳನ್ನು ಮಾಡುವದೇ ಜೀವಸೃಷ್ಟಿಯು. ಜೀವಸೃಷ್ಟಿಯ ನಾಶವಾದೊಡೆ ಜೀವನು ಸಹಜವೇ ಬ್ರಹ್ಮರೂಪನಾಗುತ್ತಾನೆ; ಅವನಿಗೆ ತನ್ನ ಬಂಧನಿವೃತ್ತಿಯಾಗಲುವಾಗಿ ಈಶ್ವರಸೃಷ್ಟಿನಾಶದ್ದೇನು ಪ್ರಯೋಜನವಿಲ್ಲ

## ೧೯ ನೇ ಭಾಗ.

### ಜೀವನು ತನ್ನ ಸೃಷ್ಟಿಯನ್ನು ನಾಶಿಸಿದ್ದೊಡೆ ಬ್ರಹ್ಮರೂಪನೇ ಆಗುತ್ತಾನೆ.

**ಶಿಷ್ಯ:—** ಜೀವನು ತನ್ನ ಸೃಷ್ಟಿಯನ್ನು ನಾಶಿಸಿದರೆ ಆವನು ಜೀವತ್ವವಂ ಸ್ವೀಕರಿಸುವಗಿಂತಪೂರ್ವದಲ್ಲಿ ಈಶ್ವರನಿದ್ದ ಕಾರಣ ಈಶ್ವರನೇಆಗುವನು, ಪರಂತು ಶುದ್ಧಬ್ರಹ್ಮರೂಪನಾಗುವದು ಸಂಭವಿಸುವದಿಲ್ಲ. ಹೀಗೆನಗೆ ಸಂಶಯವು ಬರುತ್ತದೆ. ಆದರೆ ಹೇ ದಯಾಘನನಾದ ಗುರುವರನೇ, ತಾವು ಸಂಶಯನಿವೃತ್ತಿಯನ್ನು ಮಾಡಲಿಕ್ಕೆ ಸಮರ್ಥರಿದ್ದೀರಿ; ಆದಕಾರಣ ಎನ್ನಮೇಲೆ ಅನುಗ್ರಹವಂ ಮಾಡಿ ಎನ್ನ ಸಂಶಯಂಗಳ ನಿವಾರಣೆಯನ್ನು ಮಾಡಬೇಕು.

**ಗುರುಗಳು:-** ಹೇ ವತ್ಸಾ, ಕೇಳು. (**ತತ್ವಮಸಿ, ಅಹಂಬ್ರಹ್ಮಾಸ್ಮಿ,**) ಮುಂತಾದ ಮಹಾವಾಕ್ಯಂಗಳ ವಿವರಣೆಯನ್ನು ಗುರುಮುಖದಿಂ ಕೇಳಿ, ಮನನ ಧ್ಯಾನಂಗಳಿಂದ ದೃಢಮಾಡಿದರೆ ನಾನೇಬ್ರಹ್ಮನಿದ್ದೇನೆಂಬ ದೃಢಜ್ಞಾನವಾಗುತ್ತದೆ. ಅದರಿಂದ ನಾನಾರೆಂಬುವದನ್ನು ನಾನು ತಿಳಿಯುವದಿಲ್ಲ. ಈ ಪ್ರಕಾರದ ಆತ್ಮಜ್ಞಾನವೆಂದೊಡೆ ಕಾರಣದೇಹ; ದಾವುದು ಸ್ಥೂಲಸೂಕ್ಷ್ಮದೇಹಂಗಳಿಗೆ ಕಾರಣವೋ

ಆದು ನಷ್ಟವಾಗುತ್ತದೆ. ನಾನೇಬ್ರಹ್ಮನಿದ್ದೇನೆಂಬ ಜ್ಞಾನವಾದನಂತರ ಈಶ್ವರಮೊದಲು ಮಾಡಿಕೊಂಡೆಲ್ಲ ಪದಾರ್ಥಗಳಿಗೆ ತಾನೇ ಅಧಿಷ್ಠಾನನಾಗಿರುವದರಿಂದ ರಾಗದ್ವೇಷ, ಶ್ರೇಷ್ಠತ್ವ ಕನಿಷ್ಠತ್ವ, ಸುಖ ದುಃಖ, ಅಹಂತೆ ಮಮತೆ ಮುಂತಾದ ಜೀವಸೃಷ್ಟಿಯುಳಿಯುವದಿಲ್ಲ; ಮುಂದೆ ಅಹಂಬ್ರಹ್ಮಸ್ಫೂರ್ತಿರೂಪ ಮಾಯೆಯು, ವ್ಯಷ್ಟೀಶ್ವರನೆಂದೊಡೆ ಪ್ರತ್ಯಗಾತ್ಮನು ಅಧಿಷ್ಠಾನತ್ವವಂ ಬಿಟ್ಟಿದ್ದ ಕಾರಣ ಶಾಂತವಾಗುತ್ತದೆ, ಆಗ್ಗೆ ಜೀವನು ಪರಿಪೂರ್ಣ ನಿರ್ವಿಕಲ್ಪ ಬ್ರಹ್ಮರೂಪನೇ ಆಗುತ್ತಾನೆ. ಈಶತ್ವದಲ್ಲಿ ಐಕ್ಯಹೊಂದುವದಿಲ್ಲ. ಇನ್ನು ಜೀವನು ಮುಕ್ತನಾದನಂತರ ಅವನುಪಾಧಿಗಳು ತಮ್ಮತಮ್ಮ ಸಮಷ್ಟಿರೂಪದಲ್ಲಿ ಏಕತ್ವಹೊಂದುತ್ತವೆಂದು ಏನಕೇ ಪುರುಷರ ಮತವಿರುತ್ತದೆ; ಪರಂತು ಅವು ಎಲ್ಲಿ ಹೋಗುತ್ತವೆಂದು ವಿಚಾರವಂ ಮಾಡಲಿಕ್ಕೆ ಕಾರಣವೇನು? ಜೀವನಕಡಿಂದ ಹೋದದಾಯ್ತು; ತಿಳಿಯುವ, ಮರೆಯುವ ಭಾವರಹಿತ ಪರಿಪೂರ್ಣ ಶುದ್ಧ ಸಚ್ಚಿದಾನಂದನಾದ ಜೀವನಲ್ಲಿ ಅಂತು ಅವುಗಳುಳಿಯುವದು ಸಂಭವಿಸುವದಿಲ್ಲ. ಜೀವನ್ಮುಕ್ತನು ಮಾಯಾಧಿಷ್ಠಾನ ಬ್ರಹ್ಮದಲ್ಲಿ ಎಂದೊಡೆ ಈಶ್ವರನಲ್ಲಿ ಐಕ್ಯಹೊಂದುತ್ತಾನೆಂದು ಏನಕೇ ಜನರೆನ್ನುತ್ತಾರೆ; ಪರಂತು ಮೇಲಿನ ವಿಚಾರದಿಂ ನೋಡಲಾಗಿ ಶುದ್ಧ ಬ್ರಹ್ಮರೂಪನೇ ಆಗುತ್ತಾನೆಂದು ಸ್ಪಷ್ಟವಾಗುತ್ತದೆ. ಮತ್ತು ಶ್ರುತಿಯುಮತವಾದರೂ ಹೀಗೇ ಅದೆ. ಶ್ರುತಿ:-(ಬ್ರಹ್ಮವೇದ ಬ್ರಹ್ಮೈವಭವತಿ) ಕದಾಚಿತ್ ಈಶ್ವರನಲ್ಲಿ ಐಕ್ಯವು ಹೊಂದುತ್ತಾನೆಂದು ಕಬೂಲ ಮಾಡಿದಾಗ್ಯೂ ದೋಷವಿಲ್ಲ. ಹ್ಯಾಗೆಂದೊಡೆ ಈಶ್ವರಂಗೆ ಬದ್ಧತ್ವಾದಿ ವಿಕೃತಿಗಳು ದಾವಾಗ್ಯೂ ಇಲ್ಲ. ಹಾಗೀಶ್ವರನಲ್ಲಿ ಐಕ್ಯವಂ ಪಡಿಯುತ್ತಾನೆಂದೆಂಬುವವರ ಮತವಾದರೂ ಕಲ್ಪಾಂತದಲ್ಲಿ ಆತನು ಶುದ್ಧ ಬ್ರಹ್ಮನೇಆಗುತ್ತಾನೆ; ಈ ಪ್ರಕಾರದ್ದದೆ. ಇದರ ಮೇಲಿಂದ ಆತನು ಪುನಃ ಸೃಷ್ಟಿಯಸಂಗಡಬರುವದಿಲ್ಲೆಂದು ಸ್ಪಷ್ಟವೇಆಗುತ್ತದೆ. ಹಾಗು ಬರುವದುಸಂಭವಿಸುವದೇ ಇಲ್ಲ. ಇದರ ಕಾರಣವೇನೆಂದೊಡೆ ಅವನು ಜ್ಞಾನದಿಂ ಮಾಯೆಯಿಂದ ಭಿನ್ನನಾಗಿರುತ್ತಾನೆ; ಆದಕಾರಣ ಈಶ್ವರನಲ್ಲಿ ಐಕ್ಯವಂ ಹೊಂದಿದಾಗ್ಯಾದರೂ ಈಶ್ವರನ ಸತ್ಯಸ್ವರೂಪದಲ್ಲಿ ಎಂದೊಡೆ ಬ್ರಹ್ಮದಲ್ಲಿಯೇ ಐಕ್ಯ ಹೊಂದುತ್ತಾನೆ. ಮಾಯೆಯಲ್ಲಿ ಹೊಂದುವದಿಲ್ಲ. ಆದಕಾರಣ ಪುನರುತ್ಪತ್ತಿಯು ಸಂಭವಿಸುವದಿಲ್ಲ.

# ೨೦ ನೇ ಭಾಗ.

## ಕೂಟಸ್ಥಲಕ್ಷಣ, ಜೀವಲಕ್ಷಣ, ವಿಶೇಷಣಂಗಳಂ ಬಾಧಿಸಿ ಉಳಿದ ಜೀವನು ಕೂಟಸ್ಥರೂಪನೇ ಇದ್ದಾನೆ.

**ಶಿಷ್ಯ:**—ಕೂಟಸ್ಥನೆಂದಾರಿಗೆನಬೇಕು? ಮತ್ತು ಜೀವನೆಂದಾರಿಗೆನಬೇಕು? ಕೂಟಸ್ಥನು ಬ್ರಹ್ಮದಲ್ಲಿ ಐಕ್ಯವಂ ಪಡಿಯುತ್ತಾನೆ? ಅಥವಾ ಜೀವನು ಪಡಿಯುತ್ತಾನೆ?

**ಗುರುಗಳು:**— ಜಾಗರ ಸ್ವಪ್ನಕಾಲದಲ್ಲಿ ಬುದ್ಧಿಯು ಜೀವಚೈತನ್ಯ ಸಹಿತ ವಾಗಿ ವ್ಯವಹರಿಸುತ್ತದೆ; ಆ ಕಾಲದಲ್ಲಿ ದಾವನು ಅದಕ್ಕೆ ಪ್ರಕಾಶಿಸುತ್ತಾನೋ ಹಾಗೂ ಜಾಗರ ಕಾಲದಲ್ಲಿ ತೂಷ್ಣಿ ( ವಿಶೇಷ ಶ್ರಮವಂಮಾಡಿ ವಿಶ್ರಾಂತಿಯು ದೆಶೆಯಿಂದೆಲ್ಲ ಕಲ್ಪನಾದಿವ್ಯವಹಾರಂಗಳಂ ಬಿಟ್ಟು ಸುಮ್ಮಕೂತವೇಳೆಯಲ್ಲಿರುವ ಬುದ್ಧಿಯ ಸ್ಥಿತಿಯು ) ಸ್ಥಿತಿಗೆ ದಾವಾತನು ಪ್ರಕಾಶಿಸುತ್ತಾನೋ, ಮತ್ತು ಸುಷು ಪ್ತ್ಯವಸ್ಥೆಯೊಳಗೆ ಕೂಟಸ್ಥನಪ್ರತಿಬಿಂಬ ರೂಪವಾದ ಜೀವ ಹಾಗೂ ಬುದ್ಧಿ ಇವು ಗಳ ಅಜ್ಞಾನಾಕಾರವಾದ ಸ್ಥಿತಿಗೆ ದಾವಾತನು ಸ್ವಪ್ರಕಾಶನಾಗಿ ಪ್ರಕಾಶಿಸು ತ್ತಾನೋ ಆತನೇ ಕೂಟಸ್ಥನು. ಇನ್ನು ಜೀವನೆಂದರೇನು? ಇದನ್ನು ಹೇಳ್ತೇನು; ಬುದ್ಧಿವೃತ್ತಿಯೊಳಗಾದ ಕೂಟಸ್ಥನಪ್ರತಿಬಿಂಬಕ್ಕೆ ಅಧಿಷ್ಠಾನ ಮತ್ತು ಪ್ರತಿಬಿಂಬಂ ಗಳಂ ಏಕತ್ರಮಾಡಿ ಜೀವನೆಂದೆನ್ನುತ್ತಾರೆ ಹ್ಯಾಗೆ ಭ್ರಾಂತನಾದ ಮನುಷ್ಯನು ತಾನು ಹೋಗಿಯದಂಡಿಗೆ ವೃಕ್ಷದ ಮೇಲೆಕೂತಿದ್ದು, ತನ್ನ ಸವೃಕ್ಷ ಪ್ರತಿಬಿಂ ಬವಂ ನೀರಿನೊಳಗೆ ಬಿದ್ದದ್ದನ್ನುನೋಡಿ, ನಾನೇ ಹರಿದು ಹೋಗುತ್ತೇನೆಂದು ತಿಳಿದು ಭ್ರಾಂತಿಯಿಂದ ಶೋಕಾಗ್ರಸ್ತನಾಗುತ್ತಾನೋ, [ವಾಸ್ತವಿಕ ನೋಡಲಾಗ ತಾನಂತು ಹರಿಯಲಿ; ಪರಂತು ಪ್ರತಿಬಿಂಬ ಸಹ ಹರಿದುಹೋಗುವದಿಲ್ಲ ಪರಂತು ಭ್ರಾಂತಿಯು ಪನೀರಿನ ಹರಿಯುವ ಧರ್ಮವಂ ನೀರಿನಹಾಗು ಪ್ರತಿಬಿಂಬದ ಅವಿ ವೇಕದಿಂ ಪ್ರತಿಬಿಂಬದಲ್ಲಿ ಆರೋಪಿಸಿ ಪ್ರತಿಬಿಂಬ ಹಾಗು ತನ್ನ ಅವಿವೇಕದಿಂ ಪ್ರತಿಬಿಂಬಕ್ಕಾರೋಪಿಸಿದ ಧರ್ಮವಂ ತನಗಾರೋಪಿಸುತ್ತಾನೋ ] ಹಾಗೆಯೇ ಜೀವನು ಬುದ್ಧಿಯಲ್ಲಿ ಬಿದ್ದಂಥ ಆತ್ಮ ಪ್ರತಿಬಿಂಬಕ್ಕೆ ಬುದ್ಧಿಯ ಹಾಗು ಆತ್ಮಪ್ರತಿಬಿಂಬದ ಅವಿವೇಕದಿಂ ಬುದ್ಧಿಧರ್ಮಂಗಳಂ ಆರೋಪಿಸಿ, ಆತ್ಮಪ್ರತಿ ಬಿಂಬದ ಹಾಗು ಆತ್ಮನ ಅವಿವೇಕದಿಂ ಪ್ರತಿಬಿಂಬಕ್ಕಾರೋಪಿಸಿದ ಧರ್ಮಂ ಗಳಂ ಆತ್ಮಂಗಾರೋಪಿಸುತ್ತಾನೆ. ಆ ಬುದ್ಧಿ--ಧರ್ಮ--ವಿಶಿಷ್ಟಾತ್ಮಂಗೆ ಜೀವ ನೆಂಬ ನಾಮುವದೆ. ಮತ್ತು ಆತ್ಮಾನಾತ್ಮ ವಿವೇಕದಿಂ ಅನಾತ್ಮಧರ್ಮಂಗಳಂ ಭಿನ್ನ ಮಾಡಿ, ಶುದ್ಧಮಾಡಿದಂಥ ಆತ್ಮಂಗೆ ಕೂಟಸ್ಥನೆಂದೆನ್ನುವರು. ಇನ್ನು ಶುದ್ಧಮಾಡಿದಂಥ ಆತ್ಮನೆಂದೆಂದಲ್ಲಿ ಶುದ್ಧಮಾಡುವಗಿಂತ ಪೂರ್ವದಲ್ಲಿ ಅವನು

ಅಪ್ರಸಿದ್ಧನೆಂದು ತಿಳಿಯಬಾರದು. ಯಾಕೆಂದರೆ ಆತ್ಮಂಗೆ ಯಾವಾಗ್ಯೂ ಮಲವಿಲ್ಲದಿದ್ದೂ ಅವಿವೇಕದಿಂ ಆರೋಪಿಸಲ್ಪಡುತ್ತದೆ; ಮತ್ತು ಆ ಮಲವು ಆರೋಪಿಸುವವನ ಅವಿವೇಕವು ನಷ್ಟವಾದಕೂಡಲೇ ನಷ್ಟವಾಗುತ್ತದೆ. ಇದರ ರೀತಿಯಿಂದ ಶುದ್ಧವಾಡಿದಂಥ ಆತ್ಮನೆಂದು ಹೇಳಿದ್ದೇವೆ. ಇದರ ಮೇಲಿಂದ ಸ್ಪಷ್ಟವಾಗಿ ತಿಳಿಯುವದೇನೆಂದರೆ ಕೂಟಸ್ಥ ಮತ್ತು ಜೀವ ಇವುಗಳು ಭಿನ್ನ ಗಳಲ್ಲ; ಆದಕಾರಣ ಮೋಕ್ಷವು ದಾರಿಗಾಗುವದೆಂಬ ವಿಚಾರವಂ ಮಾಡಲಿಕ್ಕೆ ವಶ್ಯವೇ ಇಲ್ಲ; ಪರಂತು ಸೂಕ್ಷ್ಮದೃಷ್ಟ್ಯಾ ಜೀವಂಗೆ ಮೋಕ್ಷವಾಗುತ್ತದೆ, ಕೂಟ ಸ್ಥಂಗಿಲ್ಲ, ಹ್ಯಾಗೆಂದರೆ ಕೂಟಸ್ಥಂಗೆ ಬಂಧವೇ ಇಲ್ಲ; ಆತಂಗೆ ಮೋಕ್ಷವು ಹ್ಯಾಗಾಗುವದು ? ಭ್ರಾಂತಿಯಿಂದ ಕೂಟಸ್ಥನಮೇಲೆ ಆರೋಪಿಸಿದ ಜೀವತ್ವಕ್ಕೆ ಮಾತ್ರ ಸಂಭವಿಸುತ್ತದೆ.

## ೨೧ ನೇ ಭಾಗ.

### ಕೂಟಸ್ಥ ಬ್ರಹ್ಮಂಗಳ ಅಭೇದತೆಯು.

**ಶಿಷ್ಯ:**—ಕೂಟಸ್ಥ ಮತ್ತು ಬ್ರಹ್ಮ ಇವುಗಳಲ್ಲಿ ಭೇದವದೆಯೋ? ಇಲ್ಲೋ? ಇಲ್ಲದಿದ್ದರೆ ಕೂಟಸ್ಥ, ಮತ್ತು ಬ್ರಹ್ಮ ಇವು ಭಿನ್ನ ಭಿನ್ನ ನಾಮಗಳು ಯಾಕೆ ಬಂದವು? ಮತ್ತು ಭಗವಂತನು (**ಉತ್ತಮಃಪುರುಷಸ್ತ್ವನ್ಯಃ**) ಹೀಗೆ ಯಾಕೆಂ ದನು? ಹಾಗು ಭೇದವಿದ್ದರೆ ಇವುಗಳೇಕತ್ವವು ಹ್ಯಾಗೆ ಸಂಭವಿಸುವದು? ಇದನ್ನೆನಗೆಹೇಳಬೇಕು.

**ಗುರುಗಳು** — ಕೂಟಸ್ಥ ಹಾಗು ಬ್ರಹ್ಮ ಇವುಗಳಿಗೆ ಭೇದವಿಲ್ಲ. ಘಟಾ ಕಾಶ ಹಾಗು ಮಹದಾಕಾಶ ವಸ್ತುತಃ ಒಂದೇ ಇದ್ದು ಅದಕ್ಕೆ ಭಿನ್ನ ಭಿನ್ನ ನಾಮಗಳು ಬಂದವು ಹ್ಯಾಗೋ, ಹಾಗೆಯೇ ಬ್ರಹ್ಮ ಮತ್ತು ಕೂಟಸ್ಥ ಇವೆರಡೂ ನಾಮಂಗ ಳೊಂದೊಂದೇ ಚೈತನ್ಯವಿದ್ದು ಅದಕ್ಕೆ ಭಿನ್ನ ಭಿನ್ನ ನಾಮಗಳು ಬಂದವು. (**ಉತ್ತ ಮಃ ಪುರುಷಃಸ್ತ್ವನ್ಯಃ**) ಈ ಭಗವಂತನ ವಚನದ ಆಶಯ ಗುಪ್ತವದೆ. ಅದನ್ನು ಹೇಳುತ್ತೇನೆ, ಶ್ರವಣ ಮಾಡು ಘಟದಲ್ಲಿ ಎಷ್ಟಾಕಾಶವು ವ್ಯಾಪಿ ಸಿರುತ್ತದೋ, ಅಷ್ಟೇ ಆಕಾಶಕ್ಕೆ ಘಟಾಕಾಶವೆನ್ನುತ್ತಾರೆ. ಆದಕಾರಣ ಘಟಾಕಾ ಶವೇ ಮಹದಾಕಾಶವೆಂದಲ್ಲಿ ಘಟಾವಚ್ಛಿನ್ನಾಕಾಶದಷ್ಟೇ ಮಹದಾಕಾಶವದೆಂದು ಮೂಢರು ತಿಳಿಯುವರು ಇದರ ರೀತಿಯಿಂದ ಘಟಾಕಾಶದಿಂದ ಮಹದಾಕಾಶವು ಭಿನ್ನವಿರುತ್ತದೆಂದು ಹೇಳುತ್ತಾರೆ, ಹ್ಯಾಗೋ, ಹಾಗೇ ಕ್ಷೇತ್ರದಲ್ಲಿವ್ಯಾಪಿಸಿದ್ದಷ್ಟೇ ಚೈತನ್ಯಕ್ಕೆ ಕೂಟಸ್ಥನೆಂಬ ನಾಮವದೆ. ಆದಕಾರಣ ಕೂಟಸ್ಥನೇ ಬ್ರಹ್ಮವೆಂದೆಂದಲ್ಲಿ ಕ್ಷೇತ್ರದಲ್ಲಿರುವದಷ್ಟೇ ಬ್ರಹ್ಮವೆಂದು ಮಂದಪ್ರಜ್ಞರು ತಿಳಿಯುವರು; ಆದಕಾರಣ ಶ್ರೀ ಕೃಷ್ಣನು ಉತ್ತಮಪುರುಷನು ಭಿನ್ನನೆಂದು ಹೇಳುತ್ತಾನೆ. ತಾತ್ಪರ್ಯವೇ

ನೆಂದರೆ ಕೂಟಸ್ಥಬ್ರಹ್ಮಂಗಳಲ್ಲಿ ಭೇದವಿಲ್ಲ ಹೀಗಿದ್ದು ಭ್ರಾಂತಿಯಿಂದ ಭಾಸಿಸಿದ ಕಾರಣ ಜೀವನು ಬದ್ಧನಾಗುತ್ತಾನೆ, ಮತ್ತು ತತ್ವಮಸ್ಯಾದಿ ಮಹಾವಾಕ್ಯ ಜನಿತ ಮಾದ ಜ್ಞಾನದಿಂ ಆ ಭೇದಭ್ರಮವು ನಷ್ಟವಾದೊಡೆ ಆತನಿಗೆ ಮೋಕ್ಷಪ್ರಾಪ್ತಿ ಯಾಗುತ್ತದೆ.

## ೨೨ ನೇ ಭಾಗ.

## ಮಹಾವಾಕ್ಯ ವಿವರಣಂ.

**ಶಿಷ್ಯ:—** ಹೇ ಸದ್ಗುರುವರಾ, ಮಹಾವಾಕ್ಯವೆಂದೊಡೇನು? ಇದನ್ನೆನಗೆ ಕೃಪೆಯಿಂದ ಹೇಳಬೇಕು.

**ಗುರುಗಳು:—** ಜೀವೇಶ್ವರ ಲಕ್ಷ್ಯಸ್ವರೂಪಂಗಳೈಕ್ಯ ಬೋಧಕಗಳಾದ ವೇದ ವಾಕ್ಯಗಳೇ ಮಹಾವಾಕ್ಯಗಳು.

**ಶಿಷ್ಯ:—** ಹೇ ಗುರುಶ್ರೇಷ್ಠನೇ, ಅವು ಮಹಾವಾಕ್ಯಗಳಾವಾವು? ಮತ್ತು ಅವುಗಳಿಂದ ಜೀವೇಶೈಕ್ಯವಂ ಹ್ಯಾಗೆ ತಿಳಿಯಬೇಕು? ಇದನ್ನೆನಗೆ ಸ್ಪಷ್ಟವಾಗಿ ತಿಳಿಯುವಂತೆ ಹೇಳಬೇಕು.

**ಗುರುಗಳು:—** ಹೇ ವತ್ಸಾ, ಮಹಾವಾಕ್ಯಗಳನೇಕ ಅವೆ. ಅವುಗಳಲ್ಲಿ **(ತತ್ವಮಸಿ)** ಎಂಬ ಮಹಾವಾಕ್ಯವು ಮುಖ್ಯವದೆ. ಈ ವಾಕ್ಯದಿಂ ಜೀವೇಶೈಕ್ಯವಂ ಹ್ಯಾಗೆ ತಿಳಿಯಬೇಕು? ಇದನ್ನು ಹೇಳುತ್ತೇನೆ; ಕೇಳು. **(ತತ್ವಮಸಿ)** ಈ ವಾಕ್ಯ ದಲ್ಲಿ ತತ್-ತ್ವಂ-ಅಸಿ ಇವು ಮೂರು ಪದಗಳಿವೆ ಇವುಗಳೊಳಗಣ ತತ್ಪದದ ವಾ ಚ್ಯಾರ್ಥವು ಮಾಯಾಶಬಲಬ್ರಹ್ಮ (ಸರ್ವಜ್ಞತಾಸಹಿತ ಚೈತನ್ಯ)ವದೆ ಮತ್ತು ಅವಿದ್ಯಾಶಬಲಚೈತನ್ಯ ಅಥವಾ ವಿದ್ಯಾರಣ್ಯನ ಮತದ ಪ್ರಕಾರ ಕಿಂಚಿಜ್ಞತ್ವ ಸಹಿತ ಚೈತನ್ಯ (ಜೀವ) ತ್ವಂಪದದ ವಚ್ಯಾರ್ಥವದೆ. ಹಾಗು ಮಾಯಾ ವಿನಿರ್ಮುಕ್ತ ಚೈತನ್ಯವು **(ಬ್ರಹ್ಮವು)** ತತ್ಪದದ ಲಕ್ಷ್ಯಾರ್ಥವು; ಮತ್ತು ಅವಿದ್ಯಾವಿನಿರ್ಮುಕ್ತ ಚೈತನ್ಯ ಅಥವಾ ಕಿಂಚಿಜ್ಞತ್ವವಿನಿರ್ಮುಕ್ತ ಚೈತನ್ಯವು **(ಕೂಟಸ್ಥ)** ತ್ವಂಪದದ ಲಕ್ಷ್ಯಾರ್ಥವದೆ. ವಿಶೇಷಣಸಹಿತವಾದ ವಿಶೇಷ್ಯಕ್ಕೆ ವಾಚ್ಯಾರ್ಥವೆಂದೆನ್ನುವರು. ಮತ್ತು ವಿಶೇಷಣವಿನಿರ್ಮುಕ್ತ ವಿಶೇಷ್ಯಕ್ಕೆ ಲಕ್ಷ್ಯಾರ್ಥವೆಂದೆನ್ನುವರು. **(ತತ್ವ ಮಸಿ)** ಈ ಮಹಾವಾಕ್ಯದಿಂ **(ತತ್)** ಎಂದೊಡೆ ಮಾಯೆಯೊಳಗೆ ವ್ಯಾಪಕ ವಿದ್ದ ದಾವಚೈತನ್ಯವೋ ಅದೇ **(ತ್ವಂ)** ಎಂದೊಡೆ ಅವಿದ್ಯೋಪಾಧಿಯೊಳಗೆ ವ್ಯಾಪಿ ಸಿದಂಥ ನೀನು **( ಅಸಿ )** ಎಂದೊಡೆ ಇದ್ದೀ. ಈ ಪ್ರಕಾರ ಬೋಧಿಸಲ್ಪಡುತ್ತದೆ. ಇನ್ನು ಈಶ್ವರನು ಸರ್ವಜ್ಞನು ಮತ್ತು ಜೀವನು ಕಿಂಚಿಜ್ಞನು; ಆದಕಾರಣ ಅವು ಗಳೈಕ್ಯವು ಅಸಂಭವನೀಯವದೆಂದು ಕಂಡುಬಂದೀತು. ಆದರೆ ಜಹದಜಹಲ್ಲಕ್ಷಣೆ ಯಿಂದ ಎರಡೂ ಪದಗಳಲ್ಲಿರುವ ವಿರೋಧಿಯಾದ ಅರ್ಥವಂ ತ್ಯಜಿಸಿ, ಅವಿರುದ್ಧ ವಾದದ್ದನ್ನು ಗ್ರಹಣಮಾಡಿದೊಡೆ ಅಸಂಭಾವನೆಯು ನಿವಾರಣವಾಗುವದು.

# ೨೩ನೇ ಭಾಗ.

## ಜಹದಾದಿ ಮೂರು ಲಕ್ಷಣೆಗಳು, ಮತ್ತು ಭಾಗತ್ಯಾಗ ಲಕ್ಷಣೆ ಯಿಂದ ಮಹಾವಾಕ್ಯಾರ್ಥವಂ ಮಾಡುವ ಪ್ರಕಾರವು.

**ಶಿಷ್ಯ:—** ವಾಕ್ಯಾರ್ಥವಂ ಮಾಡುವ ಯೋಗ್ಯ ಲಕ್ಷಣೆಗಳನ್ನು ಎಲ್ಲಿ ಹೇಳಿರುತ್ತವೆ? ಹಾಗವುಗಳೆಷ್ಟು ಅವೆ?

**ಗುರುಗಳು:-** ವ್ಯಾಕರಣಶಾಸ್ತ್ರದಲ್ಲಿ ಹೇಳಿರುತ್ತವೆ; ಹಾಗು ಅವು ಮೂರು ಅವೆ.

**ಶಿಷ್ಯ:—** ಅವುಗಳ ನಾಮಗಳಾ ವಾವು?

**ಗುರುಗಳು:—** ಜಹತ್, ಅಜಹತ್, ಜಹದಜಹತ್, **( ಭಾಗತ್ಯಾಗ )** ಗಳೆಂಬ ಮೂರು ಅವೆ.

**ಶಿಷ್ಯ:—** ಜಹಲ್ಲಕ್ಷಣೆಯ ಲಕ್ಷಣವು ಹ್ಯಾಗೆ?

**ಗುರುಗಳು:—** ಸಂಪೂರ್ಣ ವಾಚ್ಯಾಂಗಳ ತ್ಯಾಗವಾಗಿ ಅದರ ಸಂಬಂಧದ ಬೇರೆವಸ್ತು ಗ್ರಾಹ್ಯವಾಗುವ ದಾವ ಲಕ್ಷಣೆಯಿಂದವೋ ಆ ಲಕ್ಷಣೆಗೆ ಜಹಲ್ಲಕ್ಷಣೆ ಎಂದೆನ್ನುತ್ತಾರೆ, ಹ್ಯಾಗೆ (**ಗಂಗಾಯಾಂಘೋಷಃ**) ಈ ವಾಕ್ಯದ ವಾಚ್ಯಾರ್ಥವಿದ್ದಂತೆ ಗಂಗೆಯ ಪ್ರವಾಹದಲ್ಲಿ ಗ್ರಾಮವಿರುವದಸಂಭವನೀಯವಿದ್ದ ಕಾರಣ ಸಂಪೂರ್ಣ ವಾಚ್ಯಾರ್ಥಾಂಗವಂ ತ್ಯಜಿಸಿ ತತ್ಸಂಬಂಧದ ಬೇರೆ ಅರ್ಥವಂ (**ಗಂಗೆಯ ದಂಡೆಯಲ್ಲಿ ಗ್ರಾಮವಿದೆಂದು** ) ಸ್ವೀಕರಿಸಬೇಕಾಗುತ್ತದೆ.

**ಶಿಷ್ಯ:—** ಅಜಹಲ್ಲಕ್ಷಣೆಯ ಲಕ್ಷಣವು ಹ್ಯಾಗಿರುತ್ತದೆ?

**ಗುರುಗಳು:—** ಆವ ಲಕ್ಷಣೆಯಿಂದ ಸರ್ವ ವಾಚ್ಯಾರ್ಥವು ಉಳಿದು ಅಧಿಕ ಗ್ರಾಹ್ಯವಾಗುತ್ತದೋ, ಆ ಲಕ್ಷಣೆಗೆ ಅಜಹಲ್ಲಕ್ಷಣೆ, ಎಂದೆನ್ನುವರು. ದೃಷ್ಟಾಂತಾರ್ಥ.- [ನಮ್ಮ ಮನೆಯಮುಂದಿಂದ ಮೋಣೆ ಹೋಯಿತು] ಈ ವಾಕ್ಯದೊಳಗಣ ಮೋಣೆಯು ಜಡವಿದ್ದ ಕಾರಣ ಅದ ಚಲನೇ ಹೋಗುವದಸಂಭವನೀಯವದೆ. ಆದ ಕಾರಣ ಮೋಣೆಯನ್ನು ವಹಿಸುವವರಿದ್ದರೆಂಬದನ್ನಧಿಕ ಸ್ವೀಕರಿಸಬೇಕಾಗುತ್ತದೆ.

**ಶಿಷ್ಯ:—** ಭಾಗತ್ಯಾಗ ಲಕ್ಷಣೆಯ ಲಕ್ಷಣವು ಹ್ಯಾಗಿರುತ್ತದೆ?

**ಗುರುಗಳು:—** ಎರಡೂಪದಗಳಲ್ಲಿದ್ದ ವಿರೋಧಿಯಾದರ್ಥವಂ ಬಿಟ್ಟು ಅವಿರೋಧಿಯಾದದ್ದನ್ನು ಸ್ವೀಕರಿಸುವದು. ದೃಷ್ಟಾಂತಪ್ರಶೆಯಿಂದ :- ( **ಸೋಽಯಂ ವಿಶ್ವನಾಥಃ** ) ಈ ವಾಕ್ಯದೊಳಗಣ (**ಸಃ**) ಎಂಬ ಪದವು ವಿಶ್ವನಾಥಂಗೆ ಪೂರ್ವದಲ್ಲಿ ಹಾವದೇಶದಲ್ಲಿ ದಾವ ಕಾಲದಲ್ಲಿ, ದಾವಸ್ಥಿತಿಯಲ್ಲಿ ನೋಡಿದ್ದನೋ ಆ ದೇಶ ಆ ಕಾಲ, ಆ ಸ್ಥಿತಿ ಇವುಗಳನ್ನು ಸೂಚಿಸುತ್ತವೆ, ಮತ್ತು (**ಅಯಂ**) ಎಂಬ ಪದವು ವರ್ತಮಾನದ ದೇಶ, ವರ್ತಮಾನದ ಕಾಲ, ವರ್ತಮಾನದ ಸ್ಥಿತಿ ಇವುಗಳನ್ನು ಬೋ

ಧಿಸುತ್ತದೆ; ಅದಕಾರಣ ಇವೆರಡು ಪದಗಳು ಪರಸ್ಪರ ವಿರೋಧಿಗಳವೆ. ಪರಂತು ಇವೆರಡೂ ಪದಗಳಿಂದ ಲಕ್ಷಿಸಲಿಕ್ಕೆ ಯೋಗ್ಯನಾವ (ವಿಶ್ವನಾಥ) ನೊಬ್ಬನಿದ್ದಾನೆ. ಅದಕಾರಣ ಅವನನ್ನು ಗ್ರಹಣಮಾಡಿ ಬಾಕಿ ಉಳಿದ ವಿರೋಧಿಯಾದರ್ಥವಂ ಬಿಡಬೇಕು.

**ಶಿಷ್ಯ:**-(**ತತ್ವಮಸಿ**) ಎಂಬ ವಾಕ್ಯದಲ್ಲಿ ಜಹಲ್ಲಕ್ಷಣೆಯು ಯಾಕೆ ಗ್ರಾಹ್ಯವಲ್ಲ?

**ಗುರುಗಳು:**— ಜಹಲ್ಲಕ್ಷಣೆಯ ಲಕ್ಷಣದ ಪ್ರಕಾರ ಈ ವಾಕ್ಯದೊಳಗಣ ಸರ್ವವಾಚ್ಯಂಗಳಂ ತ್ಯಜಿಸಿದರೆ ತತ್ ತ್ವಂ ಪದಂಗಳೊಳಗೆ ಪ್ರವಿಷ್ಟಗಳಿದ್ದ, ಅನುಕ್ರಮದಿಂ ಬ್ರಹ್ಮ ಹಾಗೂ ಕೂಟಸ್ಥ ಇವುಗಳದ್ದಾದರೂ ತ್ಯಾಗವಾಗುತ್ತದೆ; ಹಾಗು ಚೈತನ್ಯದ ಹೊರ್ತು ಬೇರೊಂದು ಪದಾರ್ಥವು ಗ್ರಾಹ್ಯವಾಗುತ್ತದೆ. ಪರಂತು ತತ್ವಂ ಪದಂಗಳ ವಾಚ್ಯಂಗಳ ಸಲಕ್ಷ್ಯತ್ಯಾಗವಾದಲ್ಲಿ ಬೇರೆ ಪದಾರ್ಥವುಳಿಯುವದಿಲ್ಲ. ಹಾಗು ಬೇರೆ ಪದಾರ್ಥವಂ ಗ್ರಹಣ ಮಾಡಿದೊಡೆ ಆ ಜಡ ದುಃಖರೂಪವಾದ ಪದಾರ್ಥದ ಗ್ರಹಣದಿಂ ಹಿತವಾಗುವದಿಲ್ಲ ಅದಕಾರಣ ಈ ಲಕ್ಷಣೆಯು ಗ್ರಾಹ್ಯವಲ್ಲ.

**ಶಿಷ್ಯ:**— ಅಜಹಲ್ಲಕ್ಷಣೆಯು ಯಾಕೆ ಗ್ರಾಹ್ಯವಲ್ಲ ?

**ಗುರುಗಳು**— ಅಜಹಲ್ಲಕ್ಷಣೆಯನ್ನು ಸ್ವೀಕರಿಸಿದರೆ ಈ ವಾಕ್ಯದೊಳಗಣ ತತ್ವಂಪದಗಳಲ್ಲಿರುವ ವಿರೋಧಿಯಾದರ್ಥದ ತ್ಯಾಗವಾಗುವದಿಲ್ಲ; ಹಾಗು ಪರಸ್ಪರ ವಿರುದ್ಧಾರ್ಥಂಗಳ ತ್ಯಾಗವಾಗದೆ (**ಅಸಿ**) ಎಂಬ ಪದದರ್ಥವು (ಏಕತ್ವವು) ಸಿದ್ಧವಾಗುವದಿಲ್ಲ; ಅದಕಾರಣ ಅಜಹಲ್ಲಕ್ಷಣೆಯು ಇಲ್ಲಿ ಗ್ರಾಹ್ಯವಲ್ಲ

**ಶಿಷ್ಯ:**— ಜಹದಜಹಲ್ಲಕ್ಷಣೆಯಿಂದ ( **ತತ್ವಮಸಿ** ) ಮಹಾವಾಕ್ಯದ ಅರ್ಥವಂ ಹ್ಯಾಗೆ ಮಾಡಬೇಕು ?

**ಗುರುಗಳು:**-- (**ತತ್ವಮಸಿ**) ಎಂದೊಡೆ ಅದೇ ನೀನಿದ್ದಿ. ಈ ಮಹಾವಾಕ್ಯದೊಳಗಣ ಅದೇ ಎಂಬ ಪದವು ಮಾಯೋಪಾಧಿಸ್ಥ ಚೈತನ್ಯದ ಬೋಧಕವದೆ; ನೀನೆಂಬ ಪದವು ಅವಿದ್ಯೋಪಾಧಿಸ್ಥ ಚೈತನ್ಯದ ಬೋಧಕವದೆ. ಮತ್ತು ಇದ್ದೀ ಎಂಬ ಪದವು ಉಭಯ ಚೈತನ್ಯಂಗಳ ಏಕತ್ವವಂ ಬೋಧಿಸುತ್ತದೆ, ಮಠದಲ್ಲಿದ್ದಾಕಾಶವೇ ಘಟದಲ್ಲಿರುತ್ತದೆಂಬ ವಾಕ್ಯದಿಂ ಘಟಮಠಾಕಾಶಂಗಳ ಏಕತ್ವವಂ ಹ್ಯಾಗೆ ತಿಳಿಯಬೇಕೋ, ಹಾಗೇ ಮಾಯೆಯೊಳಗಾವ ಚೈತನ್ಯವು ವ್ಯಾಪಿಸಿರುತ್ತದೋ ಅದೇ ಚೈತನ್ಯವು ಅವಿದ್ಯೆಯೊಳಗೆ ವ್ಯಾಪಿಸಿದ್ದದ್ದು ನೀನಿದ್ದೀ. ಈ ವಾಕ್ಯದಿಂ ಅದು ಹಾಗು ನೀನು ಇವೆರಡೂ ಪದಂಗಳ ಲಕ್ಷ್ಯೈಕ್ಯವಂ ತಿಳಿಯಬೇಕು, ಘಟಮಠಾಕಾಶಂಗಳ ಏಕತ್ವವಂ ತಿಳಿಯುವಗೋಸ್ಕರ ಘಟಮಠೋಪಾಧಿಗಳ ತ್ಯಾಗವಂ ಹ್ಯಾಗೆ ಮಾಡಬೇಕಾಗುತ್ತದೋ, ಹಾಗೆಯೇ ತತ್ ತ್ವಂ ಪದಂಗಳ ಲಕ್ಷ್ಯೈಕ್ಯವಂ ತಿಳಿಗೊಂಬುವಗೋಸ್ಕರ ಭಾಗತ್ಯಾಗಲಕ್ಷಣೆಯಿಂದ ಪರಸ್ಪರ ವಿರೋಧಿಗಳಾದುಪಾಧಿಗಳ ತ್ಯಾಗವಂ ಮಾಡಬೇಕು. ಒಂದೇ ಚೈತನ್ಯವು ಪರಿಪೂರ್ಣವಿದ್ದು ಅದಕ್ಕೆ ಸರ್ವ

ಜ್ಞತಾರೂಪ ಶುದ್ಧಕಲ್ಪನೆಯ ಯೋಗದಿಂ ಈಶತ್ವ, ಹಾಗು ಕಿಂಚಿಜ್ಞತಾರೂಪ ಮಲಿನ ಕಲ್ಪನೆಯ ಯೋಗದಿಂ ಜೀವತ್ವಂಗಳಾರೋಪವಾಗುತ್ತದೆ. ವಿಚಾರದಿಂ ನೋಡಲಾಗಿ ಎರಡೂ ಕಲ್ಪನೆಗಳಿಗವು ಅಧಿಷ್ಠಾನವಾಗಿದೆ; ಆದಕಾರಣ ಎರಡೂ ಕಲ್ಪನೆಗಳಿಂವ ಭಿನ್ನವದೆ. ಅದೇ ನಿರ್ವಿಕಲ್ಪಬ್ರಹ್ಮನಾನಿದ್ದೇನೆಂದು ಈ ಜೀವನು ತಿಳಿದೊಡೆ ಕಲ್ಪನೆಗಳಂ ಬಿಟ್ಟು ಸಹಜವಾಗಿಯೇ ನಿರ್ವಿಕಲ್ಪಕನಾಗಿರುತ್ತಾನೆ. ಕಲ್ಪನೆಗಳಲ್ಲಿಯೇ ಸರ್ವದ್ವೈತ, ಸಕಲ ವಿಕಾರಗಳು, ಸಕಲ ದುಃಖಗಳಿರುವವು. ಆದಕಾರಣ ಕಲ್ಪನಾರಹಿತನಾಗುವದರಿಂದ ಜೀವನು ಸಹಜವಾಗಿಯೇ ಆನಂದ ರೂಪನಾಗುತ್ತಾನೆ. ಸರ್ವಜ್ಞತ್ವ ಕಲ್ಪನಾಸಹಿತಜ್ಞಾನವು ತತ್ಪದದ ವಾಚ್ಯಾರ್ಥವು, ಹಾಗು ಕಿಂಚಿಜ್ಞತ್ವರೂಪ ಕಲ್ಪನಾಸಹಿತಜ್ಞಾನವು ತ್ವಂಪದದ ವಾಚ್ಯಾರ್ಥವದೆ. ಆದಕಾರಣ ವಾಚ್ಯಗಳು ಪರಸ್ಪರವಿರೋಧಿಗಳವೆ. ಮತ್ತು ಸರ್ವಜ್ಞತೆಯಲ್ಲಿ ಹಾಗು ಕಿಂಚಿಜ್ಞತೆಯಲ್ಲಿರುವ ವ್ಯಾಪಕಚೈತನ್ಯವಾವದು ಸರ್ವಜ್ಞತ್ವಕ್ಕೂ ಕಿಂಚಿಜ್ಞತ್ವಕ್ಕೂ ಅಧಿಷ್ಠಾನವೋ, ಅದೆರಡು ಪದಂಗಳ ಲಕ್ಷ್ಯಸ್ವರೂಪ ಒಂದೇ ಇರುತ್ತದೆ. ಆದ ಕಾರಣ ಜಹದಜಹಲ್ಲಕ್ಷಣೆಯಿಂದ ಪರಸ್ಪರ ವಿರೋಧಿಗಳಾದ ಸರ್ವಜ್ಞತ್ವ ಕಿಂಚಿ ಜ್ಞತ್ವಂಗಳ ತ್ಯಾಗವಂಮಾಡಿ ಉಳಿದಿರುವ ಅಕಲ್ಪಕ ಚೈತನ್ಯೈಕ್ಯವಂ ಸದ್ಗುರು ಮುಖದಿಂ ತಿಳಕೊಳ್ಳಬೇಕು.

## ೨೪ ನೇ ಭಾಗ.

### ಮನನ ನಿದಿಧ್ಯಸನಂಗಳ ಪ್ರಕಾರಗಳು, ಅಭ್ಯಾಸದ ಅವಧಿಯು, ಜ್ಞಾನಿಗೆ ಸಂಚಿತಾದಿ ಮೂರು ಕರ್ಮಗಳಿಲ್ಲ.

**ಶಿಷ್ಯ:**– ಗುರುಗಳೇ, ಗುರುಗಳ ಮುಖದಿಂದ ಕೇಳಿದಾಗ್ಯೂ ಅದು ದೃಢವು ಹ್ಯಾಗಾಗುವದು?

**ಗುರುಗಳು:**– ಎಲೈಯಾ, ಆ ಕೇಳಿತಿಳಕೊಂಡಿದ್ದ ಐಕ್ಯವಂ ದೃಢವಾಗುವ ಗೋಸ್ಕರ ಏಕಾಂತದಲ್ಲಿದ್ದು, ಸ್ಮರಿಸಬೇಕು; ಹಾಗು ಅದರೊಳಗೆ ಸಂಶಯುಗಳು ಬಂದರೆ ಅವುಗಳನ್ನು ಅನೇಕ ದೃಷ್ಟಾಂತ ಯುಕ್ತಿಗಳಿಂದ ನಿವೃತ್ತ ಮಾಡಬೇಕು. ದಾವಸಂಶಯುಗಳ ನಿವೃತ್ತಿಯು ತನ್ನ ಕಡೆಯಿಂವ ಆಗುವದಿಲ್ಲೋ ಅವುಗಳ ನಿಷ್ಪತ್ತಿ ಯನ್ನು ಶ್ರೀಗುರುಗಳ ಕಡೆಯಿಂದ ಮಾಡಿಕೊಳ್ಳಬೇಕು. ಗುರುಗಳ ಭೆಟ್ಟಿಯಾ ಗುವಂತೆ ಇಲ್ಲದಿದ್ದೊಡೆ ದಾವಸತ್ಪುರುಷರಕಡೆಯಿಂದಾದರೂ ಮಾಡಿಕೊಳ್ಳಬೇಕು ಎಲ್ಲ ಸತ್ಪುರುಷರು ಗುರುರೂಪಗಳೇ ಇರುತ್ತಾರೆಂದು ತಿಳಿಯಬೇಕು. ಇರಲಿ. ಈ ಪ್ರಕಾರ ಮನನವಂಮಾಡಿ ನಾನೇ ಪರಿಪೂರ್ಣ ಬ್ರಹ್ಮನಿದ್ದೇನೆಂದು ತಿಳಿದನಂತರ ಆ ಬ್ರಹ್ಮಸ್ಥಿತಿಯು ಪ್ರತ್ಯಕ್ಷಾನುಭವಕ್ಕೆ ಬರುವಗೋಸ್ಕರ ಸಂಕಲ್ಪ ನಿರೋಧನವಂ ಮಾಡಬೇಕು. ಇದಕ್ಕೆ ನಿದಿಧ್ಯಸನವೆಂದೆನ್ನುತ್ತಾರೆ. ಸಂಕಲ್ಪ

ನಿರೋಧನಕ್ಕೆ ಅನೇಕ ಯುಕ್ತಿಗಳು ಅನೇಕ ಗ್ರಂಥಗಳಲ್ಲಿ ಹೇಳಿರುತ್ತವೆ ಅವುಗಳೊಳಗಣ ಸುಲಭವಾದೇನಕೇ ಯುಕ್ತಿಗಳನ್ನು ನಿನಗೆ ಹೇಳುತ್ತೇನೆ. ಶ್ರವಣಮಾಡು. ಒಂದು ವಿಕಲ್ಪವು ಪುಟ್ಟಿಹೋಯ್ತು, ಹಾಗೆರಡನೇ ವಿಕಲ್ಪವು ಹುಟ್ಟಿಲ್ಲ. ಇಂಥಸಂಧಿಯಲ್ಲಿರುವ ಸ್ಥಿತಿಯನ್ನು ತಿಳಕೊಂಡು, ಅದನ್ನೇ ನಿತ್ಯಬೆಳೆಸುತ್ತ ಹೋದರೆ ತನ್ನ ಬ್ರಹ್ಮತ್ವದ ಅನುಭವವು ಬರುವದು; ಇದೊಂದು. ತನ್ನ ಕಲ್ಪನೆಗಳಂ ತಾನು ಸಾಕ್ಷಿಯಾಗಿನೋಡುತ್ತಿರಬೇಕು; ಹೀಗೆಮಾಡಿದೊಡೆ ಕಲ್ಪನೆಯು ದಾವ ಜ್ಞಾನದಿಂ ಹುಟ್ಟುವದೋ, ಆ ಜ್ಞಾನವು ಸಾಕ್ಷಿಯಾಗಿರುವದರಿಂದ ಕಲ್ಪನೆಯು ದೃಶಿಸುವದು ಸಹಜವಾಗಿಯೇ ಬಂಧವಾಗುತ್ತದೆ. ಮುಂದೆ ಸಾಕ್ಷ್ಯವಾದ ಕಲ್ಪನೆಯಿಲ್ಲದ್ದರಿಂದ ಸಾಕ್ಷಿಭಾವವಾದರೂ ನಷ್ಟವಾಗುತ್ತದೆ; ಇದೆರಡನೇದ್ದು. ಮನನದಿಂ ನಾನು ತಿಳಿಯುವ ಮರಿಯುವಭಾವರಹಿತ ನಿದ್ದೇನೆಂದು ತಿಳಿದದ್ದನ್ನು ಏಕಾಂತದಲ್ಲಿ ಸ್ವಸ್ಥಕೂತು, ಚಿಂತಿಸಿ, ಅದರಿಂದ ತಿಳಿಯುವ, ಮರಿಯುವ ಭಾವಂಗಳನ್ನು ತ್ಯಜಿಸಬೇಕು; ಇದು ಮೂರನೇದ್ದು. ಅಥವಾ ನಾನು ಪರಿಪೂರ್ಣ ಚೈತನ್ಯನಿದ್ದೇನೆಂದು ತಿಳಿದದ್ದನ್ನು ಏಕಾಂತಸ್ಥಾನದಲ್ಲಿ ಕೂತು, ಸ್ಮರಿಸಿ ವೃತ್ತಿಯನ್ನು ಪರಿಪೂರ್ಣ ಪ್ರಸರಿಸಬೇಕು, ಇದು ನಾಲ್ಕನೇದ್ದು. ಅಥವಾ ವ್ಯವಹರಿಸುವಾಗ್ಗೆ, ಮಲಗುವಾಗ್ಗೆ, ಜಾಗ್ರತವಾಗುವಾಗ್ಗೆ, ನಿಂತಾಗ್ಗೆ ದಾವಸ್ಥಿತಿಯಲ್ಲಿದ್ದಾಗ್ಯೂ, ನಾನು ಪರಿಪೂರ್ಣ ಏಕಾದ್ವಯ ಬ್ರಹ್ಮನಿದ್ದೇನೆಂದು ಚಿಂತಿಸುತ್ತಿರಬೇಕು. ಮತ್ತು ಆವಾವಕಾಲಕ್ಕೆ ದೇಹಭಾವನೆಯುತ್ಪನ್ನವಾದೀತೋ, ಆ ಆ ಕಾಲಕ್ಕೆ ನಾನು ಪರಿಪೂರ್ಣ ಬ್ರಹ್ಮನಿದ್ದೇನೆಂಬ ಭಾವನೆಯಿಂದ ಆ ಭಾವನೆಯನ್ನು ಸಂಹರಿಸಬೇಕು; ಇದೈದನೇದು. ಅಥವಾ ಆವಾವ ಪದಾರ್ಥದ ಬೋಧವಾದೀತೋ ಆ ಆ ಪದಾರ್ಥದ ನಾಮರೂಪಗಳಂ ಬಿಟ್ಟು, ಆ ಆ ಪದಾರ್ಥದಲ್ಲಿ ವ್ಯಾಪಕನಿದ್ದ ನಿರಾಕಾರ ಅನಾಮ ಅರೂಪ ಶುದ್ಧ ಸಚ್ಚಿದಾನಂದನಾದಾತ್ಮನನ್ನು ನೋಡುತ್ತಿರಬೇಕು. ಹೀಗೆ ಮಾಡುತ್ತಹೋದಲ್ಲಿ ಮನಸ್ಸಿನ ನಾಮರೂಪಂಗಳನ್ನು ನೋಡುವ ಅಭ್ಯಾಸವು ಮುರಿಯುತ್ತದೆ. ಮತ್ತು ನಾಮರೂಪಚಿಂತನವಂ ಬಿಟ್ಟು ಮನಸ್ಸು ಸ್ವಸ್ವರೂಪವಂ ನೋಡುತ್ತ ಹೋದೊಡೆ ಅದು ಸ್ವಸ್ವರೂಪದಲ್ಲಿಯೇ ಲೀನವಾಗುತ್ತದೆ. ಇದಾರನೇದು. ಇಂತಿ. ದಾವಾದರುಪಾಯದಿಂ ಸಂಕಲ್ಪ ನಿರೋಧನವಂಮಾಡಿ ತನ್ನನಿರ್ವಿಕಲ್ಪ ಪರಿಪೂರ್ಣ ಬ್ರಹ್ಮತ್ವದನುಭವವನ್ನು ಅನುಭವ, ಅನುಭವಿತನು, ಅನುಭಾವ್ಯ ಈ ತ್ರಿಪುಟಿ ರಹಿತನಾಗಿ ತೆಗೆದುಕೊಳ್ಳಬೇಕು. ಅನುಭವವು ಬಂದನಂತರ ಅನುಭವಕ್ಕೆ ಬಂದಿದ್ದ ತನ್ನ ಸ್ಥಿತಿಯನ್ನು ಮೇಲಿನ ಮೇಲೆ ಚಿಂತಿಸಬೇಕು. ಅಜ್ಞಾನಿ ಜನರಿಗೆ ದೇಹನಾನೆಂಬ ಬುದ್ಧಿಯು ಹ್ಯಾಗೆ ದೃಢವಾಗಿರುತ್ತದೋ, ಹಾಗೆ ಅಹಂಬ್ರಹ್ಮಬುದ್ಧಿಯು ದೃಢವಾದೊಡೆ ಪುರುಷನು ಕೃತಕೃತ್ಯನಾಗುತ್ತಾನೆ. ಹ್ಯಾಗೆಂದೊಡೆ ಬ್ರಹ್ಮಕ್ಕೆ ಕರ್ತವ್ಯವೇನು? ದಾವಲಾಭವಂಮಾಡಿಕೊಳ್ಳುವದಿರುವದು? ಎರಡನೇ ವಸ್ತುವೇ

ಎಲ್ಲೆಲ್ಲೋ, ಅಲ್ಲಿ ದ್ವೇಷವಂ ದಾವ ವಸ್ತುವಿನ ಮಾಡುವದು? ಮತ್ತು ಇಚ್ಛೆಯಾದರೂ ದಾವ ವಸ್ತುವಿನ ಮಾಡುವದು? ಈ ಪ್ರಕಾರ ಆ ಬ್ರಹ್ಮರೂಪನಾದ ಪುರುಷಂಗೇನುಕರ್ತವ್ಯವಿಲ್ಲದ್ದರಿಂದವನು ಸ್ವಚ್ಛಂದದಿಂ ಕ್ರೀಡಿಸುತ್ತಿರಲಾಗಿ ಪ್ರಾರಬ್ಧವಶಾತ್ ಅವನದೇಹದಿಂದ ಉತ್ತಮಾಧಮಕರ್ಮಗಳಾಗುತ್ತವೆ; ಪರಂತು ಆತಂಗೆ ಅಹಂಕರ್ತೃಭಾವವಿಲ್ಲಾದಕಾರಣ ಅವನು ಅವುಗಳಿಗೆ ಲಿಪ್ತನಾಗುವದಿಲ್ಲ; ಈ ಪ್ರಕಾರ ಜ್ಞಾನಿಗೆ ಕ್ರಿಯಮಾಣಕರ್ಮವಿಲ್ಲ. ಹಾಗು ಅಹಂಕರ್ತೃಭಾವದಹೊರ್ತು ಉತ್ಪನ್ನವಾದ ಜ್ಞಾನಿಯು ಕ್ರಿಯಮಾಣವಂ (**ಸುಹೃದಃ ಪುಣ್ಯಕೃತ್ಯಾಂ ದ್ವಿಷಂತಃ ಪಾಪಕೃತ್ಯಾಂ ಗೃಹ್ಣಂತಿ**) ಈ ವಚನದಿಂ ಶ್ರುತಿಯು ಆತನ ನಿಂದಾ ದ್ವೇಷಂಗಳಂ ಮಾಡುವವರಿಗಾತನ ಪಾಪ, ಮತ್ತು ಆತನ ಸುಹೃದರಿಗಾತನ ಪುಣ್ಯ ಈ ಪ್ರಕಾರ ವಿಭಾಗಿಸಿ ಕೊಟ್ಟಿರುತ್ತವೆ. ಸಂಚಿತ ಕರ್ಮವು ಪೂರ್ವದ ಭ್ರಮದ ಕಾರ್ಯವಿದ್ದಕಾರಣ ಆದು ಭ್ರಮದ ಸಂಗಡೇ ನಷ್ಟವಾಗುತ್ತದೆ; ಹಾಗು ಪ್ರಾರಬ್ಧಕರ್ಮವು ಅವನ ದೇಹಕ್ಕೆ ಭೋಗಂಗಳಂ ಕೊಟ್ಟು ದೇಹಸಹಿತವಾಗಿ ನಷ್ಟವಾಗುತ್ತದೆ. ಈ ಪ್ರಕಾರ ಜ್ಞಾನಿಗೆ ಫಲವಂ ಕೊಡುವದಕ್ಕೆ ಕರ್ಮವುಳಿಯುವದಿಲ್ಲಾದಕಾರಣ ಕರ್ಮಫಲ ಭೋಗಾರ್ಥವಾಗಿ ಆಗುವ ಜನ್ಮವ ವರಾಗುವದಿಲ್ಲ.

## ೨೫ ನೇ ಭಾಗ.

### ಸಂಚಿತಾದಿ ಮೂರು ಕರ್ಮಂಗಳ ಲಕ್ಷಣಗಳು.

**ಶಿಷ್ಯ:—** ಹೇ ತಾತ, ಸಂಚಿತ ಕರ್ಮವೆಂಪರೇನು?

**ಗುರುಗಳು:—** ಅನಾದಿ ಕಾಲದಲ್ಲಿ ಜೀವೋತ್ಪತ್ತಿಯಾಯ್ತು. ಅಲ್ಲಿಂದ ಪ್ರತ್ಯೇಕ ಜನ್ಮದಲ್ಲಿ ಮಾಡಿದ ಕರ್ಮಂಗಳೊಳಗಣ ಸ್ವಲ್ಪಾಂಶವಂ ಭೋಗಿಸಿ ಬಾಕೀ ಎಲ್ಲ ಸಿಲ್ಕು ಉಳಿಯುತ್ತಿರುವವು. ಆ ಜ್ಞಾನವಾಗುವವರಿಗೂ ಆದದ್ದೆಲ್ಲ ಸಂಚಯಕ್ಕೆ ಸಂಚಿತಕರ್ಮವೆಂದೆನ್ನುತ್ತಾರೆ.

**ಶಿಷ್ಯ:—** ಪ್ರಾರಬ್ಧಕರ್ಮವೆಂದೊಡೇನು?

**ಗುರುಗಳು:—** ಫಲಂಗಳಂ ಕೊಡುವದಕ್ಕೆ ಉದ್ಯುಕ್ತವಾದ ಸಂಚಿತದ ಸ್ವಲ್ಪಾಂಶಕ್ಕೆ ಪ್ರಾರಬ್ಧವೆಂದೆನ್ನುವರು.

**ಶಿಷ್ಯ:—** ಆಗಾಮಿ ಕರ್ಮವಾವದು?

**ಗುರುಗಳು:— ಜ್ಞಾನೋತ್ತರ ಜ್ಞಾನಿಯ ಶರೀರದಿಂ ಆವಾವು ಕರ್ಮಗಳು ಆಗುತ್ತವೆಯೋ ಅವೆಲ್ಲ ಕರ್ಮಗಳ ಸಮೂಹಕ್ಕೆ ಆಗಾಮಿಕರ್ಮವೆನಬೇಕು.**

## ೨೬ ನೇ ಭಾಗ.

## ಜ್ಞಾನಿಗಳ ಸ್ಥಿತಿಯು.

**ಶಿಷ್ಯ:—** ಜ್ಞಾನಿಗಳ ಸ್ಥಿತಿಯು ಹ್ಯಾಗಿರುತ್ತದೆ?

**ಗುರುಗಳು:—**ಎಲ್ಲದೇಹಗಳು ಪ್ರಾರಬ್ಧಾಧೀನಗಳಿದ್ದು, ಅವುಗಳ ಪ್ರಾರಬ್ಧಗಳು ಭಿನ್ನ ಭಿನ್ನಗಳಿರುವದರಿಂದೆಲ್ಲ ಜ್ಞಾನಿಗಳ ಶರೀರ ಸ್ಥಿತಿಯು ಸಮಾನವಿರುವದಿಲ್ಲ. ಆದರೂ ನಿನ್ನ ಸಮಾಧಾನದ್ದೆಶೆಯಿಂದ ಸಾಧಾರಣ ಲಕ್ಷಣಂಗಳಂ ಹೇಳುತ್ತೇನೆ; ಕೇಳು. ಜ್ಞಾನಿಗಳ ದೇಹೇಂದ್ರಿಯಗಳ ಪ್ರವೃತ್ತಿಯು ಪ್ರಾರಬ್ಧದಿಂ ಕರ್ಮದಲ್ಲಿ ಆಗುತ್ತದೆ; ಪರಂತು ಆ ಕರ್ಮವು ತೀರಿದಕ್ಷಣಕ್ಕೆ ಪೂರ್ವದಲ್ಲಿ ಸಾಧನ ಮಾಡುವಾಗ್ಯೆ ಅವರ ದೇಹೇಂದ್ರಿಯಗಳಿಗೆ ಸ್ಥಿರವಾಗಿರುವ ಅಭ್ಯಾಸವು ಬಿದ್ದಿರುವದರಿಂದ ಅವು ಸ್ತಬ್ಧವಾಗುತ್ತವೆ. ಜ್ಞಾನಿಗಳಿಗೆ ಅಹಂಕರ್ತೃಭಾವ, ಹಾಗಿಚ್ಛೆಗಳಿಲ್ಲಾದಕಾರಣ ಅವರ ದೇಹೇಂದ್ರಿಯಗಳ ಕಡೆಯಿಂದ ಆವಾವಕ್ರಿಯೆಗಳಾಗುತ್ತವೆಯೋ, ಆ ಆ ಕ್ರಿಯೆಗಳಲ್ಲಿ ಅವರಿಗೆ ಹೇತುವಿರುವದಿಲ್ಲ; ಆನಕಾರಣ ಆ ನಿರ್ಹೇತುಕವಾದ ಕರ್ಮಗಳ ಫಲಗಳು ವಿಪರೀತಗಳಾಗಲಿ, ಅಥವಾ ಸುಪರೀತಗಳಾಗಲಿ, ಪರಂತು ಅವರಿಗೆ ಶೋಕ ಅಥವಾ ಹರ್ಷವಾಗುವದಿಲ್ಲ. ಅನ್ಯಜನರಿಗೆ ಹೇತುವಿರುವದರಿಂದ ಕರ್ಮಕ್ಕೆ ಆರಂಭ ಮಾಡಿದ ಕಾಲದಿಂದ ಆ ಕರ್ಮವು ತೀರುವವರಿಗೂ ಈ ಕಾರ್ಯವು ಪೂರ್ಣವಾಗಿ ಸಫಲವು ಹ್ಯಾಗಾದೀತೆಂಬ ಚಿಂತೆಯು ಹತ್ತಿರುತ್ತದೆ. ಜ್ಞಾನಿಗಳಿಗದು ಹತ್ತುವದಿಲ್ಲ. ಅಜ್ಞಾನಿಗಳಿಗಹಂಭೋಕ್ತೃಭಾವ ವಿರುವದರಿಂದ ಸುಖ ದುಃಖಗಳಾಗುತ್ತವೆ. ಜ್ಞಾನಿಗಳಿಗದಿಲ್ಲಾದಕಾರಣ ಸುಖದುಃಖಗಳಾದರೂ ಆಗುವದಿಲ್ಲ. ಅನ್ಯಜನರು ಪ್ರತ್ಯೇಕನನ್ನು ಭಿನ್ನಭಾವದಿಂ ನೋಡುತ್ತಾರೆ, ಆದಕಾರಣ ರಾಗದ್ವೇಷಂಗಳಂ ಮಾಡುತ್ತಾರೆ; ಜ್ಞಾನಿಗಳೆಲ್ಲ ವಿಶ್ವವಂ ಆತ್ಮರೂಪದಿಂ ನೋಡುತ್ತಾರೆ; ಆದಕಾರಣ ಅವರು ರಾಗದ್ವೇಷಂಗಳಂ ಮಾಡುವದಿಲ್ಲ ಈ ಪ್ರಕಾರ ಜ್ಞಾನಿಗಳ ಸಾಧಾರಣ ಸ್ಥಿತಿಯಿರುತ್ತದೆ. ವಿಚಾರದಿಂ ನೋಡಲಾಗಿ ವಾಣಿ-ಮನಸ್ಸುಗಳಿಗಗೋಚರವಾದ ಬ್ರಹ್ಮವೇ ಅವರಿದ್ದಾರೆ. ಆದಕಾರಣ ಅವರ ಸ್ಥಿತಿಯು ವಾಚೆಯಿಂದ ವರ್ಣಿಸುವದು ಸಂಭವಿಸುವದಿಲ್ಲ.

## ೨೭ ನೇ ಭಾಗ.

## ಆತ್ಮಾ ಹಾಗು ಜಗತ್ ಇವುಗಳು ವಿರುದ್ಧ ಧರ್ಮಗಳಿದ್ದಾಗ್ಯೂ ಇವುಗಳ ಏಕತ್ವವು.

**ಶಿಷ್ಯ:—** ಸಮರ್ಥರೇ, ಜ್ಞಾನಿಯು ತನ್ನ ಹೊರ್ತು ಏನೇನು ನೋಡುವದಿಲ್ಲೆಂದು ನೀವು ಹೇಳುತ್ತೀರಿ; ಹಾಗು ಜಗತ್ತವಂತು ಆತ್ಮಂಗೆ ವಿರುದ್ಧಧರ್ಮಿಯದೆ; ಆದರೆ ಜ್ಞಾನಿಯು ಅದನ್ನು ಆತ್ಮರೂಪದಿಂದ ಹ್ಯಾಗೆ ನೋಡುತ್ತಾನೆ.

**ಗುರುಗಳು:-**ಸ್ವಲ್ಪಾಯುಷಿ, ಏಕದೇಶೀಯವಾಗಿರುವದರಿಂದ ಘಟವು, ಮೃತ್ತಿಕೆಗೆ ವಿರುದ್ಧಧರ್ಮಿಯಾಗಿ ತೋರುತ್ತಿದ್ದಾಗ್ಯೂ ಅದು ಮೃತ್ತಿಕೆಯಿಂದ ಭಿನ್ನ ವಲ್ಲ ಹ್ಯಾಗೋ; ಆಣೇಕಲ್ಲು ನೀರಿನಿಂದ ಭಿನ್ನವಲ್ಲ. ಹ್ಯಾಗೋ; ಪಟವು ತಂತುಗಳಿಂದ ಭಿನ್ನವಲ್ಲ. ಹ್ಯಾಗೋ; ಲಹರಿಗಳು ಉದಕದಿಂ ಭಿನ್ನಗಳಲ್ಲ, ಹ್ಯಾಗೋ; ಶುಕ್ತಿರಜತವು ಶುಕ್ತಿಯಿಂದ ಭಿನ್ನವಲ್ಲ; ಹ್ಯಾಗೋ; ರಜ್ಜುಸರ್ಪವು ರಜ್ಜುವಿನಿಂದ ಭಿನ್ನವಲ್ಲ ಹ್ಯಾಗೋ; ಹಾಗೆಯೇ ಮಾಯಾಯೋಗದಿಂದ ತನ್ನಮೇಲೆ ಭಾಸಿಸಿದ ಈ ಜಗತ್ತು ವಿರುದ್ಧಧರ್ಮಿಯಾಗಿ ತೋರಿದಾಗ್ಯೂ ತನ್ನಿಂದ ಭಿನ್ನವಲ್ಲ ಹೀಗೆ ಜ್ಞಾನಿಗಳು ತಿಳಿಯುತ್ತಾರೆ.

## ೨೮ ನೇ ಭಾಗ.

## ಆತ್ಮಾನಾತ್ಮ ವಿಚಾರವು.

### ೧ ನೇ ಪ್ರಕರಣ.

### ಸ್ಥೂಲದೇಹ ನಿರಸನಂ.

**ಶಿಷ್ಯ:—** ಜೀವನು ಜನ್ಮ, ಬಾಲ್ಯ, ತಾರುಣ್ಯ, ವಾರ್ಧಕ್ಯ, ಮೃತ್ಯು, ಅಂಧತ್ವ, ಬಧಿರತ್ವ, ಪಂಗುತ್ವ, ಮೂಕತ್ವ, ಕ್ಷುಧೆ, ತೃಷೆ, ಸಂಶಯ, ಪಾಪ, ಪುಣ್ಯ, ಸುಖ, ದುಃಖ, ಬಂಧ; ಮೋಕ್ಷ ಮುಂತಾದ ವಿಕಾರಗಳಿಂದ ಯುಕ್ತನಿದ್ದು ಅವನು ನಿರ್ವಿಕಾರವಾದ ಬ್ರಹ್ಮವೇ ಇದ್ದಾನೆಂದು ತಿಳಿಯಲಿಕ್ಕೆ ಹ್ಯಾಗೆ ಬರುತ್ತದೆ ?

**ಗುರುಗಳು:—** ಆತ್ಮಾನಾತ್ಮಗಳನ್ನು ಅವಿವೇಕದಿಂ ಏಕತ್ರಮಾಡಿ ನೋಡೋಣದರಿಂದ ಜೀವನು ಅನೇಕ ವಿಕಾರಯುಕ್ತನಿದ್ದಾನೆಂದು ಕಂಡುಬರುತ್ತದೆ. ಪರಂತು ವಿವೇಕದಿಂ ಆತ್ಮಾನಾತ್ಮಗಳನ್ನು ಭಿನ್ನಮಾಡಿ ನೋಡಲಾಗಿ ಆತ್ಮನು ಬ್ರಹ್ಮರೂಪನಾಗಿಯೇ ತೋರುತ್ತಾನೆ.

**ಶಿಷ್ಯ:—** ಹೇ ಭಕ್ತವತ್ಸಲನಾದ ಗುರುಸ್ವಾಮಿಯೇ, ಆ ಆತ್ಮಾನಾತ್ಮ ವಿಚಾರವನ್ನು ಕೃಪೆಯಿಂದೆನಗೆ ಹೇಳಬೇಕು

**ಗುರುಗಳು:—** ಹೇ ಬಾಲಕಾ ಕೇಳು. ಆತ್ಮನು ಸಚ್ಚಿದಾನಂದ ರೂಪನಿದ್ದಾನೆ; ಹಾಗು ಅನಾತ್ಮನು ಅಸಜ್ಜಡದುಃಖರೂಪನಿದ್ದಾನೆ. ಯಾತರ ಯೋಗದಿಂ ಜನ್ಮ , ಬಾಲ್ಯ, ತಾರುಣ್ಯ, ವಾರ್ಧಕ್ಯ ಅವಯವ, ರೋಗ, ಮೃತ್ಯು ಮುಂತಾದ ವಿಕಾರಗಳು ಆತ್ಮಂಗವೆಂದು ತೋರುತ್ತದೋ; ಆ ಔಟ ಹಸ್ತ (ಮೂರುವರಿ ಮೊಳಗಳ) ಪರಿಮಾಣಯುಕ್ತ ಸ್ಥೂಲದೇಹವು ಅಸಜ್ಜಡ ದುಃಖ ರೂಪವದೆ.

**ಶಿಷ್ಯ:**— ಸ್ಥೂಲ ದೇಹವು ಪ್ರತ್ಯಕ್ಷ ಕಾಣಿಸುತ್ತಿದ್ದಾಗ್ಯೂ ಅಸತ್; ವ್ಯವಹರಿಸುತ್ತಿದ್ದಾಗ್ಯೂ ಜಡ, ಹಾಗು ಪ್ರಿಯವಾಗಿರುತ್ತಿದ್ದಾಗ್ಯೂ ದುಃಖರೂಪವದೆಂದು ಹ್ಯಾಗೆ ತಿಳಿಯಬೇಕು ?

**ಗುರುಗಳು:**- ಆಕಾಶದೊಳಗೆ ಗಂಧರ್ವ ನಗರಗಳು ಪ್ರತ್ಯಕ್ಷವಾಗಿ ತೋರುತ್ತಿದ್ದಾಗ್ಯೂ ಹ್ಯಾಗೆ ಅಸತ್ವೋ ! ರಜ್ಜು ಸರ್ಪವು ಪ್ರತ್ಯಕ್ಷ ಕಂಡಾಗ್ಯೂ ಅದು ಹ್ಯಾಗೆ ಅಸತ್ವೋ, ಮೃಗಜಲವು ಕಾಣಿಸಿದಾಗ್ಯೂ ಹ್ಯಾಗೆ ಅಸತ್ವೋ ಶುಕ್ತಿ ರಜತವು ಪ್ರತ್ಯಕ್ಷಕಂಡಾಗ್ಯೂ ಹ್ಯಾಗೆ ಅಸತ್ವೋ ಹಾಗೆಯೇ ಸ್ಥೂಲದೇಹವು, ಮತ್ತು ತತ್ಸಮವಾದ ಸರ್ವ ಸ್ಥೂಲ ಪ್ರಪಂಚ ಅಸತ್ವದೆ. ಹೇ ಶಿಷ್ಯ.- ದಾವಕಾಲದವರಿಗು ವೃತ್ತಿಯು ಈ ಪ್ರಪಂಚವಂ ನೋಡುತ್ತದೋ ತಾವತ್ಕಾಲ ಪರ್ಯಂತರ ಇದು ತೋರುತ್ತದೆ. ಹಾಗು ದಾವಾಗ್ಗೆ ವೃತ್ತಿಯು ವಿಮುಖವಾಗುತ್ತದೋ ಆಗ್ಗೆ ಅಭಾವವಂ ಪಡಿಯುತ್ತದೆ. ಆದಕಾರಣ ಸರ್ವ ಪ್ರಪಂಚವು ಸಮಷ್ಟಿ ವ್ಯಷ್ಟಿಮನೋವೃತ್ತಿಕಲ್ಪಿತವದೆ.

ಶಿಷ್ಯ:— ಮನೋವೃತ್ತಿಯು ವಿಮುಖವಾದಾಗ್ಗೆ ಪ್ರಪಂಚಾಭಾವವಾಗುತ್ತದೆಂಬನುಭವವು ದಾವಾಗ್ಗೆ ಬರುತ್ತದೆ.

ಗುರುಗಳು.- ಸ್ವಪ್ನಾವಸ್ಥೆಯೊಳಗೆ ಸ್ಥೂಲಪ್ರಪಂಚದ ಅಭಾವವಾಗುತ್ತದೆ. ಸುಷುಪ್ತಿಯಲ್ಲಿ ಸ್ಥೂಲ-ಸೂಕ್ಷ್ಮ ಪ್ರಪಂಚಂಗಳ ಅಭಾವವಾಗುತ್ತದೆ; ಹಾಗು ಸಮಾಧಿ ಅವಸ್ಥೆಯೊಳಗೆ ಸ್ಥೂಲ ಸೂಕ್ಷ್ಮ ಕಾರಣಂಗಳ ಅಭಾವವಾಗುತ್ತದೆ.

ಶಿಷ್ಯ - ಸುಷುಪ್ತಿಯೊಳಗೆ ಸ್ಥೂಲ ಪ್ರಪಂಚದ ಅಭಾವವಾಗುತ್ತದೆಂದು ನೀವು ಹೇಳುತ್ತೀರಿ; ಪರಂತು ಅದೆನಗೆ ಸತ್ಯವೆಂದು ಕಾಂಬುವದಿಲ್ಲ. ಯಾಕೆಂದೊಡೆ ಜನಾವನು ಮಲಗಿರುತ್ತಾನೋ, ಆತಂಗೆ ಸ್ಥೂಲ ಪ್ರಪಂಚವು ಕಾಂಬುವದಿಲ್ಲ; ಪರಂತು ಆ ಕಾಲದಲ್ಲಿಯೇ ಅನ್ಯ ಜಾಗ್ರುತರಿದ್ದವರಿಗೆ ಅದು ಮಲಗಿದ್ದ ಮನುಷ್ಯನ ದೇಹ ಸಹಿತವಾಗಿ ತೋರುತ್ತದೆ.

**ಗುರುಗಳು:**— ಎಲೈ ನಿನಗೆ ಹಿಂದೆಹೇಳಿದ್ದೆನಲ್ಲೋ ! ಸಕಲ ಸೃಷ್ಟಿಯು ಈಶ್ವರ ಕಲ್ಪಿತವವೆ, ಅದು ಜೀವಂಗೆ ಬಾಧಕವಲ್ಲ. ಜೀವ ಸೃಷ್ಟಿಯೇ ಜೀವಂಗೆ ಬಾಧಕವಿರುತ್ತದೆ; ಆದಕಾರಣ ಜೀವನು ಅದನ್ನೇ ನಾಶಮಾಡಬೇಕು. ಜೀವನು ಈಶಸೃಷ್ಟಿಯೊಳಗೆ ಅಹಂತೆ ಮಮತೆಗಳಂ ಹಿಡಿದು ಬದ್ಧನಾಗುತ್ತಾನೆ. ಅವುಗಳಂ ಹಿಡಿಯದಿದ್ದೊಡೆ ಈಶ ಸೃಷ್ಟಿಯು ಇವನಿಗೆ ಬಾಧಕವಾಗುವದಿಲ್ಲ. ಹ್ಯಾಗೆಂದೊಡೆ ಸ್ಥೂಲದೇಹಸಹಿತ ವೆಲ್ಲ ಸ್ಥೂಲಪ್ರಪಂಚವು ಸುಷುಪ್ತಿಯೊಳಗಿದ್ದು ಜೀವನ ವೃತ್ತಿಯು ಅದರ ಕಡಿಗಿರುವದಿಲ್ಲಾದ ಕಾರಣ ಅವನಿಗದರ ಸಂಬಂಧದ ಸುಖದುಃಖಗಳಾಗುವದಿಲ್ಲ. ವೃತ್ತಿಯು ಪುನಃ ಪ್ರಪಂಚಕ್ಕೆ ಸಮ್ಮುಖವಾದಕೂಡಲೆ ದುಃಖವಾಗಲಾರಂಭಿಸುತ್ತದೆ. ಜೀವನ ವೃತ್ತಿಯು ಅಂತರ್ಮುಖವಾದೊಡೆ ಧಾಗ

ದ್ವೇಷ, ಅಹಂತೆ, ಮಮತೆ ಮೊದಲು ಮಾಡಿಕೊಂಡು ಸಂಪೂರ್ಣ ಜೀವಸೃಷ್ಟಿಯು ಲಯವಾಗುತ್ತದೆ. ಅವರಂತೇ ಈಶ್ವರನ ಮಾಯಾ ವೃತ್ತಿಯು ವಿಮುಖವಾದಾಗ್ಗೆ ಈಶ ಸೃಷ್ಟಿಯು ಲಯವಾಗುತ್ತದೆ ಆದರೆ ಈಶಸೃಷ್ಟಿಯಾದರೂ ಮಿಥ್ಯವೇ ಇರುತ್ತದೆ ಪರಂತು ಈಶಸೃಷ್ಟಿಗೂ ಜೀವಂಗೂ ಸಂಬಂಧವೇ ಇಲ್ಲ. ಹ್ಯಾಗೆಂದೊಡೆ ಜೀವನ ವೃತ್ತಿಯು ಆತ್ಮಾಕಾರವಾದರೆ ಈಶಸೃಷ್ಟಿಯುಂಟೋ ಅಥವಾ ಇಲ್ಲವೋ ಇವರ ಭಾನವು ಆತಂಗಿರುವದೇ ಇಲ್ಲ. ಆದಕಾರಣ ಈಶಸೃಷ್ಟಿಗಳು ಅಸಂಖ್ಯಗಳಿದ್ದಾಗ್ಯೂ ವೃತ್ತಿರಹಿತನಾದ ಜೀವಂಗವುಗಳಿಲ್ಲೇ ಇಲ್ಲ ಮತ್ತು ಜೀವನ ಅಹಂ ಮಮವೃತ್ತಿಯೇ ಜೀವಂಗೆ ದುಃಖದಾಯಕವಕ್ಕೆ ಪ್ರಮಾಣವೇನೆಂದರೆ; ಯಾವ ಮನುಷ್ಯನು ಯಾವ ಪದಾರ್ಥದಮೇಲೆ ಅಹಂ ಮಮತ್ವವಂ ಮಾಡುತ್ತಾನೋ; ಆತಂಗೆ ಆ ಪದಾರ್ಥಕ್ಕೆ ಯಾರಾದರೂ ಪೀಡೆಯನ್ನು ಕೊಟ್ಟರೆ ಬಹಳೇ ದುಃಖವಾಗುತ್ತದೆ; ಹಾಗಾತನು ಆ ಪೀಡಕನ ದ್ವೇಷವಂ ಮಾಡುತ್ತಾನೆ ಪರಂತು ಆತನೇ ಯಾವಾಗ್ಗೆ ಆ ಮಮತ್ವವಂ ಬಿಡುತ್ತಾನೋ, ಆಮೇಲೆ ಯಾರಾದರೂ ಆ ಪದಾರ್ಥವಂ ನಷ್ಟ ಮಾಡಿದಾಗ್ಯೂ ಅವನಿಗೆ ದುಃಖವಾಗುವದಿಲ್ಲ; ಹಾಗು ಆತನು ನಷ್ಟಮಾಡುವವನ ದ್ವೇಷವನ್ನಾದರೂ ಮಾಡುವದಿಲ್ಲ. ಇದರ ಮೇಲಿಂದ ಸ್ಪಷ್ಟವಾಗಿ ತಿಳಿಯುತ್ತದಲ್ಲೋ, ಜೀವನ ಅಹಂ ಮಮವೃತ್ತಿಯೇ ಆತಂಗೆ ದುಃಖವನವದೆ; ಈಶಸೃಷ್ಟಿಯಲ್ಲಿ ಈಶಸೃಷ್ಟಿಯಾಗಲಿ, ಜೀವಸೃಷ್ಟಿಯಾಗಲಿ ವೃತ್ತಿರಹಿತನಾದ ಜೀವಗಂತೂ ತೋರುವದಿಲ್ಲ! ಆದರೆ ಸೃಷ್ಟಿಯು ಕಲ್ಪನೆಯ ಅಭಾವದಲ್ಲಿ ತೋರುವದಿಲ್ಲಾದಕಾರಣ ಅದು ಕಲ್ಪನಾಜನಿತವದೆ. ಹ್ಯಾಗೆ ಧ್ಯಾನ ಮಾಡುವವನು ಧ್ಯಾನದೃಷ್ಟಿಯಿಂದ ಹೃದಯದೊಳಗೆ ಕಲ್ಪಿಸಿದ ಧ್ಯೇಯಮೂರ್ತಿಯು ಕಡಿಗೆ ಆತನ ಮನಸ್ಸಿರುವವರೆಗೂ ಕಾಣಿಸುತ್ತದೋ, ಹಾಗು ಮನಸ್ಸೆರಡನೇ ಪದಾರ್ಥದ ಕಡಿಗೆ ಹೋದಕೂಡಲೇ ತತ್ಕಾಲ ನಷ್ಟವಾಗುತ್ತದೋ ಹಾಗೆಯೇ ಈ ದೇಹಸಹಿತವಾಗಿ ಪ್ರಪಂಚವೆಂದು ತಿಳಿಯಬೇಕು. ಇನ್ನು ಸುಷುಪ್ತ್ಯಾದಿ ಅವಸ್ಥೆಗಳೊಳಗೊಮ್ಮೆ ಪ್ರಪಂಚವು ಲಯವಂ ಹೊಂದಿದಮೇಲೆ ಅದು ಪುನಃ ಮನಸ್ಸು ಉತ್ಪನ್ನವಾದಕೂಡಲೇ ಯಾಕೆ ತೋರುತ್ತದೆ ? ಹೀಗೆ ನೀನೆಂದಲ್ಲಿ ಕೇಳು. ಬಹಳ ಕಾಲದ ವರೆಗೂ ಧ್ಯಾನಮಾಡುತ್ತ ಹೋದಲ್ಲಿ ಧ್ಯೇಯಮೂರ್ತಿಯು ಹೃದಯದೊಳಗೆ ದೃಢವಾಗಿ ನಿಲ್ಲುತ್ತದೆ; ಆಮೇಲೆ ಆ ಧ್ಯಾತನಿಗೆ ಆವಾವ ಕಾಲದಲ್ಲಿ ಸ್ಮರಣವಾಗುತ್ತದೋ, ಆ ಆ ಕಾಲದಲ್ಲಿ ಅದು ಸ್ಮರಣದ ಸಂಗಡೇ ತೋರುತ್ತದೆ, ಹ್ಯಾಗೋ; ಹಾಗೆಯೇ ಜೀವನು ಅನಾದಿಕಾಲದಿಂದ ಸೃಷ್ಟಿಯನ್ನು ನೋಡುತ್ತ ಬಂದಕಾರಣ ಅದು ಸತ್ಯವೆಂದು ಅವನಿಗೆ ಭಾವನೆಯಾಗಿರುತ್ತದೆ. ಹಾಗು ಅವನಿಗೆ ಸ್ಮರಣವಾದಕೂಡಲೇ, ಅದು ಸ್ಮರಣದ ಸಂಗಡೇ ತೋರುತ್ತದೆ. ಈ ಪ್ರಕಾರ ಸರ್ವಸೃಷ್ಟಿಯು ಮನೋಕಲ್ಪಿತವಿದ್ದಕಾರಣ ಅದು ಸತ್ಯತ್ವದಿಂ ಇಲ್ಲೇ ಇಲ್ಲ. ಇನ್ನು ಸೃಷ್ಟಿಯನ್ನು ಮಾಡಲಿಕ್ಕೆ ಮನಸ್ಸು ಅಸಮರ್ಥವದೆಂದು

ನಿನಗೆ ಸಂಶಯವು ಬಂದಲ್ಲಿ ಪ್ರತ್ಯಕ್ಷವೇ ನೋಡಲ್ಲೋ! ಸ್ವಪ್ನಾವಸ್ಥೆಯಲ್ಲಿ ಕಾಣಿಸುವಂಥ ಸೃಷ್ಟಿಯು ಅತಿಸೂಕ್ಷ್ಮವಾದ ಹಿತಾನಾಡಿಯಲ್ಲಿ ಕಾಣಿಸುತ್ತದೆ. ಅಲ್ಲಿ ಸೃಷ್ಟಿಯಿರುವದೆಂತು ಸಂಭವವೇ ಇಲ್ಲ. ಆದಕಾರಣ ಸ್ವಪ್ನದಲ್ಲಿ ಕಾಣಿಸುವಸೃಷ್ಟಿಯಿಲ್ಲೇ ಇಲ್ಲ. ಪರಂತು ಮನಸ್ಸು ಆ ಇಲ್ಲದಂಥ ಸೃಷ್ಟಿಯನ್ನು ಸಂಕೋಚಿತ ಮಾದ ಸ್ಥಲದಲ್ಲಿ ಸಹ ಮಾಡಲಿಕ್ಕೆ ಶಕ್ತವಾಗುತ್ತದೆ. ಹಾಗೊಂದು ಕ್ಷಣದಲ್ಲಿ ಅನೇಕ ಯುಗಗಳಾದಂತೆ ತೋರಿಸುತ್ತದೆ. ಆದಕಾರಣ ಮನಸ್ಸು ಅಘಟಿತಘಟನೆಗೆ ಸಮರ್ಥವದೆ. ಧ್ಯೇಯ ಮೂರ್ತಿಯು ಮನಸ್ಸಿನ ಹೊರ್ತು ಹ್ಯಾಗೆ ಇಲ್ಲೇ ಇಲ್ಲೋ, ಹಾಗೆಯೇ ಸ್ಥೂಲದೇಹಸಹಿತ ಸಕಲ ಪ್ರಪಂಚವು ಮನಸ್ಸಿನಹೊರ್ತು ಇಲ್ಲೇ ಇಲ್ಲ. ಇನ್ನು ಮೂಲತಃ ಇಲ್ಲದಂಥ ದೇಹವು ಜಡ ದುಃಖರೂಪವು ಹ್ಯಾಗೆ ಇದನ್ನು ಏನು ಹೇಳುವದು? ಯಾಕೆಂದೊಡೆ ಮೂಲತಃ ಇಲ್ಲದಂಥ ವಸ್ತುವಿನ ಗುಣದೋಷಂಗಳ ವಿಚಾರವಂ ಮಾಡುವದು ಸಂಭವಿಸುವದಿಲ್ಲ. ಪರಂತು ಮಂದ ಪ್ರಜ್ಞರಿಗೆ ಸ್ಥೂಲ ದೇಹದಲ್ಲಿ ಹೇಯಬುದ್ಧಿಯುತ್ಪನ್ನವಾಗಲೆಂದು ಈ ದೇಹವು ಜಡದುಃಖರೂಪವು ಹ್ಯಾಗಿದನ್ನು ಹೇಳುತ್ತೇನೆ, ಶ್ರವಣ ಮಾಡು. ಸ್ವಪ್ನ ಹಾಗು ಸುಷುಪ್ತಿ ಅವಸ್ಥೆಗಳಲ್ಲಿ ಮನೋವೃತ್ತಿಯು ಸಂಕೋಚಿತವಾದಲ್ಲಿ ಈ ದೇಹವು ಏನೂ ತಿಳಿಯುವದಿಲ್ಲ. ಮತ್ತು ಸಮಾಧಿಕಾಲದಲ್ಲ್ಯಾದರೂ ಏನೂ ತಿಳಿಯುವದಿಲ್ಲ. ಗಹನವಾದ ವಿಚಾರದಲ್ಲಿ ಮನೋವೃತ್ತಿಯು ಮಗ್ನವಾದಕಾಲಕ್ಕೆ ದಾರಾದರೂ ಬಂದರೂ ಕೂತರೂ ಮಾತಾಡಿದರೂ ಆವಿಚಾರದಲ್ಲಿ ಮಗ್ನನಾದ ಮನುಷ್ಯನು ತಿಳಿಯುವದಿಲ್ಲ. ಇದರ ದೆಶೆಯಿಂದ ದೇಹವು ಜಡವದೆ; ಮತ್ತು ದೇಹವೇ ಚೈತನ್ಯವಿದ್ದರೆ ಕಡಿದು ಬಿದ್ದವಯವದಲ್ಲಿ ಸಹ ಜ್ಞಾನವಿರುತ್ತಿತ್ತು, ಹಾಗು ಶವದಲ್ಲಿ ಸಹ ಜ್ಞಾನವಿರುತ್ತಿತ್ತು; ಪರಂತು ಹಾಗನುಭವಕ್ಕೆ ಬರುವದಿಲ್ಲಾದಕಾರಣ ದೇಹವು ಕೇವಲ ಜಡ ಕಾಷ್ಟ ಪಾಷಾಣಂಗಳಂತೇ ಅದೆ. ಇನ್ನು ಈ ದೇಹವು ದುಃಖರೂಪವು ಹ್ಯಾಗಿದನ್ನು ಹೇಳುತ್ತೇನೆ. ಈ ದೇಹವು ಉತ್ಪತ್ತಿಯಗಿಂತ ಪೂರ್ವದಲ್ಲಿ ಇಲ್ಲದಿದ್ದು, ಪಿತೃವೀರ್ಯ ಹಾಗು ಮಾತೃ ಶೋಣಿತಗಳು ಕೂಡಿದ್ದ ಕರ್ದಮದಿಂ ಉತ್ಪನ್ನವಾಗುತ್ತದೆ. ಮಾತೆಯ ಯೋನಿದ್ವಾರದಿಂದ ಹೊರಗೆ ಬರುತ್ತದೆ ಮುಂದೆ ಅನ್ನರಸದಿಂದ ಬೆಳೆಯುತ್ತದೆ. ಏನಕೇದಿವಸಗಳಿಂದ ತರುಣವಾಗುತ್ತದೆ; ಮುಂದೆ ಕ್ಷೀಣವಾಗುತ್ತದೆ, ಹಾಗು ನಾಶಹೊಂದುತ್ತದೆ. ಮತ್ತು ಇದು ಅನೇಕ ರೋಗಂಗಳಿಂದಗ್ರಸ್ತ, ವಿಷ್ಟಾಮೂತ್ರಂಗಳಿಂದವುಷ್ಟವಾಗುವಂಥದ್ದದೆ. ಇದರದೆಶೆಯಿಂದಿದು ದುಃಖರೂಪವದೆ, ಇದುಜಡವಿದ್ದು, ಚೈತನ್ಯರೂಪವಿದ್ದಂತೆ ಯಾಕೆ ತೋರುತ್ತದೆಂದಲ್ಲಿ ಕೇಳು, ಹ್ಯಾಗೊಬ್ಬನಟನು ವಸ್ತ್ರದಿಂದ ತನ್ನ ಸರ್ವಾಂಗವಂಮುಚ್ಚಿಕೊಂಡು, ಕುಣಿಯುತ್ತಿರಲಾಗಿ ನೋಡುವವ ಬಾಲಕನು; ಕುಣಿಯುವವನು ತೋರುವದಿಲ್ಲಾದಕಾರಣ ಆ ವಸ್ತ್ರವೇ ಕುಣಿಯುತ್ತದೆಂದು ತಿಳಿಯುತ್ತಾನೋ ಹಾಗೆಯೇ ಆತ್ಮ ಪ್ರತಿಬಿಂಬ

ಸಹಿತವಾದ ವೃತ್ತಿಯು ಮಾಯಾಕಲ್ಪಿತ ದೇಹರೂಪವಾದ ವಸ್ತ್ರದಿಂ ತನ್ನನ್ನು ಮುಚ್ಚಿಕೊಂಡು ವ್ಯವಹರಿಸುತ್ತಿರಲಾಗಿ ಮೂಢರು ಅವನ್ನು ತಿಳಿಯದೆ ದೇಹವೇ ವ್ಯವಹಾರಂಗಳಂ ಮಾಡುತ್ತದಾದಕಾರಣ ಅದು ಚೈತನ್ಯವೆಂದು ತಿಳಿಯುತ್ತಾರೆ. ಇನ್ನು ದೇಹವು ದುಃಖರೂಪವಿದ್ದು, ಪ್ರಿಯವೆಂದು ಯಾಕೆ ಕಂಡುಬರುತ್ತದೆಂದು ನೀನೆಂದಲ್ಲಿ ಕೇಳು. ಹ್ಯಾಗೆ ಮನುಷ್ಯನು ಸ್ವಲ್ಪ ನಿದ್ರೆಯ ಅಮಲಿನಲ್ಲಿದ್ದಾಗ್ಗೆ ಅವನ ಶತ್ರುವಿನ ಕೂಸನ್ನು ತಂದು ಯಾರಾದರೂ ಅವನ ಸಮೀಪ ಮಲಗಿಸಿದರೆ ಆ ಕೂಸು ಅವನಿಗೆ ಕೇವಲ ದ್ವೇಷವಿದ್ದಾಗ್ಯೂ ನಿದ್ರೆಯ ಅಮಲಿನಲ್ಲಿ ಅದು ಶತ್ರುವಿನ ಕೂಸೆಂದು ತಿಳಿಯದೆ ತನ್ನದ್ದೆಂದು ತಿಳಿದು ಹ್ಯಾಗೆ ಅವನ್ನು ಸಮೀಪ ಕರಿಗೊಂಡು ಅದರ ಮೇಲೆ ಪ್ರೀತಿಯಿಂದ ತಮ್ಮ ಕಯ್ಯನ್ನು ತಿರುಗಿಸುತ್ತಾನೋ? ಹಾಗೇಯೇ ತನ್ನ ಸ್ವರೂಪದ ಅಜ್ಞಾನರೂಪವಾದ ನಿದ್ರೆಯ ಅಮಲಿನಲ್ಲಿ ತನ್ನನ್ನು ತಿಳಿಯದೆ ದುಃಖರೂಪವಾದ ಸ್ಥೂಲದೇಹವೇ ನಾನೆಂದು ತಿಳಿದು ತನ್ನ ಮೇಲಿರುವ ಪ್ರೀತಿಯನ್ನು ಅದರ ಮೇಲೆ ಮಾಡುತ್ತಾನೆ. ಈ ಪ್ರಕಾರ ದೇಹವು ಅಸಜ್ಜಡ ದುಃಖರೂಪವದೆ; ಆದಕಾರಣ ಅದರಲ್ಲಿ ಭ್ರಾಂತಿಯಿಂದ ಹಿಡಿದಿದ್ದ ಅಹಂತೆ ಮಮತೆಗಳಂ ಬಿಡಬೇಕು. ಈ ಪ್ರಕರಣದಲ್ಲಿ ಮನೋವೃತ್ತಿ ಅಥವಾ ವೃತ್ತಿಯೆಂಬ ಶಬ್ದವು ಕ್ವಚಿತ್ ಸ್ಥಲದಲ್ಲಿ ಮಾಯಾಬುದ್ಧಿವಾಚಕವದೆ. ಮತ್ತು ಕ್ವಚಿತ್ ಸ್ಥಲದಲ್ಲಿ ಒಂದು ಮನೋವೃತ್ತಿಯ ವಾಚಕವದೆ; ಆದಕಾರಣ ವಾಕ್ಯಾರ್ಥದ ಮೇಲಿಂದ ಶಬ್ದಾರ್ಥವಂ ಮಾಡಬೇಕು.

**ಶಿಷ್ಯ**:— ಹೇ ಭವಭಯ ಸಂಹಾರಕನೇ ಸ್ಥೂಲದೇಹವು ಪಂಚೀಕೃತ ಪಂಚಭೂತಗಳದ್ದೆಂದು ನೀವು ಉಪಕ್ರಮವಂ ಹೇಳುವಾಗ್ಗೆ ಹೇಳಿದಿರಿ. ಆದರೆ ಆ ಪಂಚಭೂತಗಳೊಳಗಣ ಆವ ಭೂತದ್ದಾವ ಅಂಶವೆಂದು ತಿಳಿಯಬೇಕು?

**ಗುರುಗಳು**:— ಹೇ ಬಾಲಕಾ, ಅಸ್ಥಿ, ಮಾಂಸ, ನಾಡಿ, ರೋಮ, ತ್ವಚೆ ಇವೈದಂಶಗಳು ಸ್ಥೂಲ ದೇಹದಲ್ಲಿ ಪೃಥ್ವಿಯ ಅವೆ. ಯಾಕೆಂದೊಡೆ ಪೃಥ್ವಿಯು ಕಠಿಣವಿರುತ್ತದೆ, ಹಾಗೂ ಈ ಅಂಶಗಳಾದರೂ ಕಠಿಣಗಳವೆ. ರೇತ, ರಕ್ತ, ಲಾಲಾ, ಮೂತ್ರ, ಸ್ವೇದ, ಇವೈದಂಶಗಳು ನೀರಿನ ಅವೆ. ಹ್ಯಾಗೆಂದೊಡೆ ನೀರು ದ್ರವೀಭೂತವಿರುತ್ತದೆ, ಹಾಗು ಈ ಅಂಶಗಳಾದರೂ ದ್ರವೀಭೂತಗಳಿರುತ್ತವೆ. ಕ್ಷುಧೆ, ತೃಷೆ, ಆಲಸ್ಯ, ನಿದ್ರೆ, ಹಾಗು ಮೈಥುನ, ಇವೈದಂಶಗಳು ವೈಶ್ವಾನರದ ಅವೆ. ಹ್ಯಾಗೆಂದೊಡೆ ಅಗ್ನಿಯಲ್ಲಿ ದಹನಮಾಡುವ ಶಕ್ತಿಯದೆ, ಹಾಗು ಭುಕ್ತಾನ್ನೋದಕಗಳ ಪಚನವಾಗದೆ ಕ್ಷುಧೆ ಮುಂತಾದ್ದವುಗಳುತ್ಪನ್ನವಾಗುವದಿಲ್ಲ. ಚಲನ ಧಾವನ, ಪ್ರಸರಣ, ಆಕುಂಚನ, ಹಾಗು ನಿರೋಧನ ಇವೈದಂಶಗಳು ವಾಯುವಿನ ಅವೆ. ಹ್ಯಾಗೆಂದೊಡೆ ವಾಯುವಿನಲ್ಲಿ ಕ್ರಿಯಾಶಕ್ತಿಯಿರುತ್ತದೆ, ಹಾಗು ಈ ಅಂಶಗಳಾದರೂ ಕ್ರಿಯಾತ್ಮಕಗಳವೆ. ಕಾಮ, ಕ್ರೋಧ, ಶೋಕ, ಮೋಹ, ಭಯ,

ಇವೈದಂಶಗಳು ಆಕಾಶದ ಅವೆ. ಹ್ಯಾಗೆಂದೊಡೆ ಬ್ರಹ್ಮದ ಅಜ್ಞಾನದಿಂ ಆಕಾಶೋತ್ಪತ್ತಿಯಾಗುತ್ತದೆ, ಹಾಗು ಆತ್ಮಾಜ್ಞಾನದಿಂದೆ ಈ ಅಂಶಗಳಾಗುತ್ತವೆ, ಅಥವಾ ಹೃದಯಾಕಾಶದಲ್ಲಿ ಉತ್ಪನ್ನವಾಗುತ್ತವೆ, ಆದಕಾರಣ ಇವು ಆಕಾಶದಂಶಗಳೆಂದು ತಿಳಿಯಬೇಕು ಈ ಪ್ರಕಾರ ಪಂಚಭೂತಗಳಿಪ್ಪತ್ತೈದಂಶಗಳು ಕೂಡಿ ಸ್ಥೂಲದೇಹವಾಗುತ್ತದ.

**ಶಿಷ್ಯ:—** ಸ್ಥೂಲದೇಹದ ಧರ್ಮಗಳಾವವು ?

**ಗುರುಗಳು:-** ತಾಯಿತಂದಿಗಳು ಭಕ್ಷಿಸಿದಂಥ ಅನ್ನರಸದಿಂ ಉತ್ಪನ್ನವಾಗುವಂಥ ರೇತದಿಂದ ಹುಟ್ಟುವದು; ರೋಗಿಯು, ಅಥವಾ ನಿರೋಗಿಯಾಗುವದು; ಪುಷ್ಟ, ಅಥವಾ ಕೃಷವಾಗುವದು, ಕಪ್ಪು, ಕೆಂಪು, ಮುಂತಾದ್ದ ವರ್ಣಗಳೊಳಗಣ ದಾವಾದರೊಂದು ವರ್ಣದಿಂ ಯುಕ್ತವಾಗಿರುವದು; ಜಾತಿ ವರ್ಣ. ಆಶ್ರಮ, ಗೋತ್ರ, ಮುಂತಾದ್ದವುಗಳಿಂದ ಯುಕ್ತವಾಗಿರುವದು; ಶ್ರೇಷ್ಠತ್ವ, ಕನಿಷ್ಠತ್ವ, ಮಾತೃತ್ವ, ಪಿತೃತ್ವ, ಸುಂದರತ್ವ, ಕುರೂಪತ್ವ, ಅಸ್ತಿತ್ವ, ಬೆಳೆಯೋಣ, ತಾರುಣ್ಯ, ವಾರ್ಧಕ್ಯ, ಮೃತ್ಯು ಇತ್ಯಾದಿ ಧರ್ಮಗಳು ಸ್ಥೂಲದೇಹಕ್ಕಿವೆ, ಪರಂತು ನೀನು ಸ್ಥೂಲದೇಹದ ಸಂಬಂಧಿಕವಾದ ಪ್ರಶ್ನವಂ ಮಾಡುತ್ತಿ; ಇದರ ಮೇಲಿಂದ ಸ್ಥೂಲದೇಹವು ಇಲ್ಲೀ ಇಲ್ಲೆಂದು ನಾವು ಹೇಳಿದ್ದು ನಿನಗೆ ತಿಳಿಯಲಿಲ್ಲೆಂದು ಕಾಣಿಸುತ್ತದೆ.

**ಶಿಷ್ಯ:—** ಮಹಾರಾಜ, ಸ್ಥೂಲದೇಹವಿಲ್ಲೀ ಇಲ್ಲೆಂಬುವವನ್ನು ತಮ್ಮ ಹೇಳೋಣದ ಮೇಲಿಂದ ನಾನು ತಿಳಿದೆ; ಪರಂತು ಸರ್ವಜೀವಗಳಾದರೂ ನನ್ನಿಂದ ಭಿನ್ನಗಳಲ್ಲಾದ ಕಾರಣ ಮೂಢರಿಗೆ ದೇಹದಲ್ಲಿ ಹೇಯ ಬುದ್ಧಿಯುತ್ಪನ್ನವಾಗಲೆಂದು ಸ್ಥೂಲದೇಹದಲ್ಲಿ ಆವ ಭೂತದ ಆವ ಅಂಶವೆಂದು ತಿಳಿಯಬೇಕು ? ಮುಂತಾದ ಪ್ರಶ್ನಗಳಂ ಕೇಳಿದೆ. ಇದಾದರೂ ನನ್ನ ತಪ್ಪು ಇದ್ದೊಡೆ ಕ್ಷಮಿಸಬೇಕೆಂದು ಪ್ರಾರ್ಥಿಸುತ್ತೇನೆ.

# ೨೮ನೇ ಭಾಗ.

# ಆತ್ಮಾನಾತ್ಮ ವಿಚಾರವು.

## ೨ನೇ ಪ್ರಕರಣ.

## ಸೂಕ್ಷ್ಮದೇಹನಿರಸನಂ

### ೧ನೇ ವಿಭಾಗ.

### ಸೂಕ್ಷ್ಮದೇಹನಿರಸನದ ೧ನೇ ಪ್ರಕಾರವು.

**ಗುರುಗಳು:—** ವತ್ಸ, ಇದರೊಳಗೆ ನಿನ್ನದೇನನ್ಯಾಯವಿಲ್ಲ. ಇರಲಿ, ಈಗ ನಿನಗೆ ಯಾವ ದೇಹದ ನಿರಸನ ಮಾಡುವ ಕ್ರಮವಂ ಹೇಳಿದೆ, ಆ ದೇಹಕ್ಕೆ ಅನ್ನಮಯಕೋಶವೆಂದೆನ್ನುತ್ತಾರೆ ಇನ್ನು ಪಂಚಪ್ರಾಣಗಳು ಮತ್ತು ಪಂಚಕರ್ಮೇಂದ್ರಿಯಗಳು ಕೂಡಿ ಪ್ರಾಣಮಯ ಕೋಶವು; ಮನಸ್ಸು ಹಾಗು ಪಂಚಜ್ಞಾನೇಂದ್ರಿಯಗಳು ಕೂಡಿ ವಿಜ್ಞಾನಮಯ ಕೋಶವು. ಪ್ರಾಣಮಯಾದಿ ಮೂರು ಕೋಶಗಳು ಕೂಡಿದ್ದೇ ಸೂಕ್ಷ್ಮದೇಹವು. ಈ ಸೂಕ್ಷ್ಮದೇಹವಾದರೂ ಪಾಂಚಭೌತಿಕವಿದ್ದ ಕಾರಣ ಜಡವಿದೆ. ಮತ್ತು ಪಂಚಪ್ರಾಣಗಳು, ಹತ್ತು ಇಂದ್ರಿಯಗಳು ಮನಸ್ಸೊಂದು, ಹಾಗು ಬುದ್ಧಿಯೊಂದು; ಈ ಪ್ರಕಾರ ಸಪ್ತದಶಕಲಾತ್ಮಕವಿರುತ್ತದೆ; ಆದಕಾರಣ ಸಾವಯವ ಹಾಗು ಪರಿಚ್ಛಿನ್ನವಾದವಸ್ತು ವಿಕಾರಿಯಿರುವದು ಸ್ಪಷ್ಟವೇ ಅದೆ. ಆದಕಾರಣ ಈ ದೇಹವು ವಿಕಾರಿಯದೆ. ಹಾಗು ವಿಕಾರಿಯಿರುವವಾಂನ ದುಃಖರೂಪವಿದೆ. ವಿಕಾರಿಯಾದ ಪದಾರ್ಥಕ್ಕೆ ಉತ್ಪತ್ತಿ-ನಾಶಗಳಿರಲಿಕ್ಕೇ ಬೇಕು. ಆದಕಾರಣ ಈ ದೇಹಕ್ಕೆ ಉತ್ಪತ್ತಿ ನಾಶಗಳಿರುತ್ತವೆ. ಮತ್ತು ಉತ್ಪತ್ತಿ ನಾಶಗಳಿದ್ದ ಕಾರಣ ಈ ದೇಹವು ಅಸತ್‌ವಿದೆ. ಈ ದೇಹವು ಜಡವಿದ್ದ ಕಾರಣ ಇದಕ್ಕೆ ಸಾಕ್ಷಿಪ್ರೇರಕನಿದ್ದವನೇ ಆತ್ಮನು.

**ಶಿಷ್ಯ:—** ಸೂಕ್ಷ್ಮದೇಹದೊಳಗಣ ಯಾವ ಅಂಶವು ಯಾವ ಭೂತದ್ದದೆ? ಇದನ್ನೆನಗೆ ಕೃಪೆಯಿಂದ ಹೇಳಬೇಕು.

**ಗುರುಗಳು:—** ಅಪಂಚೀಕೃತ ( ಸೂಕ್ಷ್ಮ ) ಪಂಚಭೂತಂಗಳ ಸಮಷ್ಟಿ ಸತ್ವಾಂಶದಿಂ ಮನಬುದ್ಧ್ಯಾದಿಗಳುತ್ಪತ್ತಿಯೂ, ಸಮಷ್ಟಿರಾಜಸಾಂಶದಿಂ ಪಂಚಪ್ರಾಣಗಳುತ್ಪತ್ತಿಯೂ, ಆಯ್ತು. ಆಕಾಶದ ಸತ್ವಾಂಶದಿಂ ಶ್ರೋತ್ರೇಂದ್ರಿಯದ, ವಾಯುವಿನ ಸತ್ವಾಂಶದಿಂ ತ್ವಗಿಂದ್ರಿಯದ, ತೇಜದ ಸತ್ವಾಂಶದಿಂ ನೇತ್ರೇಂದ್ರಿಯದ, ಆಪಿನ ಸತ್ವಾಂಶದಿಂ ರಸನೇಂದ್ರಿಯದ, ಹಾಗು ಪೃಥ್ವಿಯ ಸತ್ವಾಂಶದಿಂ ಘ್ರಾಣೇಂದ್ರಿಯದುತ್ಪತ್ತಿಯಾಯ್ತು. ಆಕಾಶದ ರಾಜಸಾಂಶದಿಂದ ವಾಗಿಂದ್ರಿ

ಯುದ, ವಾಯುವಿನ ರಾಜಸಾಂಶದಿಂದ ಪಾಣೇಂದ್ರಿಯುದ, ತೇಜದ ರಾಜಸಾಂಶದಿಂ ಪಾದೇಂದ್ರಿಯುದ, ನೀರಿನ ರಾಜಸಾಂಶದಿಂದ ಉಪಸ್ಥೇಂದ್ರಿಯುದ, ಹಾಗು ಪೃಥ್ವಿಯ ರಾಜಸಾಂಶದಿಂ ಗುದೇಂದ್ರಿಯುದುತ್ಪತ್ತಿಯಾಯ್ತು. ಈ ಪ್ರಕಾರ ಅಪಂಚೀಕೃತ ಪಂಚಭೂತಂಗಳಿಂದ ಸೂಕ್ಷ್ಮದೇಹವು ಹುಟ್ಟಿತು.

**ಶಿಷ್ಯ:**— ಸೂಕ್ಷ್ಮದೇಹದ ಅಭಾವವು ಯಾವ ಅವಸ್ಥೆಯೊಳಗೆ ಅನುಭವಕ್ಕೆ ಬರುತ್ತದೆ?

**ಗುರುಗಳು:**—ಸುಷುಪ್ತಿಕಾಲದಲ್ಲಿ ಹಾಗು ಸಮಾಧಿಕಾಲದಲ್ಲಿ ಅನುಭವಕ್ಕೆ ಬರುತ್ತದೆ.

**ಶಿಷ್ಯ:**— ಸುಷುಪ್ತಿ ಕಾಲದಲ್ಲಿ ಸೂಕ್ಷ್ಮದೇಹದ ಅಭಾವವಾದನಂತರ ಪುನಃ ಜಾಗರಕಾಲದಲ್ಲಿ ಅದು ಎಲ್ಲಿಂದ ಬರುತ್ತದೆ?

**ಗುರುಗಳು:**— ಎಲೈ ಸುಷುಪ್ತಿಕಾಲದಲ್ಲಿ ಸೂಕ್ಷ್ಮದೇಹವು ಸಬೀಜವಾಗಿ ನಷ್ಟವಾಗುವದಿಲ್ಲ; ಒಂದು ಪಕ್ಷದಲ್ಲಿ ಸಬೀಜವಾಗಿ ನಷ್ಟವಾಗುತ್ತದೆಂದು ಮನ್ನಿಸಬೇಕಾದೊಡೆ ಮಲಗುವದರಿಂದೇ ಮೋಕ್ಷವಾಗಬೇಕಾದೀತು, ಮತ್ತು ಸತ್ಕರ್ಮ ಉಪಾಸನೆ, ಸದ್ಗುರು ಸಚ್ಛಾಸ್ತ್ರ, ಮಂತ್ರಾಗ್ರಂಥಗಳ ಜರೂರ ಇರುತ್ತಿದ್ದಿಲ್ಲ. ಪರಂತು ಸೂಕ್ಷ್ಮ ದೇಹವು ಸುಷುಪ್ತಿಯಲ್ಲಿ ಸಬೀಜವಾಗಿ ನಾಶಹೊಂದುವದಿಲ್ಲ. ಜಾಗರಸ್ವಪ್ನಗಳಲ್ಲಿ ಸೂಕ್ಷ್ಮದೇಹವು ವಿಸ್ತೃತವಾಗಿರುತ್ತದೆ; ಮತ್ತು ಸುಷುಪ್ತಿಯಲ್ಲಿ ಸಂಕೋಚಿತವೆಂದೊಡೆ ಇದರ ಬೀಜವಾದ ದಾವಸ್ವಾತ್ಮಾಜ್ಞಾನವೋ ಅದರದಾಕಾರವಾದ್ದಾಗಿರುತ್ತದೆ; ಆದಕಾರಣ ಪುನಃ ಜಾಗರಕಾಲದಲ್ಲಿ ಪ್ರಾರಬ್ಧ ಯೋಗದಿಂ ವಿಸ್ತೃತವಾಗುತ್ತದೆ.

**ಶಿಷ್ಯ:**— ಸುಷುಪ್ತಿಯೊಳಗೆ ಅಭಾವಹೊಂದಿದ್ದ ಸೂಕ್ಷ್ಮದೇಹವು ಜಾಗರಕಾಲದಲ್ಲಿ ಹ್ಯಾಗೆ ಪುನಃ ಉತ್ಪನ್ನವಾಗುತ್ತದೋ ಹಾಗೆಯೇ ಮೋಕ್ಷಾವಸ್ಥೆಯಲ್ಲಿ ಅಭಾವ ಹೊಂದಿದ್ದ ಸೂಕ್ಷ್ಮದೇಹವು ಪುನಃ ಉತ್ಪನ್ನವಾಗುತ್ತದೋ? ಇಲ್ಲೋ? ಉತ್ಪನ್ನವಾಗದಿದ್ದರೆ ಯಾಕಾಗುವದಿಲ್ಲ? ಉತ್ಪನ್ನವಾಗುತ್ತಿದ್ದರೆ ಜೀವಂಗೆ ಮೋಕ್ಷವಾಗುವದು ಸಂಭವಿಸುವದಿಲ್ಲ.

**ಗುರುಗಳು:**— ವತ್ಸ, ನಿನಗೀಗ ಹೇಳಲಿಲ್ಲೇನು? ಸುಷುಪ್ತಿಕಾಲದಲ್ಲಿ ಸ್ವಬೀಜವಾದ ಆವ ಅಜ್ಞಾನವೋ ತದಾಕಾರವಾಗಿ ಸೂಕ್ಷ್ಮದೇಹವಿರುತ್ತದೆ. ಆದಕಾರಣ ಪ್ರಾರಬ್ಧಾನುಸಾರವಾಗಿ ಪುನಃ ಉತ್ಪನ್ನವಾಗುತ್ತದೆ. ಅದರಂತೆ ಮೋಕ್ಷಾವಸ್ಥೆಯಲ್ಲಿ ಅದು ಅಜ್ಞಾನಾಕಾರವಾಗಿರುವದಿಲ್ಲ. ಕಾರ್ಯ ಕಾರಣ ಸಹಿತವಾಗಿ ನಷ್ಟವಾಗುತ್ತದೆ; ಆದಕಾರಣ ಪುನಃ ಉತ್ಪನ್ನವಾಗುವದಿಲ್ಲ. ಹೇ, ಶಿಷ್ಯ, ಮೋಕ್ಷವೆಂದೊಡೆ ಸ್ವಸ್ವರೂಪಾವಸ್ಥಾನವು. ಅದು ಸಕಲದೃಶ್ಯ ಭಾಸಾ

ತ್ಮಕ ಪ್ರಪಂಚಕ್ಕೆ ಕಾರಣವಾದಾವ ಅಜ್ಞಾನವೋ ಅವರ ನಾಶವಾಗದೆ ಪ್ರಾಪ್ತವಾಗುವದಿಲ್ಲ. ಆದಕಾರಣ ಮೋಕ್ಷಾವಸ್ಥೆಯೊಳಗೆ ಸರ್ವಪ್ರಪಂಚಕ್ಕೆ ಕಾರಣವಾದ ಅಜ್ಞಾನವುಳಿಯುವದಿಲ್ಲ ಮತ್ತು ಒಮ್ಮೆ ಬೀಜ ನಷ್ಟವಾದರೆ ಆ ವೃಕ್ಷವು ಪುನಃ ಉತ್ಪನ್ನವಾಗುವದಿಲ್ಲೋ, ಹಾಗೆಯೇ ಅಜ್ಞಾನವು ನಷ್ಟವಾದನಂತರ ಪುನಃ ಸೂಕ್ಷ್ಮದೇಹಾದಿ ಪ್ರಪಂಚವು ಉತ್ಪನ್ನವಾಗುವದಿಲ್ಲ.

## ೨೮ ನೇ ಭಾಗ.

### ಆತ್ಮಾನಾತ್ಮ ವಿಚಾರವು.

### ೨ ನೇ ಪ್ರಕರಣ.

### ಸೂಕ್ಷ್ಮದೇಹ ನಿರಸನವು.

#### ೨ ನೇ ವಿಭಾಗ.

### ಜ್ಞಾನಿಗಳಿಗೆ ಜೀವನ್ಮುಕ್ತಾವಸ್ಥೆಯೊಳಗೆ ಸ್ಥೂಲ ಸೂಕ್ಷ್ಮಾದಿ ಉಪಾಧಿಗಳಿರುವದಿಲ್ಲ.

**ಶಿಷ್ಯ**—ಜ್ಞಾನಿಗಳಿಗೆ ಜೀವನ್ಮುಕ್ತಾವಸ್ಥೆಯೊಳಗೆ ಸ್ಥೂಲಸೂಕ್ಷ್ಮಾದಿ ಉಪಾಧಿಗಳಿರುತ್ತವೆಯೋ? ಇಲ್ಲೋ? ಇರುವದಿಲ್ಲೆಂದೊಡೆ ಅವರು ವ್ಯವಹಾರವಂ ಹ್ಯಾಗೆ ಮಾಡುತ್ತಾರೆ? ಹಾಗಿರುತ್ತವೆಂದೊಡೆ ಅವುಗಳ ನಾಶವು ಹ್ಯಾಗಾಗುವದು?

**ಗುರುಗಳು:**— ಅವರ ದೃಷ್ಟಿಯಿಂದವರಿಗುಪಾಧಿಗಳಿರುವದಿಲ್ಲ, ಪರಂತು ಅಜ್ಞಾನಿಗಳ ದೃಷ್ಟಿಯಿಂದ ವಿದೇಹ ಕೈವಲ್ಯ ಪರ್ಯಂತರ ಪ್ರಾರಬ್ಧ ಯೋಗದಿಂ ಅವರ ಸ್ಥೂಲ ಸೂಕ್ಷ್ಮದೇಹಗಳಿರುತ್ತವೆ ಕಾರಣದೇಹವೊಂದೇ ಜ್ಞಾನವಾದ ಕೂಡಲೆ ನಷ್ಟವಾಗುತ್ತದೆ. ಪ್ರಾರಬ್ಧ ಕ್ಷಯವಾಗುವಾಗ್ಗೆ ಸ್ಥೂಲಸೂಕ್ಷ್ಮದೇಹಗಳಾದರೂ ನಷ್ಟವಾಗುತ್ತವೆ. ಹ್ಯಾಗೆ ಕಡಿದು ಹಾಕಿದ್ದ ವೃಕ್ಷವು ಪ್ರಾರಬ್ಧ ತೀರುವಪರ್ಯಂತರ ಇದ್ದು, ಮುಂದೆ ತನ್ನಿಂದ ತಾನೇ ನಷ್ಟವಾಗುತ್ತದೆ; ನಂತರ ಆ ವೃಕ್ಷದ ಬೊಡ್ಡೆಯು ಜೀವಂತವಿದ್ದರೆ ಅದು ಪುನಃ ಉತ್ಪನ್ನವಾಗುತ್ತದೋ, ಇಲ್ಲದಿದ್ದರೆ ಆಗುವದಿಲ್ಲೋ ಹಾಗೇ ಜ್ಞಾನಿಗಳ ಸ್ಥೂಲಸೂಕ್ಷ್ಮ ದೇಹಗಳು ಜ್ಞಾನವಾದನಂತರ ಏನಕೇ ಕಾಲದವರಿಗೂ ಪ್ರಾರಬ್ಧದಿಂದುಳಿಯುತ್ತವೆ. ಹಾಗು ಪ್ರಾರಬ್ಧದ ಸಂಗಡ ನಾಶಹೊಂದುತ್ತವೆ. ಆಮೇಲೆ ಅವುಗಳಿಗೆ ಮೂಲ [ಬೀಜ] ವಾದ ಸ್ವಾತ್ಮಾಜ್ಞಾನದನಾಶವು ಪೂರ್ವದಲ್ಲಿಯೇ ಬ್ರಹ್ಮಾತ್ಮೈಕ್ಯಜ್ಞಾನದಿಂದಳಿಗಿರುವದರಿಂದ ಅವು ಪುನಃ ಉದ್ಭವಿಸುವದಿಲ್ಲ. ಎಲ್ಲೈ ಇದು ಹುಟ್ಟುತ್ತದೋ ಇಲ್ಲೋ. ಎಂಬ ವಿಚಾರವಂಮಾಡಲಿಕ್ಕೆ ಕಾರಣವಿಲ್ಲ. ಯಾಕೆಂದೊಡೆ ಇದು ಕಲ್ಪನಾಮಾತ್ರವದೆ.

# ೨ ನೇ ಭಾಗ.

## ಆತ್ಮಾನಾತ್ಮವಿಚಾರವು.

## ೩ ನೇ ಪ್ರಕರಣ.

## ಸೂಕ್ಷ್ಮದೇಹನಿರಸನಂ.

### ೩ ನೇ ವಿಭಾಗ.

### ಸೂಕ್ಷ್ಮದೇಹವು ಕಲ್ಪನಾಮಾತ್ರವದೆ.

**ಶಿಷ್ಯ:**— ಹೇ ಗುರುಗಳೇ ಅದು ಹ್ಯಾಗೆ ?

**ಗುರುಗಳು** - ಕೇಳಯ್ಯಾ ಬಾಲಕಾ, ಆತ್ಮನ ಪೂರ್ಣತ್ವದ ಅಜ್ಞಾನದಿಂ ಅನಾದಿಕಾಲದಲ್ಲಿ ತಿಳಯುವಭಾವವೆಂದೊಡೆ ಕಲ್ಪನೆಯುತ್ಪನ್ನವಾಯ್ತು. ಅದು ಸಂಕಲ್ಪ ವಿಕಲ್ಪಾತ್ಮಕವಾದಲ್ಲಿ ಮನಸ್ಸು; ನಿಶ್ಚಯಾತ್ಮಕವಾದಲ್ಲಿ ಬುದ್ಧಿ, ಚಿಂತನಾತ್ಮಕವಾದಲ್ಲಿ ಚಿತ್ತ, ಅಭಿಮಾನಾತ್ಮಕವಾದಲ್ಲಿ ಅಹಂಕಾರ, ಈ ಪ್ರಕಾರ ನಾಮಗಳದಕ್ಕೇ ಬರುತ್ತವೆ. ಮತ್ತು ಅದೇ ಕಲ್ಪನೆಯು ಇಂದ್ರಿಯಗಳೊಳಗಿಂದ ವ್ಯವಹರಿಸುತ್ತಿರಲಾಗಿ ಪ್ರತ್ಯೇಕ ಇಂದ್ರಿಯದೊಳಗೆ ಅದಕ್ಕೆ ಆ ಆ ಇಂದ್ರಿಯದ ಹೆಸರು ಬರುತ್ತದೆ. ( ನೇತ್ರಗೋಲಕಗಳೊಳಗಿಂದ ವ್ಯವಹರಿಸುವಾಗ್ಗೆ ಚಕ್ಷು ) ಈ ಪ್ರಕಾರ ಒಂದೇ ಶುದ್ಧಕಲ್ಪನೆಗೆ ಸ್ಥಲಕ್ರಿಯಾದಿ ಭೇದಗಳಿಂದ ಸರ್ವ ಇಂದ್ರಿಯಂಗಳ ನಾಮಗಳೂ, ಅಂತಃಕರಣಂಗಳ ನಾಮಗಳೂ ಬಂದವು. ಏವಂ ಸಪ್ತದಶ ಕಲಾತ್ಮಕ ಸೂಕ್ಷ್ಮದೇಹವು ಕಲ್ಪನಾಮಾತ್ರವದೆ. ಹಾಗು ಸೂಕ್ಷ್ಮದೇಹವು ಹಿಡಿದಿದ್ದ ವಾಸನೆಯಿಂದ ಅಥವಾ ಮಾಡಿದ್ದ ಕರ್ಮದಿಂದ ಉತ್ಪನ್ನವಾಗುವಂಥ ಸ್ಥೂಲದೇಹವಾದರೂ ಕಲ್ಪನಾರೂಪವೇ ಆದೆ. ಕಲ್ಪನೆಯೆಂದೊಡೆ ಸೂಕ್ಷ್ಮ ದೇಹವು ( **ಚೈತನ್ಯಾಭಾಸ ಸಹಿತವಾದದ್ದು**) ತನ್ನ ಸಚ್ಚಿದಾನಂದ ರೂಪವಾದ ಸತ್ಯಸ್ವರೂಪವಂ ತಿಳಿಯದಿದ್ದರಿಂದ ವಿಷಯಗಳೊಳಗೆ ಪ್ರವೃತ್ತವಾದಾಗ್ಗೆ ವಿಷಯಗಳಿಂದೇ ಸುಖವೆಂದು ತಿಳಿಯುತ್ತದೆ. ಮತ್ತು ಅನುಭವಿಸಿದ ವಿಷಯಂಗಳ ವಾಸನೆಗಳಂ ಹಿಡಿಯುತ್ತದೆ. ಪ್ರಾರಬ್ಧಾಂತದಲ್ಲಿ ಸ್ಥೂಲದೇಹವು ನಷ್ಟವಾದನಂತರ ಸೂಕ್ಷ್ಮದೇಹವು ವಾಸನೆಯರೂಪದಿಂದ ಅಜ್ಞಾನದ ಆಶ್ರಯ ಮಾಡಿಕೊಂಡಿರುತ್ತದೆ; ಆದಕಾರಣ ಪುನಃವಿಸ್ತೃತವಾಗುತ್ತದೆ. ವಿಸ್ತೃತವಾಗುವದೇ ಜನ್ಮವು.

ಶ್ರೀ

# ೨೫ ನೇ ಭಾಗ.

# ಆತ್ಮಾನಾತ್ಮ ವಿಚಾರವು.

## ೨ ನೇ ಪ್ರಕರಣ.

## ಸೂಕ್ಷ್ಮ ದೇಹನಿರಸನ.

### ೪ನೇ ವಿಭಾಗ.

### ಜೀವನ್ಮುಕ್ತರಿಗೆ ಕೋಟ್ಯಾವಧಿ ವಾಸನೆಗಳು ಜನ್ಮಕ್ಕೆ ಬಾಧಕಗಳಲ್ಲ.

**ಶಿಷ್ಯ:—** ಹೇ ಗುರುಗಳೇ, ಜೀವನ್ಮುಕ್ತರು ವಿಷಯಂಗಳಂ ಭೋಗಿಸುತ್ತಾರೆ. ಆದರೆ ಅವರಿಗೆ ವಾಸನೆಗಳು ಯಾಕಿರುವದಿಲ್ಲ ? ಮತ್ತು ಇರುತ್ತಿದ್ದರೆ ಅವರಿಗೆ ಜನ್ಮವು ಯಾಕಾಗಬಾರದು ?

**ಗುರುಗಳು:—** ಸ್ವಸ್ವರೂಪದ ಜ್ಞಾನದಿಂದ ಅಜ್ಞಾನವು ನಷ್ಟವಾದನಂತರ ಕೋಟ್ಯಾವಧಿ ವಾಸನೆಗಳು ನಷ್ಟವಾದಾಗ್ಯೂ ಅವು ಜ್ಞಾನಿಗಳಿಗೆ ಬಾಧಕಗಳಾಗುವದಿಲ್ಲ. ಯಾಕೆಂದರೆ ಆ ಇಚ್ಛಿತ ವಿಷಯಗಳೊಳಗೆ, ಹಾಗು ವಾಸನೆಗಳೊಳಗೆ, ಮತ್ತು ವಾಸನೆ ಧರಿಸುವಂಥ ದೇಹದೊಳಗೆ ಸತ್ಯತ್ವ ಭಾವನೆಯಿರುವದಿಲ್ಲ. ಆದಕಾರಣ ಜ್ಞಾನಿಗಳ ವಾಸನೆಗಳು ಜನ್ಮಕ್ಕೆ ಕಾರಣವಾಗುವದಿಲ್ಲ. ಪ್ರಾರಬ್ಧ ಭೋಗಪ್ರವೃತ್ತಿಯಿಂದ ಮಾತ್ರ ಉಪಯೋಗಿಗಳಾಗಿರುತ್ತವೆ. ಭರ್ಜಿತವಾದ ಬೀಜವು ಹ್ಯಾಗೆ ಭಕ್ಷಣಕ್ಕೆ ಉಪಯೋಗಿಯಾದರೂ ಪರಂತು ಬಿತ್ತುವದಕ್ಕೆ ಉಪಯೋಗಿಯಾಗುವದಿಲ್ಲವೋ ? ಹಾಗೆಯೇ ಮಿಥ್ಯಾತ್ವಭಾವನೆಯಿಂದ ಸುಟ್ಟಿದ್ದ ಜ್ಞಾನಿಗಳ ವಾಸನೆಗಳು ಜನ್ಮಕ್ಕೆ ಕಾರಣಗಳಾಗದೆ ಪ್ರಾರಬ್ಧಭೋಗಾರ್ಥವಾಗಿ ಉಪಯೋಗಕ್ಕೆ ಬರುತ್ತವೆ. ಹಾಗು ಪಾಪ ಅಜ್ಞಾನದ ಆಶ್ರಯದಿಂದ ದೇಹನಾಶನಂತರ ವಾಸನೆಗಳಿರುವವು, ಆ ಅಜ್ಞಾನವಂ ಜ್ಞಾನಿಗಳು ಪೂರ್ವದಲ್ಲಿಯೇ ಜ್ಞಾನದಿಂದ ನಾಶಿಸಿರುತ್ತಾರೆ, ಆದಕಾರಣ ಅವರ ವಾಸನೆಗಳಿಗೆ ಮರಣೋತ್ತರದಲ್ಲಿ ಉಳಿಯಲಿಕ್ಕಾಧಾರ ವಿಲ್ಲಾದಕಾರಣ ಜ್ಞಾನಿಗಳ ವಾಸನೆಗಳು ಪ್ರಾರಬ್ಧಕ್ಷಯವಾದನಂತರ ಇರುವದಿಲ್ಲ. ಹಾಗು ವಾಸನಾಕ್ಷಯವಾದಕಾರಣ ಜನ್ಮವಾದರಾಗುವದಿಲ್ಲ. ಇನ್ನು ನೀನೆಂದಿಯಲ್ಲೋ! ಜ್ಞಾನಿಗಳಿಗೆ ಇಚ್ಛೆಯೇ ಇರಬಾರದು, ಅದರೆ ಕೇಳು. ಪ್ರಾರಬ್ಧದಿಂದ ಜ್ಞಾನಿಗಳಿಗಾದರೂ ಇಚ್ಛೆಯುತ್ಪನ್ನವಾಗುತ್ತದೆ. ಪರಂತು ಅವರಿಗೆ ಇಚ್ಛಿತಪದಾರ್ಥ, ಇಚ್ಛೆ, ಇಚ್ಛಿಸುವನಾದವನು ಇವುಗಳಲ್ಲಿ ಸತ್ಯತ್ವಬುದ್ಧಿಯಿರುವದಿಲ್ಲಾದಕಾರಣ ಅವರಿಗೆ ಆ ಇಚ್ಛೆಯಲ್ಲಿ ವಿಶೇಷ ಆಗ್ರಹ

ವಿರುವಲ್ಲಿ ಅವವರಿಂದವರಿಗೆ ಆ ಇಚ್ಛೆಗಳುಪಯೋಗ, ಪ್ರಾರಬ್ಧವಿರುವಪರ್ಯಂತರ ಪ್ರಾರಬ್ಧಭೋಗದ್ವಾರೆಯಿಂದಾಗುತ್ತದೆ, ಮುಂದಾಗುವದಿಲ್ಲ. ಹಾಗು ಜ್ಞಾನಿಗಳಿಗೆಚ್ಛೆಯೇ ಇಲವಾದವೆಂದು ಶಿಷ್ಟವಾಕ್ಯವಿದ್ದರೆ ಸ್ವೇಚ್ಛಾಪ್ರಾರಬ್ಧ, ಅನಿಚ್ಛಾಪ್ರಾರಬ್ಧ, ಹಾಗು ಪರೇಚ್ಛಾಪ್ರಾರಬ್ಧ ಈ ಪ್ರಕಾರ ತ್ರಿವಿಧವಾದ ಪ್ರಾರಬ್ಧವಂ ಪ್ರತಿಪಾದಿಸುವಂಥ ಶಾಸ್ತ್ರಗಳು ಮಿಥ್ಯವಾದವು.

## ೨೮ ನೇ ಭಾಗ.

## ಆತ್ಮಾನಾತ್ಮವಿಚಾರವು.

## ೨ ನೇ ಪ್ರಕರಣ.

## ಸೂಕ್ಷ್ಮ ದೇಹನಿರಸನವು.

### ೫ ನೇ ವಿಭಾಗ.

### ಸೂಕ್ಷ್ಮದೇಹ ನಿರಸನದೆರಡನೇಪ್ರಕಾರವು.

**ಶಿಷ್ಯ:**— ಹೇ, ಭವಭಯಹಾರಕನೇ, ಸೂಕ್ಷ್ಮದೇಹವು ಕಲ್ಪನಾಮಾತ್ರವದೆ; ಹಾಗದು ಜ್ಞಾನದಿಂ ನಷ್ಟವಾಗುತ್ತದೆಂದು ನೀವು ಹೇಳಿದಿರಾದರೆ ಕಲ್ಪನಾಕಾಲವಲ್ಲಾದರೂ ಆತ್ಮಂಗೆ ವಿಕಾರವಾಯಿತ್ತೋ? ಇಲ್ಲೋ?

**ಗುರುಗಳು:**- ಹೇ ಬಾಲಕ, ಯೋಗ್ಯಸ್ಮರಣವಂ ಮಾಡಿದಿ ನಾನು ನಿನಗೆ ಸೂಕ್ಷ್ಮದೇಹನಿರಸನವಂ ಹೇಳುತ್ತಿದ್ದೆ, ಪರಂತು ನಿನ್ನಪ್ರಶ್ನಂಗಳುತ್ತರಂಗಳಂ ಹೇಳುವಾಗ್ಗೆ ಜೀವನ್ಮುಕ್ತರಸ್ಥಿತಿಯು ಕಡೆಗೆ ತಿರಿಗಿದೆ. ಆದರೆ ಈಗ ಆ ಸೂಕ್ಷ್ಮದೇಹನಿರಸನವಂ ಹೇಳುತ್ತೇನೆ, ಕೇಳು. ಎಲಯ್ಯಾ, ಸೂಕ್ಷ್ಮದೇಹವೆಂದರೆ ಕಲ್ಪನೆಯು. ಅದು ಅಜ್ಞಾನದಿಂದದೆಂದು ಕಂಡುಬರುತ್ತದೆ. ಸತ್ಯತ್ವದಿಂದಿಲ್ಲೇ ಇಲ್ಲ. ಹ್ಯಾಗೆಂದೊಡೆ ನಿರ್ವಿಕಲ್ಪಕನಾದಾತ್ಮನಲ್ಲಿ ಅದು ಉದ್ಭವಿಸುವದು ಸಂಭವಿಸುವದಿಲ್ಲ. ಹಾಗು ಎರಡನೇ ಯಾವದರೂ ವಸ್ತುವಿನೊಳಗಾಯ್ತೇನೆಂಬ ವಿಚಾರಮಾಡಲಿಕ್ಕಾದರೂ ಕಾರಣವಿಲ್ಲ. ಯಾಕೆಂದೊಡೆ (**ಆತ್ಮಾವಾ ಇದಮೇಕ. ಏವಾಗ್ರ ಆಸೀನ್ನಾನ್ಯತ್ಕಿಂಚನ**) ಇತ್ಯಾದಿ ಶ್ರುತಿವಚನಂಗಳಮೇಲಿಂದ ಆತ್ಮನಹೊರ್ತು ಅನ್ಯವಸ್ತುವೇ ಇಲ್ಲ. ಇದರ ಮೇಲಿಂದ ನೋಡಲಾಗಿ ಕಲ್ಪನೆಗಾಶ್ರಯವೇ ಇಲ್ಲ. ಹಾಗಾಧಾರದ ಹೊರ್ತು ಭಾಸಿಸಿದ ಕಲ್ಪನೆಯು ಸತ್ಯವೋ ಮಿಥ್ಯವೋ? ಇದನ್ನು ನೀನೇ ವಿಚಾರಮಾಡಿ ನೋಡು, ರಜ್ಜುವಿನಮೇಲೆ ಭಾಸಿಸಿದ ಸರ್ಪವು ಅಜ್ಞಾನದಿಂದ ಭಾಸಿಸಿದ ಕಾರಣ ಅದು ಹ್ಯಾಗೆ ಅಸತ್ಯವೋ ಹಾಗೇಸೂಕ್ಷ್ಮ ದೇಹ, (ನಿರ್ವಿಕಲ್ಪಕನಾದಾತ್ಮನಲ್ಲಿ ಭಾಸಿಸಿದ ಕಲ್ಪನೆಯು) ಅಜ್ಞಾನದಿಂದ ಭಾಸಿಸಿದಕಾರಣ ಮಿಥ್ಯವೆಂದು ತಿಳಿಯಬೇಕು. ತನ್ನ

ಪೂರ್ಣತ್ವಾದಿಲಕ್ಷಣಗಳ ಅಜ್ಞಾನದಿಂ ಕಲ್ಪನೆಯು ಭಾಸಿಸಿತು. ಆದಕಾರಣ ಅದು ಮಿಥ್ಯವದೆ. ಹಾಗದು ತನ್ನ ಪೂರ್ಣತ್ವಾದಿಗಳ ಜ್ಞಾನದಿಂದ ನಷ್ಟವಾಗುವಂಥಾದ್ದದೆ. ಇನ್ನು ಜ್ಞಾನದಿಂದ ಹ್ಯಾಗೆ ನಷ್ಟವಾಗುತ್ತದೆ ? ಹೀಗೆ ನೀನೆಂದಲ್ಲಿ ಕೇಳು ನಾನು ಪರಿಪೂರ್ಣಬ್ರಹ್ಮವೇ ಇದ್ದೇನೆ; ನನ್ನ ಹೊರ್ತು ಏನೇನಿಲ್ಲ ಈ ಪ್ರಕಾರ ಜೀವನಿಗೆ ದೃಢಜ್ಞಾನವಾದಲ್ಲಿ ಅನ್ಯಪದಾರ್ಥವಂತು ಇಲ್ಲೇ ಇಲ್ಲ; ಹಾಗು ತಾನು ತನ್ನನ್ನು ತಿಳಿಯುವದು ಸಂಭವಿಸುವದಿಲ್ಲಾದ ಕಾರಣ ಜೀವನು ಸಹಜವಾಗಿಯೇ ತಿಳಿಯುವ ಮರಿಯುವ ಭಾವಗಳ ತ್ಯಾಗವಂ ಮಾಡುತ್ತಾನೆ. ಆ ಭಾವಗಳೇ ಕಲ್ಪನೆಯೆಂದು ತಿಳಿಯಬೇಕು. ಇರಲಿ. ಈ ಪ್ರಕಾರ ಕಲ್ಪನಾ ನಾಶವಾದಲ್ಲಿ ಜೀವನು ನಿರ್ವಿಕಲ್ಪಕನಾಗುತ್ತಾನೆ. ಆ ನಿರ್ವಿಕಲ್ಪ ಜ್ಞಾನಕ್ಕೆ ಏಕದೇಶಿತ್ವವು ಸಂಭವಿಸುವದಿಲ್ಲ ಹ್ಯಾಗೆಂದೊಡೆ ತಿಳಿಯುವ ಮರಿಯುವ ಭಾವಗಳಿಲ್ಲದೆ ದ್ವೈತಭಾವವು ಹ್ಯಾಗಿರುವದು ? ಯಾಕೆಂದಲ್ಲಿ ಕೇಳು. ತಿಳಿಯುವ ಮರಿಯುವ ಭಾವಗಳಿಲ್ಲದೆರಡನೇ ವಸ್ತುವದೆ, ಅಥವಾ ಇಲ್ಲೆಂಬ ಭಾವನೆಯಾಗುವದಿಲ್ಲ. ಹಾಗೆರಡನೇ ವಸ್ತುವದೆ ಅಥವಾ ಇಲ್ಲೆಂಬುವದೇ ದ್ವೈತಭಾವವು. ದ್ವೈತವದೆಂಬ ಭಾವನೆಯು ಹೊರ್ತು ತಿಳಿಯುವ ಭಾವ ಉತ್ಪನ್ನವಾಗುವದಿಲ್ಲ; ಹಾಗು ತಾನು ಏಕದೇಶಿಯೆಂಬ ಭಾವನೆಯ ಹೊರ್ತು ದ್ವೈತವದೆಂಬ ಭಾವನೆಯುತ್ಪನ್ನವಾಗುವದಿಲ್ಲ. ಜ್ಞಾನಿಗಳಿಗೆ ತಾನು ಏಕದೇಶೀಯೆಂಬ ಭಾವನೆಯಿರುವದಿಲ್ಲಾದಕಾರಣ ಕಲ್ಪನೆಯಾದರೂ ಇರುವದಿಲ್ಲ ಕಲ್ಪನೆಯಿಲ್ಲಾದ ಕಾರಣ ದ್ವೈತವಾದರಿರುವದಿಲ್ಲ. ಈ ಪ್ರಕಾರ ಜ್ಞಾನದಿಂದ ಕಲ್ಪನಾತ್ಯಾಗವಂ ಮಾಡಿದೊಡೆ ಜೀವನು ಪರಿಪೂರ್ಣ,ಅದ್ವೈತಮಾದ ಬ್ರಹ್ಮವೇತಾನಾಗುತ್ತಾನೆ.

## ೨೮ ನೇ ಭಾಗ.

## ಆತ್ಮಾನಾತ್ಮ ವಿಚಾರವು.

### ೩ ನೇ ಪ್ರಕರಣ

### ಕಾರಣ ದೇಹ ನಿರಸನಂ.

**ಶಿಷ್ಯ:—** ಹೇ ಗುರುರಾಜ, ಸ್ಥೂಲಸೂಕ್ಷ್ಮದೇಹಗಳಿಗೆ ಕಾರಣಮಾದ್ದಾವ ಅಜ್ಞಾನವೊ, ಅದರ ನಿರಸನವಂ ಹ್ಯಾಗೆ ಮಾಡಬೇಕು ?

**ಗುರುಗಳು:—** ಹೇ ವತ್ಸ, ನಿನ್ನ ಪ್ರಶ್ನದ ಉತ್ತರವಂ ಹೇಳುತ್ತೇನೆ; ಏಕಾಗ್ರಚಿತ್ತದಿಂ ಶ್ರವಣಮಾಡು. ನಾನಾರೆಂಬುವದನ್ನು ನಾನು ತಿಳಿಯುವದಿಲ್ಲೆಂಬುವದೇ ಅಜ್ಞಾನವು; ಅದೇ ಅವಿದ್ಯೆಯು; ಹಾಗದೇ ಕಾರಣದೇಹವು. ಸ್ಥೂಲಸೂಕ್ಷ್ಮದೇಹಗಳಿಗೆ ಕಾರಣವಾದ್ದರಿಂದ ಅಜ್ಞಾನಕ್ಕೆ ಕಾರಣದೇಹವೆಂದೆನ್ನುತ್ತಾರೆ; ಹಾಗು ಅದರಿಂ ಅಜ್ಞಾನಿಪುರುಷನು ಆತ್ಮನನ್ನು ತಿಳಿಯುವದಿಲ್ಲಾದ್ದರಿಂದ ಅದಕ್ಕೇ ಅವಿದ್ಯೆಯೆಂದೆನ್ನುತ್ತಾರೆ. **(ಶುದ್ಧಮಪಾಪ ವಿದ್ಧಂ)** ಇತ್ಯಾದಿ ವಚನಗಳಿಂದ ಶೃತಿಯಾದರೂ ಆತ್ಮನ ಶುದ್ಧತ್ವವಂ ಸ್ಪಷ್ಟವಾಗಿ ಹೇಳುತ್ತದೆ. ಇದರಮೇಲಿಂದಾತ್ಮಂಗಜ್ಞಾನವಿಲ್ಲ; ಹಾಗು ವಿಚಾರದಿಂನೋಡಲಾಗಿ

ಆತ್ಮಂಗಜ್ಞಾನವಾಗೇ ಇಲ್ಲೆಂಬುವದು ಸ್ಪಷ್ಟವಾಗಿ ತಿಳಿಯುತ್ತದೆ. ಹ್ಯಾಗೆಂದಲ್ಲಿ ಕೇಳು. ಆತ್ಮನಿಗೆ ಅಜ್ಞಾನವಾದೊಡೆ ಅಜ್ಞಾನವಾಯ್ತೆಂಬುವದನ್ನು ದಾವನು ತಿಳಿಯುತ್ತಿದ್ದನು ? ಅಜ್ಞಾನಕಾರ್ಯವಾದ ಸಕಲಪ್ರಪಂಚವಂ ದಾವನು ತಿಳಿಯುತ್ತಿದ್ದನು ? ಹಾಗು ಸೂಕ್ಷ್ಮದೇಹಕ್ಕೆ ಸುಷುಪ್ತ್ಯವಸ್ಥೆಯಲ್ಲಿ ಅಜ್ಞಾನಾಕಾರಸ್ಥಿತಿಯು ಪ್ರಾಪ್ತವಾದಾಗ್ಗೆ ಅದನ್ನು ದಾವನು ತಿಳಿಯುತ್ತಿದ್ದನು ? ಇದರ ಮೇಲಿಂದ ಆತ್ಮಂಗೆ ಅಜ್ಞಾನವಾಗೇ ಇಲ್ಲ.

**ಶಿಷ್ಯ:**— ಸುಷುಪ್ತ್ಯವಸ್ಥೆಯಲ್ಲಿ ಆತ್ಮನು ಅಜ್ಞಾನವಂ ಪ್ರಕಾಶಿಸುತ್ತಾನೆಂದು ನೀವು ಹೇಳುತ್ತೀರಾದರೆ ಹಾಗೆನ್ನನುಭವಕ್ಕೆ ಬರುವದಿಲ್ಲ.

**ಗುರುಗಳು:**— ಎಲೈ, ಸುಷುಪ್ತ್ಯವಸ್ಥೆಯಲ್ಲಿ ಸುಖಾಜ್ಞಾನಂಗಳಂ ಆತ್ಮನು ಪ್ರಕಾಶಿಸದಿದ್ದರೆ ಜಾಗರ ಪ್ರಾಪ್ತವಾದನಂತರ ಇಷ್ಟುಕಾಲಪರಿಗೂ ನಾನೇನು ತಿಳಿಯಲಿಲ್ಲ, ಹಾಗು ಸುಖರೂಪಸಿದ್ದೆ. ಈ ಪ್ರಕಾರದನುಭವವಂ ಜೀವನು ಹ್ಯಾಗೆಹೇಳುತ್ತಿದ್ದನ ? ಯಾಕೆಂದೊಡೆ ಜೀವನು ಸುಷುಪ್ತಿಯಲ್ಲಿ ಅಜ್ಞಾನಾಕಾರನಾಗಿರುತ್ತಾನೆ; ಆದಕಾರಣ ಆತಂಗೆ ಅಲ್ಲಯ ಅನುಭವವು ಹ್ಯಾಗೆ ಬರುವದು? ಹಾಗನನುಭೂತವಾದ ಸುಷುಪ್ತಿಯ ಅನುಭವವು ಆತನು ಹ್ಯಾಗೆ ಹೇಳುತ್ತಿದ್ದನು ? ಪರಂತು ಹೇಳುತ್ತಾನೆ. ಇದರ ಮೇಲಿಂದ ಆತ್ಮನು ಅಜ್ಞಾನವಂ ಪ್ರಕಾಶಿಸುತ್ತಾನೆಂಬುವದು ಸ್ಪಷ್ಟವದೆ

**ಶಿಷ್ಯ:**— ಹಾಗಾದರೆ ಜಾಗರಾವಸ್ಥೆಯೊಳಗಣ ಅನುಭವದ ಬೋಧವು ಅನುಭವಿಸುವವನ ಅಂತಃಕರಣಕ್ಕೆ ಹ್ಯಾಗಾಗುತ್ತದೋ, ಹಾಗು ಅವನು ಆ ಅನುಭವವಂ ಅದೇ ಅವಸ್ಥೆಯಲ್ಲಿ ಹ್ಯಾಗೆ ಹೇಳುತ್ತಾನೋ, ಹಾಗೆಯೇ ಸುಷುಪ್ತಿಯೊಳಗಣ ಅನುಭವದ ಬೋಧವು ಅಂತಃಕರಣಕ್ಕೆ ಯಾಕಾಗುವದಿಲ್ಲ ? ಹಾಗು ಅನುಭವವಂ ಅನುಭವಿಸುವವನು ಅದೇ ಅವಸ್ಥೆಯೊಳಗೆ ಹೇಳಲಿಕ್ಕೆ ಯಾಕೆ ಶಕ್ತನಾಗುವದಿಲ್ಲ ? ಇದನ್ನೆನಗೆ ದಯಮಾಡಿ ಹೇಳಬೇಕು.

**ಗುರುಗಳು** — ನಿನ್ನ ಪ್ರಶ್ನಂಗಳುತ್ತರವಂ ದೃಷ್ಟಾಂತದಿಂದ ಹೇಳುತ್ತೇನೆ. ಶ್ರವಣಮಾಡು. ಒಬ್ಬಸ್ತ್ರೀಯಳ ಅಲಂಕಾರವು ಭಾವಿಯೊಳಗೆ ಬಿತ್ತು. ಆಗ್ಗೆ ಅದನ್ನು ತೆಗೆಯಲಿಕ್ಕೆ ಒಬ್ಬಪುರುಷನಿಗೆ ಹೇಳಲಾಗಿ ಆ ಪುರುಷನು ನೀರೊಳಗೆ ಮುಳುಗಿ ಕೆಳಗೆ ಹೋದನು. ಪ್ರಾರಬ್ಧವಶಾತ್ ಅಲ್ಲಿ ಆ ಅಲಂಕಾರವು ಅವನಿಗೆ ಶಿಕ್ಕಿತು. ಆಗ್ಗೆ ಆ ಪುರುಷಂಗೆ ಈ ಆನಂದಕಾರಕ ವರ್ತಮಾನವಂ ಆ ಸ್ತ್ರೀಯಳಿಗೆ ದಾವಾಗ್ಗೆ ಹೇಳ್ವೆನೆಂಬ ಉತ್ಸುಕತೆಯುತ್ಪನ್ನವಾಯ್ತು; ಪರಂತು ವಾಗ್ದೇವತೆಯಾದಗ್ನಿಗೂ ಜಲಕ್ಕೂ ವಿರೋಧವಿದ್ದಕಾರಣ ಅಲ್ಲಿ ಮಾತಾಡಲಿಕ್ಕೆ ಬರಲಿಲ್ಲಾದಕಾರಣ ಮೇಲೆ ಬಂದಕೂಡಲಾತನು ಆಶುಭ ವರ್ತಮಾನವಂ ಹೇಳಿದನು. ಇಲ್ಲಿ ಜಲದೊಳಗಿದ್ದಾಗ್ಗೇ ಅವನು ಹೇಳಲಿಲ್ಲಾದಕಾರಣ ಅವನಿಗೆ ಜಲದೊಳಗಿರುವಪರ್ಯಂತರ ಅಲಂಕಾರವು ಶಿಕ್ಕಿದ್ದೇ ಇಲ್ಲ. ಹೀಗೆ ತಿಳಿಯುವದು ಹ್ಯಾಗೆ ಮೂರ್ಖತ್ವವೋ ಹಾಗೇ ಆತ್ಮನು ಸುಷುಪ್ತ್ಯವಸ್ಥೆಯೊಳಗಿದ್ದಾಗ್ಗೆ ಸುಖಾಜ್ಞಾನಗಳನುಭವವಂ ಹೇಳಲಿಲ್ಲಾದಕಾರಣ ಆತನಿಗೆ ಆಗ್ಗೆ ಅನುಭವವೇ ಆಗಿಲ್ಲ.

ಹೀಗೆಂಬುವದಾವರೂ ಮೂರ್ಖತ್ವವು. ಆತ್ಮನು ಸುಷುಪ್ತಿಯೊಳಗೆ ಸುಖಾಜ್ಞಾನಂಗಳಂ ಪ್ರಕಾಶಿಸುತ್ತಾನೆ, ಪರಂತು ಅಗ್ಗೆ ಅಂತಃಕರಣವು ಅಜ್ಞಾನಾಕಾರವಾಗಿರುವದರಿಂದ ಅದಕ್ಕೆ ಆ ಸುಖಾಜ್ಞಾನಂಗಳ ಬೋಧವಾಗುವದಿಲ್ಲ; ಹಾಗು ಆ ಅಂತಃಕರಣಾಂತರ್ಗತಗಳಾಗಿರುವಕಾರಣ ಸಕಲೇಂದ್ರಿಯಗಳಾದರೂ ಅಜ್ಞಾನಾಕಾರಗಳಾಗಿರುತ್ತವೆ, ಆದದರಿಂದ ಅಗ್ಗೆ ಹೇಳಲಿಕ್ಕಾದರೂ ಬರುವದಿಲ್ಲ; ಮತ್ತು ಹೇಳುವವ ಜೀವನಾದರೂ ಬುಧ್ಯಾಂತರ್ಗತತ್ವದಿಂ ಅಜ್ಞಾನಾಕಾರವಾಗಿರುವಕಾರಣ ಹೇಳುವದಾಗುವದಿಲ್ಲ ಪರಂತು ಅನನುಭೂತವಾದ ಪದಾರ್ಥಂಗಳ ಸ್ಮೃತಿಯಾಗುವದು ಸಂಭವಿಸುವದಿಲ್ಲ ಹಾಗು ಸುಖಾಜ್ಞಾನಗಳಸ್ಮೃತಿಯು ಜಾಗರದಲ್ಲಿ ಆಗುತ್ತದಾದಕಾರಣ ಅವುಗಳು ಅನನುಭೂತಗಳಲ್ಲ; ಅನುಭೂತಗಳವೆ. ಪರಂತು ಸುಷುಪ್ತಿಯಲ್ಲಿ ಜೀವಂಗೆ ಜ್ಞಾನವಾಗುವದು ಸಂಭವಿಸುವದಿಲ್ಲಾದಕಾರಣ ಆ ಅನುಭವವಂ ಆತ್ಮನೇ ಪ್ರಕಾಶಿಸುತ್ತಾನೆಂದು ಸ್ಪಷ್ಟವಾಗುತ್ತದೆ. ಹೇ ಶಿಷ್ಯ, ನೀನೇ ಹೇಳಲ್ಲೋ, ನಾನು ನನ್ನನ್ನು ತಿಳಿಯುವದಿಲ್ಲೆಂಬುವನ್ನು ಅಜ್ಞಾನವನ್ನು ಪ್ರಕಾಶಿಸುತ್ತದೋ? ಆತ್ಮಪ್ರಕಾಶಿಸುತ್ತಾನೋ ’

**ಶಿಷ್ಯ.**— ಅಜ್ಞಾನವೇನು ತಿಳಿಯಲಿಕ್ಕೆ ಸಮರ್ಥವಾಗದು; ಆದಕಾರಣ ತಾವು ಹೇಳಿದ ಪ್ರಕಾರ ಸ್ವಾತ್ಮಾಜ್ಞಾನವಂ ಪ್ರಕಾಶಿಸುವದಕ್ಕೆ ಅದು ಹ್ಯಾಗೆ ಸಮರ್ಥವಾದೀತು? ಆಗುವದಿಲ್ಲ. ಆದರೆ ಆತ್ಮನೇ ಪ್ರಕಾಶಿಸುತ್ತಾನೆ.

**ಗುರುಗಳು:**— ಆ ಶಿಷ್ಯ ಇರುವಪರ್ಯಂತರ ನಾನು ನನ್ನನ್ನು ತಿಳಿಯುವದಿಲ್ಲವೆಂಬುವದನ್ನು ಆತ್ಮನೇಪ್ರಕಾಶಿಸುತ್ತಾನೆ; ಹಾಗು ಸುಷುಪ್ತಿಯಲ್ಲಿ ಅಜ್ಞಾನವಿರುತ್ತದೆಂಬುವದನ್ನು ಆತ್ಮನೇಪ್ರಕಾಶಿಸುತ್ತಾನೆ. ಜಾಗರ, ಸ್ವಪ್ನ, ಸುಷುಪ್ತಿಯೆಂಬ ಅವಸ್ಥಾತ್ರಿತಯಕ್ಕು ಅದರೊಳಗಣ ಸರ್ವ ಪ್ರಪಂಚಕ್ಕೂ ಜ್ಞಾನಾಜ್ಞಾನಬಂಧ ಮೋಕ್ಷಗಳಿಗೂ ಆತ್ಮನೇ ಪ್ರಕಾಶಿಸುತ್ತಾನೆ. ಇಂಥ ನಿತ್ಯಪ್ರಕಾಶರೂಪನಾದ ಆತ್ಮನಿಗಜ್ಞಾನವದೆ, ಅಥವಾ ಆತ್ಮನೇ ಸ್ವತಃ ಅಜ್ಞಾನರೂಪನಿದ್ದಾನೆಂಬುವದು ಹ್ಯಾಗೆ ಯೋಗ್ಯವಾದೀತು?

**ಶಿಷ್ಯ:**— ಹಾಗೆಂಬುವದು ಸಂಭವಿಸುವದಿಲ್ಲ. ಆದರೆ ಆತ್ಮಂಗಜ್ಞಾನವಿಲ್ಲ; ಹಾಗು ಆತ್ಮನೇ ಅಜ್ಞಾನವಲ್ಲ; ಅಜ್ಞಾನಕ್ಕೆ ಸಾಕ್ಷಿಯಿದ್ದಾನೆ.

## ೨೮ ನೇ ಭಾಗ.

## ಆತ್ಮಾನಾತ್ಮ ವಿಚಾರವು.

### ೪ ನೇ ಪ್ರಕರಣ.

### ಮಹಾಕಾರಣ ದೇಹ ನಿರಸನಂ.

**ಗುರುಗಳು:**— ಹೇ ಶಿಷ್ಯ, ಸಾಕ್ಷಿತ್ವವಾದರೂ ಶುದ್ಧಾತ್ಮನಿಗಿಲ್ಲ; ಹ್ಯಾಗೆಂದರೆ ಆತ್ಮಂಗಜ್ಞಾನವಾಗೇ ಇಲ್ಲ; ಹಾಗೆರಡನೇ ಅಧಿಷ್ಠಾನವೇ ಇಲ್ಲ, ಆದಕಾರಣ ಅಜ್ಞಾನಕ್ಕೆ ಆಧಾರವೇ ಇಲ್ಲ; ಮತ್ತು ಆಧಾರದ ಹೊರ್ತು ಅಜ್ಞಾನಕ್ಕು

ತ್ಪತ್ತಿಯು ಸಂಭವಿಸುವದಿಲ್ಲ. ಇದರ ಮೇಲಿಂದ ಅಜ್ಞಾನವೇ ಉದ್ಭವಿಸಲಿಲ್ಲೆಂದಮೇಲೆ ಅದರ ಕಾರ್ಯವಾದರೂ ಉದ್ಭವಿಸಲಿಲ್ಲೆಂಬುವದು ಸ್ಪಷ್ಟವಾಗುತ್ತದೆ. ಈಪ್ರಕಾರ ಕಾರ್ಯಾಜ್ಞಾನವಾವಕಾಲದಲ್ಲ್ಯಾದರೂ ಆಗಿಲ್ಲೆಂದಮೇಲೆ ಆತ್ಮನು ಯಾವವಸ್ತುವಿಗೆ ಸಾಕ್ಷಿಯಾಗುವನು ? ಅವರೆ ಆತ್ಮಂಗೆ ಸಾಕ್ಷಿತ್ವವಾದರೂ ಇಲ್ಲ. ಈ ಪ್ರಕಾರ ಸಾಕ್ಷಿತ್ವರಹಿತ ನಿತ್ಯಸಾಕ್ಷಿಯೆಂಬೊಡ ಶುದ್ಧ ಚಿನ್ಮಾತ್ರ ( ನಿರ್ವಿಕಲ್ಪ ಜ್ಞಾನರೂಪ ) ಆತ್ಮನಿದ್ದಾನೆ.ಸಾಕ್ಷಿತ್ವಕ್ಕೇ ಮಹಾಕಾರಣದೇಹವೆಂದೆನ್ನುತ್ತಾರೆ.

ಈ ಪ್ರಕಾರ ಆತ್ಮಾನಾತ್ಮ ವಿಚಾರವಂ ನಿನಗೆ ಹೇಳಿದೇವೆ

## ೨೯ ನೇ ಭಾಗ.

## ಗ್ರಂಥಪರಿಸಮಾಪ್ತಿ.

**ಗುರುಗಳು:**— ಇಲ್ಲಿ ಜೀವನ ಸ್ಥೂಲದೇಹದ ನಿರಸನವಂ ಹ್ಯಾಗೆ ಹೇಳಲ್ಪಟ್ಟಿತೋ ಹಾಗೇ ಈಶ್ವರನ ವಿರಾಟ್‌ದೇಹದ ನಿರಸನವಂ ಮಾಡಬೇಕು. ಹ್ಯಾಗೆ ಜೀವನ ಸೂಕ್ಷ್ಮದೇಹದ ನಿರಸನವಂ ಹೇಳಲ್ಪಟ್ಟಿತೋ ಹಾಗೇ ಈಶ್ವರನ ಹಿರಣ್ಯಗರ್ಭನಾಮಕ ದೇಹದ ನಿರಸನವಂ ಮಾಡಬೇಕು. ಹ್ಯಾಗಿಲ್ಲಿ ಜೀವನ ಕಾರಣದೇಹದ ನಿರಸನವಂ ಹ್ಯಾಗೆ ಮಾಡಲ್ಪಟ್ಟಿತೋ, ಹಾಗೇ ಈಶ್ವರನ ಅವ್ಯಾಕೃತ ನಾಮಕ ದೇಹದ ನಿರಸನವಂಮಾಡಬೇಕು. ಮತ್ತು ಇಲ್ಲಿ ಜೀವನ ಮಹಾಕಾರಣದೇಹದ ನಿರಸನವಂ ಹ್ಯಾಗೆ ಮಾಡಲ್ಪಟ್ಟಿತೋ, ಹಾಗೇ ಈಶ್ವರನ ಮೂಲ ಪ್ರಕೃತಿ ನಾಮಕ ದೇಹದ ನಿರಸನವಂ ಮಾಡಬೇಕು. ಆಮೇಲೆ ಎರಡೂ ಪದಗಳ ಲಕ್ಷ್ಯಸ್ವರೂಪವೊಂದೇ ಅದ್ವೈತ ನಿರಾಕಾರ ನಿರ್ವಿಕಲ್ಪಕ ಜ್ಞಾನಘನ ಪರಿಪೂರ್ಣಬ್ರಹ್ಮವೇ ಉಳಿಯುತ್ತದೆ, ಅದೇ ತಾನೆಂದು ತಿಳಿಯಬೇಕು ಆಮೇಲೆ ತಿಳಿದದ್ದನ್ನು ಅಹೋರಾತ್ರಗಳಲ್ಲಿ ಅಭ್ಯಾಸಿಸಿ ದೃಢವಮಾಡಬೇಕು ದೃಢವಾದ ಅಹಂಬ್ರಹ್ಮಾಸ್ಮಿ ಎಂಬ ಪುರುಷಂಗೆ ವಿಧಿನಿಷೇಧಗಳಂ ಹೇಳುವದಕ್ಕೆ ವೇದಗಳಾದರೂ ಸಮರ್ಥಗಳಲ್ಲ, ಆದರೆ ಅಲ್ಲಿ ಅನ್ಯರು ಹ್ಯಾಗೆಸಮರ್ಥರಾದಾರು ? ಹಾಗು ಯಾವನಾದರೂ ಮೂರ್ಖನು ಅವನಿಗೆ ವಿಧಿನಿಷೇಧಂಗಳಂ ಹೇಳಿದಾಗ್ಯು ಅವನಿಗೆ ಫಲಂಗಳ ಜರೂರವಿಲ್ಲಾದಕಾರಣ ಅವನು ಅದನ್ನು ಮನ್ನಿಸುವದಿಲ್ಲ ಈ ಪ್ರಕಾರ ಜೀವನ್ಮುಕ್ತಂಗೆ ಹೇಳುವದು ಹಾಗು ಅವನು ಕೇಳುವದು ಉಳಿಯಲಿಲ್ಲಾದಕಾರಣ ಗ್ರಂಥವಂ ಸಮಾಪ್ತ ಮಾಡಬೇಕಾದೊಡೆ ಎಲ್ಲಿವಾಚೆಯೋ ಇಲ್ಲೋ ಅಲ್ಲಿಗ್ರಂಥೋತ್ಪತ್ತಿಯು ಹ್ಯಾಗಾಯ್ತು ? ಹಾಗೆಲ್ಲಿಉತ್ಪತ್ತಿಯೋ ಇಲ್ಲೋ, ಅಲ್ಲ ಸಮಾಪ್ತಿಯಾದರೂ ಹ್ಯಾಗೆಸಂಭವಿಸುವದು ?

ಇತಿ ಶ್ರೀಮದದ್ವೈತ ಸಚ್ಚಿದಾನಂದೇಂದ್ರ ಶ್ರೀಮತ್ಪದ್ಮನಾಭಯತೀಂದ್ರ
ವಿರಚಿತ **ದಾಸಬೋಧಃ**-

**ಶ್ರೀ ಸಮಾಪ್ತಃ ಶ್ರೀ**